views of the Mysore Legislature in the matter of formation of the Karnataka Province ;

(*b*) whether there has been any correspondence between the Government of Mysore and the Government of India in the abovesaid matter ;

(*c*) if there has been any such correspondence, whether they will be pleased to place the same on the table ?

A.—Sri K. CHENGALARAYA REDDY (Chief Minister).—

(*a*) No.

(*b*) No.

(*c*) Does not arise.

FINANCIAL BUSINESS.

Mr. SPEAKER (Sri V. Venkatappa).—The Hon'ble Minister for Finance will lay before the House the Schedules of Demands for Grants, and Supplementary and Additional Grants.

Schedules of Demands for Grants for 1950-51, Supplementary and Additional Grants for 1949-50.

Sri H. C. DASAPPA (Minister for Finance and Industries).--Sir, I beg to lay before the House the Schedule* of Demands for Grants for the year 1950-51, the Supplementary* Estimates and the Schedule of Demands for Supplementary and Additional Grants for the year year 1949-50.

THE BUDGET FOR 1950-51.

First Stage—General Discussion.

Mr. SPEAKER (Sri V. Venkatappa).—General Discussion on the Budget will be taken up now. ಇದಕ್ಕೆ ಕಾಲನಿಗದಿಯೇನಾದರೂ ಗೊತ್ತು ಮಾಡೋಣವೇ ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು (ಸಭಾನಾಯಕರು).—ಇವತ್ತೇ ಮೊದಲನೆಯ ದಿನ. ಆದ್ದರಿಂದ ಕಾಲ ನಿಗದಿಮಾಡಬೇಕಾದ ಪ್ರಮೇಯ ಬರಲಾರದು. ಮುಂದೆ ನೋಡಿಕೊಂಡು ನಿಗದಿ ಮಾಡಬಹುದು.

Mushir-ul-Mulk J. MAHOMED IMAM (Chitaldrug *cum* Tumkur—Muslim).—We leave it to the discretion of the Hon'ble Speaker.

ಶ್ರೀ ಕೆ. ಸುಬ್ಬರಾಯರು (ಬೆಂಗಳೂರು ಜಿಲ್ಲೆ).—ಮಾನ್ಯ ಅಧ್ಯಕ್ಷರೇ, 1950–51ನೇ ಸಾಲಿನ ಆಯವ್ಯಯದ ತಖ್ತೆಯನ್ನು ಮಾನ್ಯ ಮಂತ್ರಿಗಳು ಸಭೆಯ ಮುಂದೆ ಮಂಡಿಸಿರುವ ಸಂದರ್ಭದಲ್ಲಿ ಈ ಆಯವ್ಯಯದ ಚರ್ಚೆಯನ್ನು ಆರಂಭಿಸುವುದಕ್ಕೆ ನನಗೆ ಅವಕಾಶ ಕೊಟ್ಟಿರುವುದಕ್ಕಾಗಿ ನಾನು ಕೃತಜ್ಞನಾಗಿದ್ದೇನೆ.

ಶ್ರೀಮಾನ್ ದಾಸಪ್ಪನವರು ಆಯವ್ಯಯದ ತಖ್ತೆಯನ್ನು ಸಭೆಯ ಮುಂದಿಡುತ್ತಾ ಬಹಳ ಉದಾರವಾದ ಅಭಿಪ್ರಾಯಗಳನ್ನು ತಮ್ಮ ಭಾಷಣದ ಪೂರ್ವ ಮತ್ತು ಕಡೆಯ ಭಾಗದಲ್ಲಿ ವ್ಯಕ್ತಪಡಿಸಿದ್ದಾರೆ. ದೇಶದ ಇಂದಿನ ಪರಿಸ್ಥಿತಿಯಲ್ಲಿ ಎಷ್ಟುಮಟ್ಟಿಗೆ ಆಯವ್ಯಯವನ್ನು ಸರಿದೂಗಿಸುವುದಕ್ಕೆ ಸಾಧ್ಯವೋ ಅಷ್ಟನ್ನೂ ಕೂಡ ಬಹಳ ಚಾಕಚಕ್ಯತೆಯಿಂದ ಮಾಡಿದ್ದಾರೆ. ಮತ್ತು ಅದರ ಉದ್ದೇಶವನ್ನು ಸಹ ಬಹಳ ಸ್ವಾರಸ್ಯವಾಗಿ ತಮ್ಮ ಭಾಷಣದ ಕಡೆಯ ಭಾಗದಲ್ಲಿ ವ್ಯಕ್ತಪಡಿಸಿದ್ದಾರೆ. ಎಂದರೆ ಸಾಮಾನ್ಯ ಮನುಷ್ಯನ ಜೀವನದ ಮಟ್ಟ ಏರಬೇಕು ಮತ್ತು ಹಳ್ಳಿಗಾಡಿನ ವ್ಯವಸಾಯಗಾರರ ಮಟ್ಟ ಏರಬೇಕು. ಅದಕ್ಕೆ ಸರ್ಕಾರದವರು ಯಾವ ಕಾರ್ಯಕ್ರಮಗಳನ್ನು ಕೈಕೊಳ್ಳುವುದಕ್ಕೂ ಕೂಡ ಹಿಂಜರಿಯುವುದಿಲ್ಲ ಎಂಬ ಆಶೋತ್ತರ ಮತ್ತು ಭರವಸೆಯನ್ನು ತಮ್ಮ ಭಾಷಣದಲ್ಲಿ ವ್ಯಕ್ತಪಡಿಸಿದ್ದಾರೆ. ಸಾಮಾನ್ಯವಾಗಿ ಈ ಆಯವ್ಯಯವು ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಭರವಸೆಯನ್ನು ಎಷ್ಟುಮಟ್ಟಿಗೆ ಪೂರ್ತಿಗೊಳಿಸುತ್ತದೆ ಎಂಬುದನ್ನು ನಾವು ಸ್ವಲ್ಪ ವಿಮರ್ಶೆಮಾಡಿ ನೋಡಬೇಕಾಗುತ್ತದೆ. ಮೊದಲಲ್ಲಿ ಒಂದು ಪ್ರಾಮುಖ್ಯವಾದ ವಿಷಯವನ್ನು ಮಾನ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದು ಅನಿವಾರ್ಯವಾದಂಥ ಪ್ರಸಂಗದಲ್ಲಿ ಹುಟ್ಟಿರತಕ್ಕಂಥ ಪ್ರಶ್ನೆ. ಎಂದರೆ ಮೈಸೂರು ಭಾರತದಲ್ಲಿ ಒಂದು ಅಂಗವಾಗಿದ್ದು, ರಾಜ್ಯಾಂಗ ವ್ಯವಸ್ಥೆಯ ಪ್ರಕಾರ ಭಾರತ ದೇಶದ ಆಡಳಿತಕ್ಕನುಸಾರವಾಗಿ ಹಣಕಾಸಿನ ಒಪ್ಪಂದ ಮತ್ತು ಏರ್ಪಾಡು ಆಗಬೇಕಾದಂಥ ಅನಿವಾರ್ಯವಾದ ಪರಿಸ್ಥಿತಿ ಉದ್ಭವಿಸಿತು. ಇದರಿಂದ ನಮ್ಮ ದೇಶಕ್ಕೆ ಬಹುಮಟ್ಟಿಗೆ ತಾತ್ಕಾಲಿಕವಾಗಿ ಆಯವ್ಯಯವನ್ನು ತರುತ್ತಾ ಇದ್ದಂಥ ಮತ್ತು ಇನ್ನು ಮುಂದೂ ಆದಾಯಪ್ರದವಾಗಿದ್ದಂಥ ಮುಖ್ಯವಾದ ಮೂರು ಬಾಬುಗಳನ್ನು ಕೇಂದ್ರ ಸರ್ಕಾರದ ಆಡಳಿತಕ್ಕೆ ಬಿಟ್ಟುಕೊಡಬೇಕಾದ ಪ್ರಸಂಗ ಏರ್ಪಟ್ಟಿತು. ಅದರ ಜೊತೆಗೆ ಇನ್ನೂ ಕೆಲವು ಸಣ್ಣ ಸಣ್ಣ ಬಾಬುಗಳಲ್ಲಿ ಅದರ ಆದಾಯ ಮತ್ತು ಜವಾಬ್ದಾರಿಯು ಕೇಂದ್ರಕ್ಕೆ ಬಿಡಲ್ಪಟ್ಟಿದೆ ಎಂದು ಅವರ ಭಾಷಣದಲ್ಲಿ ಕೊಟ್ಟಿರುವ ಅಂಕಿ ಅಂಶಗಳಿಂದ ವ್ಯಕ್ತಪಡುತ್ತದೆ. ಆದರೆ ಮೇಲೆ ನೋಡಿದರೆ ಸಾಮಾನ್ಯವಾಗಿ ಇದು ಒಂದುಆಕ್ಷೇಪಣೀಯವಾದ ಭಾಗವೋ ಏನೋ ಎಂದು ತಿಳಿಯದೇ ಇದ್ದವರಿಗೆ, ಸಂದೇಹವುಂಟಾಗುತ್ತದೆ. ಏಕೆಂದರೆ ಬಹುಶಃ ನಮಗೆ ಈ ರೈಲ್ವೆ ಮತ್ತು ಆದಾಯ ತೆರಿಗೆ ಕಾಮಧೇನು ಕಲ್ಪವೃಕ್ಷಗಳಂತೆ ಸಹಾಯಕಾರಿಯಾಗಿದ್ದುವು. ಅದು ಹೊರಟುಹೋಗತಕ್ಕ ಕಾಲದಲ್ಲಿ ಅದನ್ನು ಬಿಟ್ಟುಕೊಟ್ಟು ಅದರ ಜೊತೆಗೆ ಇನ್ನೂ ಕೆಲವು ಬಾಬುಗಳನ್ನೂ ಬಿಟ್ಟುಕೊಡುವುದರಿಂದ ನಮ್ಮ ಹಣಕಾಸಿನ ಭದ್ರತೆಗೆ ಧಕ್ಕೆ ಬರುತ್ತದೆ, ಆರ್ಥಿಕಭದ್ರತೆಗೆ

---

* Printed copies supplied to Members separately.

ಅಭಾವವುಂಟಾಗುತ್ತದೆ, ತಳಹದಿಯನ್ನೇ ಕಲಕಿದಂತಾಗುತ್ತದೆ ಎಂದು ಸಂದೇಹವುಂಟಾಗುವುದು ಸ್ವಾಭಾವಿಕ.

ಆದರೆ ಇದರಲ್ಲಿ ಒಂದು ವಿಚಾರ. ಇದನ್ನೆಲ್ಲಾ ಕೂಲಂಕಷವಾಗಿ ವಿಮರ್ಶೆಮಾಡಿ ನೋಡಿದರೆ ಈ ಬಡ್ಜೆಟ್ಟಿನ ವಿಚಾರದಲ್ಲಿ ಯಾರೂ ಏನೂ ಸಂಶಯಪಡಬೇಕಾದ ಕಾರಣವೇ ಇಲ್ಲ. ಸರ್ಕಾರದವರೇ ಇದನ್ನೆಲ್ಲ ಒಂದು ನೀತಿಗನುಗುಣವಾಗಿ ಅನುಸರಿಸಿಯೇ ಮಾಡಬೇಕಾಗಿರುತ್ತೆ. ಆದರೆ ಈ ಸಂದರ್ಭದಲ್ಲಿ ಒಂದು ವಿಷಯವನ್ನು ಹೇಳಲಪೇಕ್ಷೆಪಡುತ್ತೇನೆ. ಈ ಬಡ್ಜೆಟ್ ಎಂಬುದು ಬಹಳ ಕಠಿಣವಾದ ಮತ್ತು ಜಟಿಲವಾದ ಪ್ರಶ್ನೆ. ಇದ ಎಲ್ಲರಿಗೂ ಹಿಡಿಯುವುದು ಬಹಳ ಕಷ್ಟ. ಒಂದು ದೇಶದ ಆಯವ್ಯಯವನ್ನು ಸಮತೂಗಿಸತಕ್ಕದ್ದು ಬಹಳ ಮಹತ್ವದ ವಿಚಾರವೆಂಬುದರಲ್ಲಿ, ಸಂದೇಹವೇ ಇಲ್ಲ. ಇದನ್ನು ಕಷ್ಟಪಟ್ಟು, ಅರಿತುನುರಿತವರು ಮತ್ತು ಮೇಧಾವಿಗಳಾದಂಥವರೂ ತಯಾರಿಸಿರತಕ್ಕದ್ದಾಗಿದೆ. ಇದನ್ನೇ ತಯಾರಿಸುವವರಿಗೆ ತುಂಬಾ ತಲೆನೋವುಂಟಾಗಿರಬಹುದು. ಇದು ಅಂಥಾ ಪ್ರಶ್ನೆ. ಇದನ್ನು ನಮ್ಮ ಮಾನ್ಯ ಮಂತ್ರಿಗಳೂ, ಕಾರ್ಯದರ್ಶಿಯವರೂ ಮತ್ತು ಅವರಿಗೆ ನೆರವಾಗಿರತಕ್ಕ ಮಹನೀಯರೆಲ್ಲರೂ ಬಹಳ ಕಷ್ಟಪಟ್ಟು ತಯಾರಿಸಿದ್ದಾರೆ. ಇದರಲ್ಲಿ ಯಾವ ಸಂದೇಹಕ್ಕೂ ಆಸ್ಪದವಿಲ್ಲದ ರೀತಿಯಲ್ಲಿ ಅವರು ಬಹಳ ವಿಶದವಾಗಿ ತಯಾರಿಸಿ ನಮ್ಮ ಮುಂದಿಟ್ಟಿರತಕ್ಕ ವಿಚಾರದಲ್ಲಿ ಅವರಿಗೆ ನಾವೆಲ್ಲರೂ ಬಹಳ ಕೃತಜ್ಞತೆಯನ್ನು ತೋರಿಸಬೇಕಾಗಿದೆ. ಆದರೆ ಇದರಲ್ಲಿ ಅಲ್ಲಲ್ಲೇ ಕೆಲವು ಸಂದೇಹಾಸ್ಪದವಾಗಿ ಕಂಡುಬರಬಹುದಾದ ಸಂದರ್ಭಗಳಿದ್ದುದರಿಂದ ಈ ಸಭೆಯ ಕೆಲವು ಮಹನೀಯರುಗಳು ಅವರ ಬಳಿ ಹೋಗಿ ಕೇಳಿಕೊಂಡಾಗ, ಅವರು ಬಹಳ ಸಂತೋಷದಿಂದ ಮತ್ತು ತಾಳ್ಮೆಯಿಂದ ಎಲ್ಲವನ್ನೂ ವಿವರಿಸಿದರು. ಆಗ ನಮಗೆಲ್ಲ ಯಾವ ಅನುಮಾನಕ್ಕೂ ಇದರಲ್ಲಿ ಆಸ್ಪದವಿಲ್ಲವೆಂಬುದು ಖಚಿತವಾಗಿ ಗೊತ್ತಾಯಿತು. ಇದಕ್ಕಾಗಿ ನಾನು ಇಲ್ಲಿನ ಎಲ್ಲರ ಪರವಾಗಿಯೂ, ಅವರಿಗೆ ಕೃತಜ್ಞತೆಗಳನ್ನರ್ಪಿಸುತ್ತೇನೆ. ಅವರು ಹಾಗೆ ನಮಗೆ ಇದರ ಗೂಢಾರ್ಥಗಳನ್ನೆಲ್ಲಾ ತಿಳಿಸದೆ ಇದ್ದಲ್ಲಿ ನಮ್ಮಲ್ಲಿ ಕೆಲವರಿಗೆ ಕೆಲವು ಕಡೆ ತಪ್ಪು ಅಭಿಪ್ರಾಯ ಮಾಡಬಹುದಾಗಿದ್ದ ಸಂದರ್ಭಗಳಿದ್ದುವು. ಏತಕ್ಕೆಂದರೆ ಈ ವಿಷಯವೇ ಅಂಥಾದ್ದು. ಇದನ್ನು ಗ್ರಹಣಮಾಡುವುದು ಬಹಳ ಕಷ್ಟ. ಇದು ನನ್ನ ಸ್ವಂತ ಅನುಭವದ ವಿಚಾರ.

ನಾವು ಈಗ ಯಾವ ಯಾವ ಬಾಬುಗಳನ್ನು ಕೇಂದ್ರ ಸರ್ಕಾರದವರಿಗೆ ಬಿಟ್ಟುಕೊಟ್ಟಿದ್ದೇವೆಯೋ ಆ ಬಾಬುಗಳ ಉತ್ಪತ್ತಿಯಲ್ಲಿ ನಮಗೆ ಮೊದಲನೆಯ 5 ವರ್ಷಗಳಲ್ಲಿ ಯಾವ ನಷ್ಟವೂ ಉಂಟಾಗುವುದಿಲ್ಲವೆಂಬುದು ಎದ್ದು ಕಾಣುತ್ತಿದೆ. ಇದಾದನಂತರ ಎರಡನೆಯದಾಗಿ ಆ 5 ವರ್ಷಗಳು ಕಳೆದ ಮೇಲೆ ಸೇಕಡ 5ರಂತೆ ಆ ಆದಾಯ ನಮಗೆ ಕಡಿಮೆಯಾಗುತ್ತಾ ಹೋಗಿ ಕೊನೆಯಲ್ಲೂ ಸಹ ನಮಗೆ ಅದರಿಂದ ಪ್ರತ್ಯಕ್ಷವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ಲಕ್ಷಾಂತರ ರೂಪಾಯಿಗಳು ಲಭಿಸುವಂತೆ ಇದೆ. ಇದೇನೋ ಬಹಳ ಜಟಿಲವಾದ ಪ್ರಶ್ನೆ. ಆದಾಗ್ಯೂ ನಮ್ಮ ಮಾನ್ಯ ಮಂತ್ರಿಗಳು ಕೇಂದ್ರ ಸರ್ಕಾರದವರೊಡನೆ ಬಹಳ ವಿಚಕ್ಷಣೆಯಿಂದ ಮತ್ತು ಜಾಣ್ಮೆಯಿಂದ ಚರ್ಚೆಮಾಡಿ ಇತ್ಯರ್ಥಪಡಿಸಿದ್ದಾರೆ. ನಮ್ಮ ಹಣಕಾಸಿನ ಪರಿಸ್ಥಿತಿಗೆ ಯಾವ ಧಕ್ಕೆಯೂ ಇಲ್ಲದಂತೆ ಇವರು ವರ್ತಿಸಿರುವುದು ಇವರ ಚಾಕಚಕ್ಯತೆಯನ್ನು ತೋರಿಸುತ್ತದೆ. ಮತ್ತು ಇದು ಇವರ ಚಾಣಾಕ್ಷತೆ ಎಂದು ಹೇಳಿದರೂ ಸಹ ಅದು ತಪ್ಪಾಗಲಾರದೆಂದು ಭಾವಿಸಿದ್ದೇನೆ. ಇವರು ಇದನ್ನೆಲ್ಲಾ ಬಹಳ ಬುದ್ಧಿವಂತಿಕೆಯಿಂದ ಮಾಡಿದ್ದಾರೆ. ಇವರು ಮಹಾ ಬುದ್ಧಿವಂತರು. ಈ ಪದಗಳನ್ನೆಲ್ಲಾ ನಾನು ನಮ್ಮ ಮಾನ್ಯ ಹಣಕಾಸಿನ ಮಂತ್ರಿಗಳ ಬಗ್ಗೆ ಉಪಯೋಗ ಮಾಡಿರುವುದರಿಂದ ಇದರಲ್ಲಿ ಯಾರೂ ಯಾವ ವ್ಯಂಗ್ಯಾರ್ಥವನ್ನೂ ಮಾಡಿಕೊಳ್ಳಬಾರದು. ನನ್ನ ಮನಸ್ಸಿನಲ್ಲಿ ಅಂಥಾ ವ್ಯಂಗ್ಯಾರ್ಥ ಖಂಡಿತವಾಗಿಯೂ ಇಲ್ಲ. ಈ ಆಯವ್ಯಯದ ವಿಚಾರದಲ್ಲಿ ಮತ್ತು ಕೇಂದ್ರ ವ್ಯವಹಾರದಲ್ಲಿ ನಮಗೆ ಯಾವ ಕೊರತೆಯೂ ಮತ್ತು ನ್ಯೂನತೆಯೂ ಉಂಟಾಗದ ರೀತಿಯಲ್ಲಿ ಅವರು ಈ ಎಲ್ಲಾ ಒಪ್ಪಂದಗಳನ್ನೂ ಮಾಡಿಕೊಂಡು ಬಂದಿರುವುದರಿಂದ ಅವರ ಜಾಣ್ಮೆ ಎಷ್ಟಿರುತ್ತೆಂಬುದನ್ನು ತಿಳಿಸಲು ಹಾಗೆ ಹೇಳಿದ್ದೇನೆಯೇ ಹೊರತು, ಅವರನ್ನು ಸ್ತೋತ್ರ ಮಾಡಬೇಕೆಂದಲ್ಲ. ಅವರ ಒಪ್ಪಂದ ಅಷ್ಟು ಬಿಗಿಯಾದ್ದಾಗಿರುವ ಕಾರಣ ನಮಗೆ ಇನ್ನು [illegible] ವರ್ಷಗಳ ತನಕ ಕೊಂಚಮಟ್ಟಿಗೆ ಹಣಕಾಸಿನ ಕೊರತೆ ಇದ್ದೇ ಇರುತ್ತದೆ. ಆದಾಗ್ಯೂ ನಮಗೆ ಕೇಂದ್ರದವರಿಂದ ಸಹಾಯದ್ರವ್ಯ ಬರುವಂತೆ ಒಂದು ದಾರಿಮಾಡಿಕೊಂಡೇ ಇದ್ದಾರೆ. ಇದು ಆದಾಯಕವಾಗಿರುತ್ತೆ. ಇದೇ ಅಂಶವನ್ನು ನೆನ್ನೆ ಮಾನ್ಯ ಮಂತ್ರಿಗಳೂ ಕೂಡ ತಮ್ಮ ಭಾಷಣದಲ್ಲಿ ವ್ಯಕ್ತಪಡಿಸಿದ್ದಾರೆ. ಇಷ್ಟೆಲ್ಲಾ ಹೊರಗಡೆಯ ಹಣಕಾಸಿನ ವಿಚಾರವಾಯಿತು.

ಇನ್ನು ನಮ್ಮ ಒಳದೇಶದ ಆಯವ್ಯಯವನ್ನು ಹೇಗೆ ಸಮದೂಗಿಸಬೇಕಾಗಿರುತ್ತೆಂಬ ವಿಷಯದಲ್ಲಿ ಕೆಲವು ಮಾತುಗಳನ್ನು ಹೇಳಬೇಕಾದುದು ನನ್ನ ಆದ್ಯಕರ್ತವ್ಯವಾಗಿರುತ್ತದೆ. ಇದುವರೆಗೂ ನಾವು ಅನುಸರಿಸಿಕೊಂಡು ಬಂದುದು ಒಂದು ದಾರಿ. ಆದರೆ ಇನ್ನು ಮುಂದಕ್ಕೆ ನಾವು ಅನುಸರಿಸಬೇಕಾದ್ದು ಇಲ್ಲಿಯತನಕ ನಡೆಸಿಕೊಂಡು ಬಂದಂತೆಯೇ ಇರುವುದಿಲ್ಲ. ಈಗ ಅನೇಕ ಬದಲಾವಣೆಗಳಾಗಿವೆ. ಈಗ ನಾವು ಹೊಸ ಸನ್ನಿವೇಶ, ಹೊಸ ವಾತಾವರಣ, ಹೊಸದಾದ ಒಂದು ರೀತಿ ನೀತಿ ಹೊಸ ಪದ್ಧತಿಗನುಸಾರವಾಗಿ ಹೇಗೆ ಹೊಂದಿಕೊಂಡು ಹೋಗಬೇಕೆಂಬುದನ್ನು, ಅದಕ್ಕೆ ಸೂಕ್ತವಾದ ಮಾರ್ಗಗಳೇನು ಎಂಬುದನ್ನೆಲ್ಲಾ ವಿಮರ್ಶೆ ಮಾಡಬೇಕಾಗಿದೆ. ಈ ಬಗ್ಗೆ ಸರ್ಕಾರದವರು ತಮ್ಮ ಹಣಕಾಸಿನ ಸ್ಥಿತಿಗಳನ್ನು ಭದ್ರಪಡಿಸಿಕೊಳ್ಳಲು ಆದಾಯ ಬರತಕ್ಕ ಹೊಸ ಹೊಸ ದಾರಿಗಳನ್ನೂ ಮತ್ತು ರೀತಿ ನೀತಿಗಳನ್ನೂ ಹುಡುಕಿಕೊಳ್ಳುವುದರ ಜೊತೆಗೆ, ಅದೇ ರೀತಿಯಲ್ಲಿ ಯಾವ ಯಾವ ಬಾಬುಗಳಲ್ಲಿ ಈಗ ಹಣ ಹೆಚ್ಚು ಹೆಚ್ಚಾಗಿ ವ್ಯಯವಾಗುತ್ತಿದೆ, ಯಾವ ಯಾವ ಬಾಬುಗಳಲ್ಲಿ ಖರ್ಚನ್ನು ಎಷ್ಟೆಷ್ಟರಮಟ್ಟಿಗೆ ಕಡಿಮೆಮಾಡಬಹುದು, ಹೀಗೆಲ್ಲಾ ಮಾಡಿದನಂತರ ಎಷ್ಟು ಹಣ ಉಳಿತಾಯವಾದೀತು ಎಂಬೀ ಅಂಶಗಳನ್ನೆಲ್ಲಾ ಬಹಳ ಕೂಲಂಕಷವಾಗಿಯೂ ಮತ್ತು ಬಹಳ ಜಾಗರೂಕತೆಯಿಂದಲೂ ಪರಿಶೀಲಸಬೇಕಾಗಿದೆ. ಆ ಬಗ್ಗೆ ನಾವೆಲ್ಲರೂ ಸರ್ಕಾರದವರಿಗೆ ಈಗ ನಮ್ಮ ಸಲಹೆಗಳನ್ನು ನೀಡಬೇಕಾಗಿದೆ.

ಹೀಗೆ ನಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳುವುದರ ಜೊತೆಗೆ ನಮ್ಮ ಆಹಾರ ಸ್ವಪರಿಪೂರ್ಣತೆಯನ್ನು ಕೂಡ ನಾವು ಹೊಂದಲು ರಾಜಮಾರ್ಗವನ್ನು ಕಂಡುಹಿಡಿಯಲೇ ಬೇಕಾಗಿದೆ. ಇಲ್ಲವಾದರೆ ನಮಗೆ ಕಷ್ಟ ತಪ್ಪುವುದಿಲ್ಲವೆಂಬುದು ಶತಸ್ಸಿದ್ಧ. ಈ ವಿಷಯವಾಗಿ ನಾನು ಅಷ್ಟು ಹೆಚ್ಚಾಗಿ ಹೇಳಬೇಕಾದ ಅಗತ್ಯವಿಲ್ಲವೆಂದು ಭಾವಿಸುತ್ತೇನೆ. ಯಾವ ಯಾವ ಬಾಬುಗಳಲ್ಲಿ ದುಂದಾಗಿ ಖರ್ಚಾಗುತ್ತಿದೆಯೋ ಅಥವಾ ಖರ್ಚನ್ನು ತಪ್ಪಿಸಬೇಕೆಂದು ಯೋಚನೆಮಾಡಲು ಹೊರಟಾಗ ಮೊದಲು ಅಂಥಾ ಹೆಚ್ಚು ಖರ್ಚಾಗುತ್ತಿರುವ ಬಾಬು ಈ

ಆಹಾರದ ಇಲಾಖೆಯೇ ಎಂದು ಎಲ್ಲರ ಕಣ್ಣೂ ಅದರ ಮೇಲೆಯೇ ಹೋಗುತ್ತದೆ. ಮೊನ್ನೆ ನಮ್ಮ ಮಾನ್ಯ ಹಣಕಾಸಿನ ಮಂತ್ರಿಗಳು, ಅವರ ಭಾಷಣದಲ್ಲಿ ಕೂಡ ಈ ಬಾಬಿಗೆ ವರ್ಷಂಪ್ರತಿ ಎರಡು ಕೋಟಿ ರೂಪಾಯಿಗಳು ವೆಚ್ಚವಾಗುತ್ತಿರುವಂತೆ ಅಪ್ಪಣೆಕೊಡಿಸಿದ್ದಾರೆ. ಆದಕಾರಣ ನಾವು ಈ ಬಾಬಿನಲ್ಲಿ ಸ್ವಪರಿಪೂರ್ಣತೆಯನ್ನು ಹೊಂದಿದರೆ ನಮಗೆ ಹೀಗೆ ಅಪಾರವಾಗಿ ವ್ಯಯವಾಗುತ್ತಿರುವ ಹಣವನ್ನು ಈ ಬಾಬಿನಲ್ಲಿ ಉಳಿತಾಯ ಮಾಡಬಹುದು. ಅದಕ್ಕಾಗಿ ಅವರು ತಮ್ಮ ಅಭಿಪ್ರಾಯದ ಪ್ರಕಾರ 1952ರ ಹೊತ್ತಿಗೆ ಸ್ವಪರಿಪೂರ್ಣತೆಯನ್ನು ಹೊಂದಲು ಹೆಚ್ಚು ಹಣವನ್ನು ಖರ್ಚುಮಾಡಲು ಪ್ರಯತ್ನಿಸಿರುವುದು ಸಹಜವಾಗಿಯೇ ಇದೆ. ಈ ಬಾಬಿನಲ್ಲಿ ನಮಗೆ ಹಣವು ನಾನಾ ರೀತಿಯಲ್ಲಿ ವ್ಯಯವಾಗುತ್ತಿದೆ. ಒಂದನೆಯದಾಗಿ ಪರದೇಶದಿಂದ ಹೆಚ್ಚಿನ ಧಾರಣೆ ಕೊಟ್ಟು ತರಿಸುವುದು, ಎರಡನೆಯದಾಗಿ ಸಿಬ್ಬಂದಿಯ ಖರ್ಚು ಮತ್ತು ಕೊನೆಯದಾಗಿ ಈ ಸಾಮಾಗ್ರಿಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸುವುದು. ಹೀಗೆ ದುಡ್ಡು ವಿಪರೀತ ಖರ್ಚಾಗುತ್ತಿದೆ. ಆಗಾಗ್ಯೆ ದೊಡ್ಡ ದೊಡ್ಡ ಕೆರೆಗಳಿಗೆ ' ಕೊಳೆ ' ಬೀಳುತ್ತದೆಂದು ಹೇಳುತ್ತಾರೆ. ಹಾಗೆಯೇ ಇಲ್ಲಿಯೂ ನಾವು ಇದನ್ನು ಸರಿಗಟ್ಟಿಕೊಳ್ಳದೇಹೋದರೆ ನಮ್ಮ ಹಣಕಾಸಿನ ವಿಚಾರದಲ್ಲೂ ಕೋಟ್ಯಾಂತರ ರೂಪಾಯಿಗಳ ಕೊಳೆ ಬೀಳಬಹುದೆಂದು ತಿಳಿಸುತ್ತೇನೆ. ಇದರಿಂದ ಈಗ ಎಲ್ಲರಿಗೂ ಗೊತ್ತಿರುವಂತೆ ಕೋಟ್ಯಾಂತರ ರೂಪಾಯಿಗಳು ನಷ್ಟವಾಗುತ್ತಿದೆ. ನಾವು ಈ ಬಾಬು ಒಂದರಲ್ಲಿ ಸ್ವಪರಿಪೂರ್ಣತೆ ಹೊಂದಿದರೆ ನಾವು ಕೋಟ್ಯಾಂತರ ರೂಪಾಯಿಗಳನ್ನು ಸಂಪಾದಿಸಿದಂತೆ ಆಗುತ್ತದೆ. ಇನ್ನು ಈ ಆಹಾರ ಸಾಮಾಗ್ರಿಗಳನ್ನು ತರಿಸುವ ವಿಚಾರ ಮತ್ತು ಅದರ ಹಂಚಿಕೆಯ ವಿಚಾರ—ಇವುಗಳಲ್ಲಿಯೂ ಸಹ ತೊಂದರೆಯಿರುವುದು ಸರ್ಕಾರದವರ ಗಮನಕ್ಕೆ ಬಂದಿದೆ. ಆದರೆ ಅದನ್ನೆಲ್ಲಾ ಸರಿಪಡಿಸುವುದಕ್ಕಾಗಿ ಸರ್ಕಾರದವರು ಆಶ್ವಾಸನೆ ಮತ್ತು ಭರವಸೆಗಳನ್ನು ನೀಡಿದ್ದಾರೆ.

'ಮೂಗಿರುವ ತನಕ ನೆಗಡಿ ತಪ್ಪದು ' ಎಂಬಂತೆ ಈ ಕಂಟ್ರೋಲ್ ಇರುವತನಕ ಅಥವಾ ಇದನ್ನು ಎಲ್ಲಿಯವರೆಗೆ ನಾವು ಇಟ್ಟುಕೊಂಡಿರುತ್ತೇವೆಯೋ ಅಲ್ಲಿಯತನಕ, ಈ ತೊಂದರೆಗಳೆಲ್ಲ ನಮಗೆ ಇದ್ದೇ ಇರುತ್ತವೆಂಬುದು ಸಹಜ. ಆದರೆ ಈ ಕಂಟ್ರೋಲನ್ನು ತೆಗೆದ ಮೇಲಾದರೂ ಸಹ ಈ ತೊಂದರೆಗಳು ತಪ್ಪುತ್ತವೆಂದು ಹೇಳುವುದೂ ಸಹ ತೀರಾ ಕಠಿಣ ಪ್ರಶ್ನೆಯಾಗಿದೆ. ಆದರೆ ಸರ್ಕಾರದವರು ಈ ಧಾನ್ಯ ಸಂಗ್ರಹಣೆ ಮತ್ತು ಶೇಖರಣೆಗಳ ವಿಚಾರದಲ್ಲಿ ಕಾನೂನುಗಳನ್ನು ಜಾರಿ ಮಾಡಿದ್ದಾರೆ. ಅದರಲ್ಲಿ ಯಾವ ತೊಂದರೆಯೂ ಇಲ್ಲ. ಕಾನೂನಿನಲ್ಲಿ ಯಾವ ತರಹದ ಲೋಪ ದೋಷಗಳೂ ಇರುವುದಿಲ್ಲ. ಅದೇ ರೀತಿ ಸರ್ಕಾರದವರ ಉದ್ದೇಶದಲ್ಲಿಯೂ ಕೂಡ ಯಾವ ಲೋಪದೋಷಗಳೂ ಇದ್ದಂತೆ ಕಾಣುತ್ತಿಲ್ಲ. ಇದರಲ್ಲಿ ಅವರ ಒಂದು ದೊಡ್ಡ ಮನೋಭಾವ ಎದ್ದು ಕಾಣುತ್ತಿದೆ. ಆದರೆ ಇದನ್ನು ಕಾರ್ಯಾಚರಣೆಯಲ್ಲಿ ನಡೆಸತಕ್ಕ ಅಧಿಕಾರಗಳು ಜನರಮೇಲೆ ಯಾವ ವಿಧವಾದ ಮಮತೆಯೂ ಇಲ್ಲದೆ, ಅನೇಕ ಲೋಪದೋಷಗಳಿಗೆ ಎಡೆಗೊಟ್ಟಿದ್ದರೆಂದು ಹೇಳಿದರೆ ತಪ್ಪಾಗಲಾರದು. ಇದನ್ನು ನಾವು ಹಾಗೆ ಯೋಚಿಸಿ ನೋಡಿದರೆ " ದೇವರು ವರಾ ಕೊಟ್ಟರೂ, ಪೂಜಾರಿ ವರ ಕೊಡದಂತೆ " ಇದೆ. ಇದು ಖಂಡಿತವಾಗಿಯೂ ಬಹಳ ಶೋಚನೀಯವಾದ ವಿಚಾರ.

ಅದರಲ್ಲೂ ಹಳ್ಳಿಗಾಡಿನ ಕಡೆಗಳಲ್ಲಿರುವ ರೈತರು ಸಾಮಾನ್ಯವಾಗಿ ತಿಳಿವಳಿಕೆಯಿಲ್ಲದವರಾಗಿರುವುದರಿಂದ, ಅವರಿಗೆ ಕೊಟ್ಟಿರುವ ರೇಷನ್ ಕಾರ್ಡಿನಲ್ಲಿ ಏನು ದೊರೆಯುತ್ತದೆಂದು ನಿರ್ಣಯಮಾಡಿ ಕೊಟ್ಟಿರುತ್ತಾರೋ ಅದೂ ಕೂಡ ಬಹುಮಟ್ಟಿಗೆ ಲಭ್ಯವಾಗುವುದಿಲ್ಲ. ಆ ದಿವಸ ಬೇರೆ ರೂಪದಲ್ಲಿ ಯಾವ ರೀತಿ ಹೋಗಿರುತ್ತದೆಂಬುದನ್ನು ಈಗ ಹೇಳುವುದು ಅನಾವಶ್ಯಕ. ಅಂತೂ ಅದೆಲ್ಲಾ ಕಳ್ಳಸಂತೆಗೆ ಬಂದು ಧಾರಾಳವಾಗಿ ಬಿಕರಿಯಾಗಿ ಹೋಗಿರುತ್ತದೆ! ಆದ್ದರಿಂದ ಈಗಿರುವ ಪದ್ಧತಿಯಲ್ಲಿರುವ ಎರಡು ದೋಷಗಳನ್ನು ನಾವು ತಿಳಿದುಕೊಳ್ಳಬೇಕು. ಒಂದು, ಪಡಿತರ ಹಂಚುವುದರಲ್ಲಿರುವ ದೋಷ ; ಎರಡನೆಯದು ತಿಳಿವಳಿಕೆಯಿಲ್ಲದ ಜನರಿಗೆ ಈ ಅಧಿಕಾರ ವರ್ಗದವರಿಂದ ಉಂಟಾಗುತ್ತಿರುವ ನಷ್ಟ ಮತ್ತು ತೊಂದರೆ. ಇವೆರಡನ್ನೂ ಸರಿಮಾಡಿದರೆ ಬಹುಶಃ ರೈತನಿಗೆ ಎಷ್ಟೋ ಉತ್ಸಾಹ ಮೂಡುತ್ತದೆ. ದವಸವನ್ನು ಕೊಡುವವನಿಗೂ ಕೊಡುವುದಕ್ಕೆ ಒಂದು ಆಸೆಯಿರುತ್ತದೆ.

ಇನ್ನೊಂದು ದೃಷ್ಟಿಯಿಂದ ಈಗಿನ ಪರಿಸ್ಥಿತಿಯನ್ನು ನೋಡುವುದಾದರೆ, ಈಗ ಎಲ್ಲಿ ನೋಡಿದರೂ ಸರ್ಕಾರದ ಪಡಿತರ ಸಾಲದು, ಸಾಲದು, ಎಂಬ ಕೂಗು ಕೇಳಿಬರುತ್ತಿದ್ದರೂ, ಸಾಮಾನ್ಯವಾಗಿ ಅನೇಕ ಸಭೆಗಳಲ್ಲಿ ಆ ರೀತಿ ಠರಾವಾಗಿದ್ದರೂ, ಮನವಿಗಳು ಸಹ ಬಂದಿದ್ದರೂ, ಎಲ್ಲಿಂದಲೂ ಕೂಡ ಆಹಾರವಿಲ್ಲದೆ ಪ್ರಾಣ ಬಿಟ್ಟನೆಂದು ಹೇಳಿರುವ ಪ್ರಸಂಗ ಕಂಡುಬಂದಿಲ್ಲ. ಇದು ನಮ್ಮ ಸುಯೋಗವೆಂದೇ ಹೇಳಬೇಕು. ಇದರಿಂದೇನು ಕಾಣುತ್ತದೆಂದರೆ ಸ್ವಪರಿಪೂರ್ಣತೆಯ ವಿಚಾರದಲ್ಲಿ ನಾವೇನೂ ಅಷ್ಟು ಘಾಬರಿ ಪಡಬೇಕಾಗಿಲ್ಲ ಎಂದು. ಎಲ್ಲೋ ಅಲ್ಪ ಸ್ವಲ್ಪ ಇರುವ ನ್ಯೂನತೆಯನ್ನು ಸರಿಪಡಿಸಿಬಿಟ್ಟರೆ ನಮ್ಮ ದೇಶ ಬಹು ಬೇಗ ಸ್ವಪರಿಪೂರ್ಣತೆಯ ಗುರಿಯನ್ನು ಮುಟ್ಟುವುದಕ್ಕೆ ಸಾಧ್ಯವಿದೆಯೆಂದು ಹೇಳಬಹುದು. ಏಕೆಂದರೆ ಹಳ್ಳಿಗಳ ಕಡೆ ಪಡಿತರ ಸಾಲದೆಂದು ಹೇಳಿದರೂ ಹೇಗೋ ಎಲ್ಲರಿಗೂ ಸಾಕಾದಷ್ಟು ದೊರೆಯುತ್ತಲೇ ಇದೆ. ಅದರಿಂದ ಜೀವನ ನಡೆಯುತ್ತಲೇ ಇದೆ ಎಂದ ಮೇಲೆ ನಾವು ಸರಿಯಾದ ಅಂಕಿ ಅಂಶಗಳನ್ನು ಸಂಗ್ರಹಣ ಮಾಡುವುದರಲ್ಲಿ ಸರಿಯಾಗಿ ಗಮನ ಕೊಟ್ಟರೆ ನಮಗೆ ಸ್ವಪರಿಪೂರ್ಣತೆಯನ್ನು ಮುಟ್ಟುವುದಕ್ಕೆ ಅಷ್ಟಾಗಿ ಕಷ್ಟವಾಗಲಾರದು. ಈ ಸಂದರ್ಭದಲ್ಲಿ ರೈತನೊಬ್ಬನನ್ನೇ ಆಕ್ಷೇಪಣೆ ಮಾಡುವುದರಲ್ಲಿ ನನಗೇನೂ ಆಸಕ್ತಿಯಿಲ್ಲ. ಏಕೆಂದರೆ ಪ್ರಪಂಚದಲ್ಲಿ ಪ್ರತಿಯೊಬ್ಬನಿಗೂ ಮೊದಲು ತಾನು ಬದುಕಬೇಕು ಎಂಬ ಆಸೆ ಇದ್ದೇ ಇರುತ್ತದೆ. ಅದೂ ಸಹಜವೇ ; ಅದನ್ನು ಬಿಟ್ಟರೆ ಆತನನ್ನು ಮೃತಜೀವಿಯೆಂದು ಹೇಳಬೇಕು, ಅಷ್ಟೆ. ಆದ್ದರಿಂದ ಕಾನೂನಿನ ವಿಷಯದಲ್ಲಿ ರೈತನಿಂದ ಕೆಲವು ಲೋಪದೋಷಗಳಾಗಬಹುದು ಎಂಬುದನ್ನು ನಾನು ಒಪ್ಪುತ್ತೇನೆ. ಆದರೂ ರೈತನ ಕಷ್ಟವನ್ನು ನಾವೂ ಸ್ವಲ್ಪ ಮನಗಂಡು ಅವನಲ್ಲಿ ಉತ್ಸಾಹ ಹುರುಪುಗಳು ಮೂಡುವಂತೆ ತಕ್ಕ ಕಾರ್ಯಕ್ರಮ ಕೈಕೊಂಡರೆ ನಿಜವಾಗಿಯೂ ಸರ್ಕಾರಕ್ಕೂ ಹೆಚ್ಚಿನ ಆದಾಯ ಬಂದು ಈ ಬಾಬಿನಲ್ಲಿಯೂ ಹಣ ಉಳಿತಾಯವಾಗುತ್ತದೆಂದು ಹೇಳಬಲ್ಲೆ. ಇದೇನೆಂಬುದನ್ನು ಬಿಚ್ಚಿಹೇಳುವುದಾದರೆ ಈಗ ಸರ್ಕಾರದವರೇನೋ ಬಹಳ ಹಣ ಖರ್ಚು ಮಾಡಿ ಎಲ್ಲೆಲ್ಲಿ ವ್ಯವಸಾಯದ ಬಾವಿಗಳನ್ನು ತೆಗೆಯುವುದಕ್ಕೆ ಮುಂದೆ ಬರುತ್ತಾರೋ ಅಲ್ಲಿ ಸಹಾಯ ದ್ರವ್ಯಗಳನ್ನು ಕೊಡುವ ಏರ್ಪಾಡು ಮಾಡಿದ್ದೀರಿ. ಈ ಉದ್ದೇಶವೇನೋ ಬಹಳ ಸಾಧುವಾಗಿದೆ. ಆದರೂ ಈಗ ಏನಾಗುತ್ತಿದೆಯೆಂದರೆ—ಅನೇಕ ಕಡೆಗಳಿಂದ ಆಕ್ಷೇಪಣೆಗಳು ಬರುತ್ತಿವೆ, ಇಲ್ಲವೆಂದು ಹೇಳುವುದಿಲ್ಲ. ಅಂಥವರಿಗೆ ಬೇಕಾದರೆ ತಾವು ಶಿಕ್ಷೆ ಮಾಡಬಹುದು. ಅದು ಸರ್ಕಾ

ರದವರ ಕರ್ತವ್ಯ—ಆದರೆ ನ್ಯಾಯವಾಗಿ ವರ್ತಿಸುವ ಜನರ ಪರವಾಗಿ ಹೇಳುವುದಾದರೆ, ನಾವೀಗ ಇಷ್ಟೆಲ್ಲ ಆಹಾರ ಹೆಚ್ಚಿಗೆ ಬೆಳೆಯಿರಿ, ಬೆಳೆಯಿರಿ ಎಂದು ಹೇಳುತ್ತಿದ್ದರೂ ಕಾರ್ಯರೂಪದಲ್ಲಿ ನಾವು ಆ ಬೆಳೆಯುವವರಿಗೆ ಸರಿಯಾದ ಸಹಾಯ ಒದಗಿಸುತ್ತಿಲ್ಲ. ಈಗ ನಾನು ಹೇಳಿದ ಹಾಗೆ, ಬಾವಿಗೆ ಧನ ಸಹಾಯ ಒದಗಿಸುವ ವಿಷಯದಲ್ಲಿ ಸರ್ಕಾರದವರ ನೀತಿಯೇನೋ ಬಹಳ ಚೆನ್ನಾಗಿದೆ. ಆದರೆ ರೈತಬಂದು ವಾಸ್ತವವಾಗಿ ಅನುಕೂಲ ಹೊಂದಬೇಕೆಂದು ಕೇಳಿದರೆ, ಅದಕ್ಕೆ ಅನೇಕ ಅಡ್ಡಿ ಆತಂಕಗಳು ಬರುತ್ತವೆ. ಕೇವಲ ಕೆಳಗಿನ ಅಧಿಕಾರಿಗಳಿಂದ ಹಿಡಿದು ಮೇಲಿನ ಅಧಿಕಾರಿಗಳ ವರೆಗೂ ಆತ ಹಣ, ಕಾಲ ಎಲ್ಲವನ್ನೂ ಖರ್ಚುಮಾಡಬೇಕಾಗಿರುತ್ತದೆ. ಕೊನೆಗೆ ಆತನ ಕೈಗೆ ದುಡ್ಡು ಬರುವ ವೇಳೆಗೆ ಈ ಹಣದಲ್ಲಿ ಬಹುಭಾಗ ದುರ್ಮಾರ್ಗದಲ್ಲಿ ಖರ್ಚಾಗಿ ಹೋಗಿರುತ್ತದೆ. ಹೀಗಾಗಿ ನೀವು ಕೊಟ್ಟ ಹಣ ದುರ್ವಿನಿಯೋಗವಾಗುತ್ತಿದೆ.

ಈ ಸಂದರ್ಭದಲ್ಲಿ ಇನ್ನೊಂದು ತೊಂದರೆಯ ವಿಷಯವನ್ನು ಹೇಳಬೇಕಾಗಿದೆ. ಸಾಮಾನ್ಯವಾಗಿ ಈಗ ಎಲ್ಲ ರೈತರಿಗೂ ಬೇಕಾಗಿರುವ ವ್ಯವಸಾಯದ ಮುಟ್ಟುಗಳನ್ನು ಪ್ರತಿಯೊಂದು ಊರಿನಲ್ಲಿಯೂ ಅವರ ಅವಶ್ಯಕತೆಗಳಿಗೆ ತಕ್ಕಷ್ಟು ಒದಗಿಸುತ್ತಿಲ್ಲವೆಂದು ನಾನು ವಿಷಾದದಿಂದ ಹೇಳುತ್ತೇನೆ. ಈ ದಿವಸ ಪ್ರಶ್ನೋತ್ತರಗಳ ಕಾಲದಲ್ಲಿ ಒಬ್ಬರು ಕೇಳಿದ ಪ್ರಶ್ನೆಗೆ ಸರ್ಕಾರದವರು ಉತ್ತರ ಹೇಳಿದರು. ಗಾಡಿ ಪಟ್ಟಿಗಳನ್ನು ಕಂಟ್ರೋಲ್ ದರದಲ್ಲಿ 30 ರೂಪಾಯಿಗಳಿಗೆ ಕೊಡುವಾಗ 130 ರೂಪಾಯಿಗಳನ್ನು ಕೊಟ್ಟು ಕೊಂಡುಕೊಂಡಿರುವುದೂ ಉಂಟೆಂಬ ಅಂಶ ಹೊರಪಟ್ಟಿತು. ಪ್ರತಿಯೊಂದು ಹೋಬಳಿಗೂ 100-120 ಗಾಡಿ ಪಟ್ಟಿಗಳು ಬೇಕಾಗಿರುವಲ್ಲಿ ಅಲ್ಲಿಗೆ ಕೇವಲ ಹತ್ತಿಪ್ಪತ್ತು ಪಟ್ಟಿಗಳನ್ನು ಕೊಟ್ಟರೆ ಈ ಕೊರತೆ ಹೇಗೆತಾನೆ ಪೂರೈಸುತ್ತದೆ? ಹೀಗಾಗಿ ಸಕಾಲದಲ್ಲಿ ಸಾಮಗ್ರಿಗಳಿಲ್ಲದಿದ್ದರೆ ರೈತ ಕೆಲಸ ಮಾಡುವುದಾದರೂ ಹೇಗೆ? 'ಬೆಣ್ಣೆ ಇಟ್ಟುಕೊಂಡು ತುಪ್ಪಕ್ಕೆ ಸಾಲಕ್ಕೆ ಹೋದರು' ಎಂಬಂತೆ ನಮ್ಮ ದೇಶದಲ್ಲಿ ಭದ್ರಾವತಿ ಕಾರ್ಖಾನೆಯನ್ನೇ ಇಟ್ಟುಕೊಂಡು ಕಬ್ಬಿಣವನ್ನು ಹೊರಕ್ಕೆ ಕಳುಹಿಸಿ ಪುನಃ ಅವರಿಗೆ ಕೈಯೊಡ್ಡಬೇಕಾಗಿರುವ ಸ್ಥಿತಿಯಲ್ಲಿ ನಾವಿರುವಾಗ, ನಮ್ಮ ಮಾನವಾಕ್ಕಳಿಗೆ ಸಿಕ್ಕದ ಪ್ರಸಂಗ ಬಂದಿರುವುದು ವಿಷಾದಕರ.

ಅಧ್ಯಕ್ಷರು.—ಕಾಲವಾಯಿತು. ಬೇಗ ಮುಗಿಸಿಬಿಡಿ.

ಶ್ರೀ ಕೆ. ಸುಬ್ಬರಾಯರು.—ನನಗೆ ಇಲ್ಲಿ ಭಾಷಣ ಮಾಡಿ ಅಭ್ಯಾಸವಿಲ್ಲ. ಇದೇ ಮೊದಲನೆಯ ಸಾರಿ ಇಲ್ಲಿ ಭಾಷಣ ಮಾಡುತ್ತಿರುವುದು. ತಾವು ಇಷ್ಟು ಕಾಲವಿದೆಯೆಂದು ತಿಳಿಸಿದರೆ ಅಷ್ಟರಲ್ಲಿ ಮುಗಿಸುತ್ತೇನೆ.

ಅಧ್ಯಕ್ಷರು.—ಇನ್ನು 5 ನಿಮಿಷಗಳಲ್ಲಿ ಮುಗಿಸಿ.

ಶ್ರೀ ಕೆ. ಸುಬ್ಬರಾಯರು.—ಆದ್ದರಿಂದ ರೈತನಿಗಿರುವ ಈ ಕೊರತೆಗಳನ್ನೆಲ್ಲಾ ನೀವು ನಿವಾರಣೆ ಮಾಡಬೇಕು.

ಇದರ ಜೊತೆಗೆ ಇನ್ನೊಂದು ವಿಷಯವನ್ನು ರೈತರ ಪರವಾಗಿ ಹೇಳಬೇಕಾಗಿದೆ. ಆಹಾರ ಪದಾರ್ಥಗಳ ಬೆಳವಣಿಗೆಗೆ ಬೇಕಾದಷ್ಟು ಉತ್ತೇಜನ ಕೊಡಬೇಕೆಂದು ಪದೇಪದೇ ನಾವು ಹೇಳುತ್ತಿರುವುದೇನೋ ಸರಿ. ಆದರೆ, ರೈತರುಗಳಿಗೆ ಇದರಿಂದ ಸಾಕಾದಷ್ಟು ದುಡ್ಡು ಬರುವುದಿಲ್ಲವೆಂದು ಹೇಳಬೇಕಾಗಿದೆ. ಹೆಚ್ಚಿಗೆ ಆದಾಯ ಬರತಕ್ಕ ಪದಾರ್ಥಗಳನ್ನು ಬೆಳೆಯುವುದಕ್ಕೆ ಆತ ಯಾವ ಸಹಾಯವನ್ನು ಕೇಳಿದರೂ, ಆಹಾರದ ವಿಷಯ ಒಂದು ಹೊರತು, ಬೇರೆಯಾವುದಕ್ಕೂ ಉತ್ತೇಜನ ಕೊಡುವುದಿಲ್ಲವೆನ್ನುತ್ತಾರೆ. ಕಬ್ಬು, ಹಿಪ್ಪುನೇರಳೆ, ಮೆಣಸಿನಕಾಯಿ ಮುಂತಾದ ಬೆಳೆಗಳಿಗೆ ಗೊಬ್ಬರದ ಸೌಕರ್ಯವಾಗಲೀ ಅಥವಾ ಇನ್ನಾವ ಸಹಾಯವನ್ನಾಗಲೀ ಕೇಳಿದರೂ ಕೊಡುತ್ತಿಲ್ಲ. ಈ ವಿಷಯದಲ್ಲಿ ಒಂದಂಶವನ್ನು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳಬೇಕು. ತಮಗೆಲ್ಲರಿಗೂ ಗೊತ್ತಿದೆ. ರೈತ ವಾಸ್ತವವಾಗಿ ತನ್ನ ಆಹಾರಕ್ಕಾಗಿ ತನ್ನ ಉತ್ಪತ್ತಿಯ ಎಷ್ಟನೆಯ ಒಂದು ಭಾಗವನ್ನು ಖರ್ಚು ಮಾಡುತ್ತಾನೆ ಎಂದು. ಅವನೆಂದಿಗೂ ಆಹಾರಕ್ಕೆ ಹೆಚ್ಚಿಗೆ ಖರ್ಚು ಮಾಡುವುದಿಲ್ಲ. ಏನಿದ್ದರೂ ಆತನು ಇತರೇ ಅವಶ್ಯಕ ವಸ್ತುಗಳನ್ನು ಹೊಂದಿಸಿಕೊಳ್ಳುವುದಕ್ಕೆ ಬಹುಭಾಗ ಖರ್ಚುಮಾಡುತ್ತಾನೆಂಬುದು ನಿರ್ವಿವಾದ ವಿಷಯ. ಸರ್ಕಾರದವರು ಉಪಕಸಬುಗಳಿಗೆ ಏರ್ಪಾಡುಮಾಡಿ ರೈತ ತನ್ನ ಈ ವಿಧವಾದ ಅವಶ್ಯಕತೆಗಳಿಗೆ ಸಂಪಾದನೆ ಮಾಡಿಕೊಳ್ಳುವುದಕ್ಕೆ ದಾರಿ ಮಾಡಿಕೊಡಬೇಕೆಂಬ ದೊಡ್ಡ ಧ್ಯೇಯವನ್ನಿಟ್ಟುಕೊಂಡಿರುವುದೇನೋ ಸಂತೋಷಕರ. ಆದರೆ ಅದಿನ್ನೂ ಫಲಕಾರಿಯಾಗಿಲ್ಲ. ಆದ್ದರಿಂದ ಸದ್ಯಕ್ಕೆ ರೈತನಿಗೆ ಇಂಥಾ ವಿಷಯಗಳಲ್ಲಿ ಸಹಾಯ ಮಾಡದೆ ಇದ್ದರೆ, ಆತನ ಸರ್ವತೋಮುಖವಾದ ಅಭಿವೃದ್ಧಿ ಹೇಗಾಗಬೇಕೆಂಬುದನ್ನು ತಾವುಗಳು ಸ್ವಲ್ಪ ಆಲೋಚನೆ ಮಾಡಬೇಕಾಗಿದೆ. ಅವನು ಆಹಾರ ಧಾನ್ಯಗಳನ್ನು ಮಾತ್ರ ಬೆಳೆಯಬೇಕೆಂದು ಹೇಳಿದರೆ ಮನುಷ್ಯನು ಊಟ, ನಿದ್ರೆ ಇಷ್ಟು ಮಾತ್ರ ಮಾಡಿಕೊಂಡಿದ್ದರಾಯಿತು ಎಂದು ಹೇಳಿದಂತಾಗುತ್ತದೆ. ಆತನೂ ಒಂದು ಪ್ರಾಣಿಯಂತಿರುತ್ತಾನೆ. ಆದ್ದರಿಂದ ರೈತರು ತಮ್ಮ ಇತರ ಅವಶ್ಯಕತೆಗಳಿಗೆ ಹಣ ಒದಗಿಸಿಕೊಳ್ಳಬೇಕಾದರೆ ಅವರು ಇಂಥ ಬಾಬುಗಳನ್ನು ಬೆಳೆದುಕೊಳ್ಳಲಿಕ್ಕೂ ತಕ್ಕಮಟ್ಟಿಗೆ ಉತ್ತೇಜನ ಕೊಡಲೇಬೇಕು. ಇದಕ್ಕಾಗಿ ತಾವೆಷ್ಟು ಹಣ ಒದಗಿಸಿದರೂ ಅದು ಕಡಿಮೆಯೆಂದೇ ಹೇಳಬೇಕು. ಅಲ್ಲದೆ ಈಗ ಆಹಾರ ಪದಾರ್ಥಗಳನ್ನು ಬೆಳೆಯತಕ್ಕ ಸಂದರ್ಭಗಳಲ್ಲಿ ವ್ಯವಸಾಯದ ಇರಿಗೇಷನ್ ಪಂಪು ಮುಂತಾದುವುಗಳಿಗೆ ಉಪಯೋಗಿಸುವ ವಿದ್ಯುಚ್ಛಕ್ತಿಗೆ ಯೂನಿಟ್ ಒಂದಕ್ಕೆ 6 ಕಾಸಿನಂತೆ ಕೊಡುತ್ತೇವೆಂದು ಹೇಳಿದ್ದೀರಿ. ಆದರೆ ಯಾವ ಕಮರ್ಷಿಯಲ್ ಕ್ರಾಪ್ ತೆಗೆದುಕೊಂಡರೂ, ಕಬ್ಬನ್ನು ತೆಗೆದುಕೊಂಡರೂ ಅದು ಆಹಾರ ಪದಾರ್ಥವಾಗುತ್ತದೆಯೇ ಎಂಬುದನ್ನು ಯೋಚನೆ ಮಾಡಬೇಕು ಹಣ ಬಂದ ಮಾತ್ರಕ್ಕೇ ಅದು ಆಹಾರದ ರೂಪಿನಿಂದ ವ್ಯಾಪಾರವಾಗುವುದಿಲ್ಲ. ರೈತರು ತಮಗೆ ಇಷ್ಟಬಂದಿದ್ದನ್ನು ಬೆಳೆಯಲೆಂದು ಬಿಟ್ಟರೆ ಆಹಾರ ದವಸಗಳಿಗೆ ಪ್ರಾಮುಖ್ಯತೆ ಕೊಡುವುದಿಲ್ಲವೆಂಬ ಒಂದು ಆಕ್ಷೇಪಣೆ ಇದೆ. ಏಕೆಂದರೆ ಅದರಿಂದ ಬರುವ ಆದಾಯ ಕಡಮೆ. ಕೆಲಸ ಮಾಡುವವನಿಗೆ ಕೇವಲ ಅಲ್ಪ ಮೊಬಲಗೂ ಸಹ ದೊಡ್ಡದಾಗಿ ಕಾಣುತ್ತದೆ; ಅದರಿಂದ ತೃಪ್ತಿ ಬರುತ್ತದೆ. ಈ ರೀತಿಯಾಗಿ ಎಲ್ಲರೂ ಒಂದಾಗಿ ಕೆಲಸ ಮಾಡಿದರೆ ಸರ್ಕಾರಕ್ಕೂ ಹೆಚ್ಚು ಸಹಾಯವಾಗುತ್ತದೆ. ಈಗ ಆಹಾರ ಧಾನ್ಯಗಳನ್ನು ಅಲ್ಲಿಂದ ಇಲ್ಲಿಗೆ ತರಿಸುವುದಕ್ಕಾಗಿ 40 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಸಿಬ್ಬಂದಿಗಾಗಿ ಒಂದು ಕೋಟಿ ಚಿಲ್ಲರೆ ರೂಪಾಯಿಗಳು ಖರ್ಚಾಗುತ್ತಿವೆ. ಹೀಗಿರುವಾಗ ಇನ್ನೂ 10 ಸಾವಿರ ರೂಪಾಯಿಗಳನ್ನು ರೈತರಿಗೆ ಕೊಡುವುದು ಏನೂ ಹೆಚ್ಚಲ್ಲ.

ವಿದ್ಯುಚ್ಛಕ್ತಿ ಪಂಪುಗಳಿಗಾಗಿ 6 ಕಾಸಿನಿಂದ ಒಂದಾಣೆ ಹೀಗೆ ವಸೂಲು ಮಾಡಿದರೂ ಸಹ 10 ಸಾವಿರ ರೂಪಾಯಿಗಳಾಗುವುದಿಲ್ಲ. ಮೂರು ತಾಲ್ಲೂಕುಗಳಿಂದ 30 ಪಂಪುಗಳೂ ಇಲ್ಲ. ಅದರಿಂದ 3 ಸಾವಿರ ರೂಪಾಯಿ ಕೂಡ ಹುಟ್ಟುವಳಿಯಾಗುವುದಿಲ್ಲ. ಆದ್ದರಿಂದ

ಸರ್ಕಾರದವರು ಈ ಬಾಬುಗಳಲ್ಲಿ ಸ್ವಲ್ಪ ಅನುಕೂಲಪಡಿಸಿದರೂ ರೈತರಿಗೆ ಅದರಿಂದ ಹೆಚ್ಚು ಉಪಕಾರವಾಗುತ್ತದೆಂದು ಹೇಳುವ ಹಾಗಿಲ್ಲ. ಇದು ತತ್ತ್ವದೃಷ್ಟಿ. ಸರ್ಕಾರ ನೆರವಾಗುತ್ತದೆ, ಉಪಕಾರ ಮಾಡುತ್ತದೆ ಎನ್ನುವ ಭಾವನೆ ಬಂದರೆ ಅದರಿಂದ ಹೆಚ್ಚು ಪ್ರಯೋಜನವಿದೆ. ನೈತಿಕ ದೃಷ್ಟಿಯಿಂದ ಈ ಹಣ ಕಡಿಮೆ ಮಾಡಿದರೆ ಬಹಳ ಸಹಾಯವಾಗುತ್ತದೆ ಎಂಬುದು ನನ್ನ ಭಾವನೆ. ಈಗ ಆಹಾರ ಸ್ವಪರಿಪೂರ್ಣತೆ ವಿಷಯದಲ್ಲಿ ಕೈಕೊಂಡಿರುವ ಕಾರ್ಯಕ್ರಮಕ್ಕಾಗಿ ರೈತರು ಕೃತಜ್ಞರು. ಇದರ ಜೊತೆಗೆ ನಾನು ಸಲಹೆ ಮಾಡಿದಂತೆ ಸರ್ಕಾರ ಸಾಕಷ್ಟು ಹಣವನ್ನೊದಗಿಸಿದರೆ ಈ ಬಾಬಿನಲ್ಲಿ ನಷ್ಟವಾಗುವ ಹಣವೂ ಉಳಿತಾಯವಾಗುವುದು ಮತ್ತು ಸರ್ಕಾರಕ್ಕೂ ಸಹಾಯವಾಗುತ್ತದೆ.

ಈ ಆಹಾರದ ಬಾಬಲ್ಲದೆ ಮತ್ತೊಂದು ಬಾಬಿನಲ್ಲಿ ರೈತರಿಗೆ ಉಪಕಾರವಾಗಿರುವುದನ್ನು ಸರ್ಕಾರದ ಗಮನಕ್ಕೆ ತೀವ್ರತೆಯಿಂದ ತರಬೇಕಾಗಿದೆ. ಅದು ರೇಷ್ಮೆ ಕೈಗಾರಿಕೆ, ಈ ಕೈಗಾರಿಕೆ ವಿಷಯವನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ ಆಹಾರ ಬೆಳೆಯುವ ವಿಷಯದಲ್ಲಿ ಒಂದೆರಡು ಸಲಹೆಗಳನ್ನು ಕೊಡಬೇಕೆಂಬ ಅಭಿಲಾಷೆಯಿದೆ. ಉದಾಹರಣೆಗೆ ಮಂಡ್ಯದಲ್ಲಿ ಸಕ್ಕರೆ ಕಾರ್ಖಾನೆಯಿದೆ. ಅಲ್ಲಿ ಸಾವಿರಾರು ಕೂಲಿಗಾರರು ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಸಂಬಳಸಾರಿಗೆ ಹೆಚ್ಚಾಗಿದೆ, ಪಡಿತರ ಸರಿಯಾಗಿ ಸಿಕ್ಕುತ್ತದೆ, ಸುಖವಾಗಿರಬಹುದೆಂದು ನಮ್ಮ ತಾಲ್ಲೂಕಿನಿಂದ ಎಷ್ಟೋ ಜನ ಅಲ್ಲಿಗೆ ಹೋಗಿದ್ದಾರೆ. ಆದ್ದರಿಂದ ನಮ್ಮ ತಾಲ್ಲೂಕಿನಲ್ಲಿ ವ್ಯವಸಾಯ ಮಾಡುವ ಜನಸಂಖ್ಯೆ ಕಡಮೆಯಾಯಿತು. ಅದು ಸರ್ಕಾರದ ಮೇಲೆ ದೊಡ್ಡ ಹೊರೆ ಆಯಿತು, ಸರ್ಕಾರಕ್ಕೆ ಜವಾಬ್ದಾರಿಯೂ ಹೆಚ್ಚಿತು. ಅದಕ್ಕೆ ಅಧ್ಯಕ್ಷರಾಗಿರುವವರು ಏನು ಕಾರ್ಯಕ್ರಮ ತೆಗೆದುಕೊಂಡು ಸಹಾಯ ಮಾಡಿದ್ದಾರೆಂಬುದನ್ನು ಹೇಳಬೇಕಾಗಿದೆ. ಸಾಧಾರಣವಾಗಿ ಈ ವರ್ಷ ತಿಳಿದುಬಂದಿರುವ ಅಂಕಿಅಂಶಗಳ ಪ್ರಕಾರ ಕಾರ್ಖಾನೆ ಕೆಲಸಗಾರರು ಸ್ವಂತ ಸಾಗುವಳಿ $3\frac{1}{2}$ ಸಾವಿರ ಪಲ್ಲ ಬತ್ತ, $2\frac{1}{2}$ ಸಾವಿರ ಪಲ್ಲ ರಾಗಿ—ಒಟ್ಟು 6 ಸಾವಿರ ಪಲ್ಲ ಧವಸ ಧಾನ್ಯಗಳನ್ನು ಉತ್ಪತ್ತಿ ಮಾಡಿದ್ದಾರೆಂದು ಹೇಳಿದರೆ ಎಷ್ಟು ಕೆಲಸ ನಡೆದಿದೆಯೆಂಬುದು ಚೆನ್ನಾಗಿ ಗೊತ್ತಾಗುತ್ತದೆ. ಹೀಗೆ ನಮ್ಮ ದೇಶದಲ್ಲಿ ಇನ್ನೂ ಅನೇಕ ದೊಡ್ಡದೊಡ್ಡ ಬ್ಯಾಂಕುಗಳು ಮತ್ತು ಕೈಗಾರಿಕೋದ್ಯಮಗಳು ಇವೆ. ಅದರಲ್ಲಿ ಅನೇಕ ಮಂದಿ ಕೆಲಸ ಮಾಡುವವರಿದ್ದಾರೆ. ಏನಾದರೂ ಮಾಡಿ ಒತ್ತಾಯಪಡಿಸಿ ಅವರು ಆಹಾರ ಪದಾರ್ಥಗಳನ್ನು ಬೆಳೆಯಲು ತಕ್ಕ ಕ್ರಮ ಕೈಗೊಳ್ಳುವಂತೆ ಮಾಡಬೇಕು. ಹಾಗಿಲ್ಲದಿದ್ದರೆ ಅವರಿಗೆ ಆಹಾರ ಒದಗಿಸುವುದು ಕಷ್ಟ. ಸರ್ಕಾರದವರು ಕಾನೂನಿನಲ್ಲಿ ಸ್ವಲ್ಪ ಬದಲಾವಣೆ ಮಾಡಿ ಕಾರ್ಖಾನೆಗಳವರು ಅವರ ಕೆಲಸಗಾರರಿಗೆ ಬೇಕಾದ ಆಹಾರ ಪದಾರ್ಥಗಳನ್ನು ಅವರೇ ಬೆಳೆದುಕೊಳ್ಳುವಂತೆ ಮಾಡಬಹುದು. ಹೀಗೆ ಮಾಡುವುದಾದರೆ ಸರ್ಕಾರಕ್ಕೆ ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ಸಹಾಯವಾಗುತ್ತದೆ. ಜನ ಬಲವಿರುವಾಗ ಈರೀತಿ ಮಾಡುವುದರಿಂದ ಜವಾಬ್ದಾರಿ ಕಡಮೆಯಾಗುತ್ತದೆ. ಇದು ಬಹಳ ಪ್ರಾಮುಖ್ಯವಾಗಿರುವುದರಿಂದ ಸರ್ಕಾರದವರು ಕೂಲಂಕಷವಾಗಿ ವಿಮರ್ಶೆ ಮಾಡಿ ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ಈಗ ವ್ಯವಸಾಯವಿಲ್ಲದಿರುವ ಅನೇಕ ಗ್ರಾಮಗಳಿವೆ. ಹೊರಗಡೆ ಇರುವ ಜಮೀನ್ದಾರರಿಗೆ ಸೇರಿರುವ ಜಮೀನುಗಳನ್ನು ಸರ್ಕಾರಕ್ಕೆ ವಶಪಡಿಸಿಕೊಂಡು, ಹಣ ಸಹಾಯಮಾಡಿ, ಉತ್ತೇಜನ ಕೊಟ್ಟು ವ್ಯವಸಾಯ ಮಾಡಿಸಿದರೆ ಅದರಿಂದಲೂ ಬಹಳ ಸಹಾಯವಿದೆ.

ಈಗ ಎರಡನೆಯ ಪ್ರಾಮುಖ್ಯ ವಿಷಯವೆಂದು ಹೇಳಿದ ರೇಷ್ಮೆ ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ನಮ್ಮ ದೇಶದಲ್ಲಿ ಈ ದಿವಸ ಸುಮಾರು 80 ಸಾವಿರ ಎಕರೆ ರೇಷ್ಮೆಯಿದೆ. ಅದನ್ನು ಮಂತ್ರಿವರ್ಯರು Queen of Textiles ಎಂದು ಹೇಳಿದ್ದಾರೆ. ಅದಕ್ಕೆ ಎರಡನೆಯ ಉನ್ನತ ಸ್ಥಾನವನ್ನು ಕೊಟ್ಟಿದ್ದಾರೆ.

Sri M. V. KRISHNAPPA (Kolar–General).—Who is the king ?

Sri K. SUBBA RAO.—I do not know.

Sri H. K. VEERANNA GOWDA (Mandya District–General).—Cotton is the king !

ಶ್ರೀ ಕೆ. ಸುಬ್ಬರಾಯರು.—May be. ಆಮೇಲೆ 2 ಲಕ್ಷ ಸಂಸಾರಿಗಳಿಗೆ ವಿರಾಮ ಕಾಲದಲ್ಲಿ ಬಹಳ ಮುಖ್ಯವಾದ ಕಸಬಾಗಿರುವ ಗೃಹ ಕೈಗಾರಿಕೆಯೆಂದೂ, ಅದನ್ನು ಬೇಕಾದಷ್ಟು ಸರ್ಕಾರದವರು ಅಭಿವೃದ್ಧಿಪಡಿಸಬೇಕೆಂದೂ, ಅದಕ್ಕೆ ತಕ್ಕ ಉತ್ತೇಜನ ಕೊಡಬೇಕೆಂದೂ ಹೇಳುತ್ತಿರುವಾಗ ಅವರು ಅತ್ಯುನ್ನತವಾದ ಈ ಕೈಗಾರಿಕೆಗೆ ಸಾಕಷ್ಟು ಖಂಡಿತ ಅವಕಾಶ ಮಾಡಿಲ್ಲವೆಂದು ನನಗೆ ಬಹಳ ಅಸಮಾಧಾನವಾಗಿದೆ. ಸ್ವಲ್ಪ ಅಂಕಿಅಂಶಗಳನ್ನು ಈ ವಿಚಾರದಲ್ಲಿ ಹೇಳಿದರೆ ಅದು ಅಪ್ರಕೃತವಾಗಲಾರದೆಂಬುದು ನನ್ನ ಭಾವನೆ. ಯುದ್ಧಕ್ಕೆ ಮುಂಚೆ 25 ಸಾವಿರ ಎಕರೆ ಮಾತ್ರ ರೇಷ್ಮೆ ವ್ಯವಸಾಯವಿತ್ತು. ಅಲ್ಲಿಂದೀಚೆಗೆ ಯುದ್ಧದ ದೆಸೆಯಿಂದ ಬೇಕಾದಷ್ಟು ರೇಷ್ಮೆಯನ್ನು ಒದಗಿಸಲು ಚೈತನ್ಯ ಹೊಂದಿದ್ದುದು ಇಂಡಿಯಾ ದೇಶವಾದ್ದರಿಂದ ತಕ್ಕ ಕಾರ್ಯಕ್ರಮ ಕೈಕೊಳ್ಳಲಾಯಿತು. ಆ ಕಾರ್ಯಕ್ರಮದಿಂದ ಉತ್ತೇಜನ ದೊರೆತು ರೇಷ್ಮೆ ವ್ಯವಸಾಯವು ಹೆಚ್ಚಿ ಈ ದಿವಸ 80 ಸಾವಿರ ಎಕರೆಗಳವರೆಗೂ ಬಂದಿದೆ. ಅದರಿಂದ 2 ಲಕ್ಷ ಕುಟುಂಬಗಳು ಜೀವನ ಮಾಡುತ್ತಿವೆ. ಆದರೆ ಇದಕ್ಕೆ ಸಾಕಷ್ಟು ಅನುಕೂಲಗಳನ್ನು ಒದಗಿಸಿಲ್ಲ. ಇತರ ಕೈಗಾರಿಕೆಗಳು ಒಂದೊಂದೇ ಕಡೆ ಕೇಂದ್ರೀಕೃತವಾಗುತ್ತಿದೆ. ಎಲ್ಲಾ ಕಡೆಯೂ ಜನರಿಗೆ ಅನುಕೂಲ ಮಾಡಿದರೆ ಅವರ ನೆರವು ನಮಗೂ ಇರುತ್ತದೆ. ಆಹಾರ ಪದಾರ್ಥಗಳನ್ನು ಹೆಚ್ಚಾಗಿ ಬೆಳೆಯುವುದಕ್ಕೆ ಒಳ್ಳೆಯ ಬೀಜವು ಹೇಗೆ ಅವಶ್ಯಕವೋ ಹಾಗೆಯೇ ರೇಷ್ಮೆಯ ಬೆಳೆಗೂ ಕೂಡ ಸಹಾಯವಾಗಬೇಕಾದರೆ ಒಳ್ಳೆಯ ಬಿತ್ತನೆ ತಯಾರು ಮಾಡಬೇಕು. ಅದಾಗುವವರೆಗೆ ರೇಷ್ಮೆ ಕೈಗಾರಿಕೆಯು ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಿಲ್ಲವೆಂಬುದು ಸರ್ಕಾರದವರಿಗೆ ತಿಳಿದಿರಬಹುದು. ಈ ಬಿತ್ತನೆಯ ವಿಷಯದಲ್ಲಿ ಸರ್ಕಾರದವರು ಒಳ್ಳೆಯ ಏರ್ಪಾಡು ಮಾಡಿದ್ದಾರೆ. ರೇಷ್ಮೆ ತಯಾರಿಕೆಗಾಗಿ ಸಹಾಯದ್ರವ್ಯವನ್ನು ನೀಡುತ್ತಿದ್ದಾರೆ. ಅನೇಕ ಕಡೆಗಳಲ್ಲಿ ಹೊಸ ಪ್ರಯೋಗ ಕ್ಷೇತ್ರಗಳಿವೆ. ಎಷ್ಟೇ ಮಾಡಿದರೂ ಕೊರತೆಯಿದೆ. ಆ ಕಡೆಗೆ ಗಮನ ಕೊಟ್ಟಿಲ್ಲ. ಮುಂದಿರುವ ನೋಟ ನೋಡುತ್ತಿದ್ದಾರೆಯೇ ಹೊರತು ಹಿಂದಿರುವ ದೋಷವನ್ನು ನೋಡಿಲ್ಲ. ನಮ್ಮ ದೇಶದಲ್ಲಿ 8 ಕೋಟಿ ಮೊಟ್ಟೆಗಳನ್ನು ಉತ್ಪನ್ನ ಮಾಡಬೇಕಾದ ಜವಾಬ್ದಾರಿಯಿದೆ 80 ಸಾವಿರ ಎಕರೆ ರೇಷ್ಮೆ ಕೈಗಾರಿಕೆಯನ್ನು ವೃದ್ಧಿಮಾಡಲು 8 ಕೋಟಿ ಮೊಟ್ಟೆ ಬೇಕು. ಅದನ್ನು ತಯಾರು ಮಾಡಲು ಇರುವ ಸಾಧನ ಕಡಮೆ. ಅಲ್ಲದೆ ಅದಕ್ಕೆ ಉತ್ತೇಜನ ಸಾಕ

ಷ್ಟಿಲ್ಲ. ಶ್ರೀ ಸುಬ್ಬರಾಮಶೆಟ್ಟರು ಮಂತ್ರಿಗಳಾಗಿದ್ದಾಗ ಈ ವಿಚಾರವನ್ನು ಅವರ ಗಮನಕ್ಕೂ ತಂದೆವು, ಮುಖ್ಯವಾಗಿ ಇದಕ್ಕೆ ಕೆಲವು ಜನಬೇಕು. ರೋಗರಹಿತವಾದ ಮೊಟ್ಟೆ ನಿರ್ಮಾಣ ಮಾಡುವುದಕ್ಕೆ ಯಂತ್ರ ಬೇಕು. ಅದನ್ನು ತೆಗೆದುಕೊಂಡು ನೋಡುವುದಕ್ಕೆ ಮುಂಚೆ ಗೊತ್ತಾಗುವುದಿಲ್ಲ. ಆಮೇಲೆ ಹೊರದೇಶದ ಗಂಡು ನಮ್ಮ ದೇಶದ ಹೆಣ್ಣು ಜೊತೆಮಾಡಿ ಮೊಟ್ಟೆಗಳನ್ನು ಒದಗಿಸುವುದಾಗಿ ಹೇಳಿದ್ದಾರೆ ಮತ್ತು ಅದರಿಂದ ಬರುವ ತಳಿಗೂ ಉತ್ತೇಜನ ಕೊಡುವುದಾಗಿ ತಿಳಿಸಿದ್ದಾರೆ. ಆದ್ದರಿಂದ ಕಾರ್ಯಕ್ರಮವೇನೋ ಇದೆ. ಇದನ್ನು ಕ್ರಾಸ್ ಬ್ರೀಡ್ ಎಂದು ಹೇಳುತ್ತಾರೆ.

ಅದಕ್ಕಿಂತಲೂ ಉತ್ತಮವಾದ ರೇಷ್ಮೆಯ ತಳಿಯನ್ನು ಕೊಡುತ್ತೇವೆಂದು ನಮ್ಮ ಇಲಾಖೆಯವರು ಹೇಳಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ, ರೇಷ್ಮೆಯನ್ನು ತಯಾರು ಮಾಡುವವರಿಗೆ ಬಹಳ ತೊಂದರೆಗಳಿವೆ. ಯಂತ್ರೋಪಕರಣಗಳಿಲ್ಲ, ಬೋನಸ್ಸು ಕೊಡುತ್ತಿಲ್ಲ. ನಾನು ಈ ವಿಚಾರವನ್ನು ಪದೇ ಪದೇ ಅವರಲ್ಲಿ ಹೇಳುತ್ತಿದ್ದರೂ ಇದುವರೆಗ ಕೊಟ್ಟಿಲ್ಲ. ಇದಕ್ಕಾಗಿ ಈ ಸಾರಿ ಕೇವಲ 30 ಸಾವಿರ ರೂಪಾಯಿ ಮೀಸಲಾಗಿಟ್ಟಿದ್ದಾರೆ. ಒಟ್ಟು 8 ಲಕ್ಷ ಚಿಲ್ಲರೆ ಒದಗಿಸಿದ್ದರೂ ಕೂಡ ಬೋನಸ್ಸಿಗಾಗಿ 30 ಸಾವಿರ ಮಾತ್ರ ಒದಗಿಸಿದ್ದಾರೆ. ಬೇಕಾದರೆ ಬಡ್ಜೆಟ್ಟನ್ನು ನೋಡಬಹುದು. ಇಷ್ಟು ಮೊಬಲಗನ್ನೊದಗಿಸಿದರೆ ಇದರಿಂದ ಯಾವ ಕೆಲಸವೂ ಸಾಧ್ಯವಾಗುವುದಿಲ್ಲ. ಮೊಟ್ಟೆಯನ್ನು ಪರೀಕ್ಷೆ ಮಾಡದೆ ತರುವುದರಿಂದ ನಿಜವಾಗಿಯೂ ರೈತರಿಗೆ ಬಹಳ ತೊಂದರೆಯಾಗುತ್ತದೆ. ಆದುದರಿಂದ ಸರ್ಕಾರದವರು ಕಡ್ಡಾಯವಾಗಿ ಮೊಟ್ಟೆಯನ್ನು ಪರೀಕ್ಷೆ ಮಾಡಿಸದೇ ತರಬಾರದೆಂದು ನಿರ್ಬಂಧ ಮಾಡದೇಯಿದ್ದರೆ ಈ ಕೈಗಾರಿಕೆಗೇ ಧಕ್ಕೆ ಬರುತ್ತದೆಂದು ಖಂಡಿತವಾಗಿ ಹೇಳುತ್ತೇನೆ. ಗೂಡನ್ನು ಪರೀಕ್ಷೆ ಮಾಡದೆ ರೈತನಿಗೆ ಕೊಟ್ಟು ಕೊನೆಯಲ್ಲಿ ಕೆಟ್ಟು ಹೋಗಿ ರೈತ ಎಲ್ಲವನ್ನೂ ಬೀದಿಗೆ ಸುರಿದ ಉದಾಹರಣೆಗಳಿವೆ. ಹಾಗೆ ಅನೇಕ ಕುಂದುಕೊರತೆಗಳಿವೆ. ಬಹಳ ದೀರ್ಘವಾಗಬಹುದೆಂದು ಸಂಕ್ಷೇಪವಾಗಿ ಹೇಳಿದ್ದೇನೆ.

ಶ್ರೀ ಎಚ್. ಸಿ. ದಾಸಪ್ಪನವರು (ಹಣಕಾಸಿನ ಸಚಿವರು).—ಡಿಮ್ಯಾಂಡುಗಳು ಬಂದಾಗ ಹೇಳಬಹುದು.

ಶ್ರೀ ಕೆ. ಸುಬ್ಬರಾಯರು.—ಮೊಟ್ಟೆ ತಯಾರು ಮಾಡುವವರಿಗೆ ಸಾಕಷ್ಟು ಉತ್ತೇಜನ ಕೊಟ್ಟು ಸಹಾಯಮಾಡಬೇಕು. ಪರೀಕ್ಷೆಮಾಡದೇಯಿರುವ ಮೊಟ್ಟೆ ಮಾರುವುದನ್ನು ತಡೆಯಲು ಕಾನೂನು ಮಾಡಬೇಕು. ಇದು ಕೇಂದ್ರ ಸರ್ಕಾರಕ್ಕೆ ಸಂಬಂಧಪಡಬಹುದಾದ್ದರಿಂದ ನಮ್ಮ ಸರ್ಕಾರಕ್ಕೆ ಈ ರೀತಿ ಮಾಡಲು ಕಷ್ಟವಾಗಬಹುದು. ಈ ಪ್ರಶ್ನೆಯನ್ನು ಕೇಂದ್ರ ರೇಷ್ಮೆಬೋರ್ಡಿನವರ ಮುಂದೆ ತರಬೇಕು. ಹೀಗೆಯೇ ಇನ್ನೂ ಅನೇಕ ರಕ್ಷಣೆಗಳೂ ಸಹಾಯಗಳೂ ಬೇಕು. ನಮ್ಮ ದೇಶದಲ್ಲಿ ಇಂತಹ ಕೈಗಾರಿಕೆಯನ್ನು ಅಭಿವೃದ್ಧಿಪಡಿಸದೆ ಬಿಟ್ಟರೆ ಬೇರಾವ ಇಂತಹ ಉಪಕಸಬೂ ದೊರೆಯುವುದಿಲ್ಲ. ಈಗ ರೇಷ್ಮೆ ವ್ಯವಸಾಯಗಾರರಿಗೆ ಗೊಬ್ಬರವನ್ನು ಕೊಡುವುದಿಲ್ಲವೆಂದು ಸರ್ಕಾರದವರು ಹೇಳಿಬಿಟ್ಟಿದ್ದಾರೆ. ಇದು ಸರಿಯಲ್ಲ. ಈ ವ್ಯವಸಾಯಕ್ಕೆ 100 ರೂಪಾಯಿ ಖರ್ಚುಮಾಡಿದರೆ 200 ರೂಪಾಯಿ ಪ್ರತಿಫಲ ದೊರೆಯುತ್ತದೆ. ಜಪಾನಿನಿಂದ ರೇಷ್ಮೆಯನ್ನು ತರಿಸುವುದಾಗಿ ಮಂತ್ರಿಗಳು ಹೇಳುವಾಗ ನಮ್ಮವರಿಗೆ ಏಕೆ ಸಹಾಯ ಕೊಡಬಾರದು? ಈ ವಿಚಾರದಲ್ಲಿ ಇನ್ನೂ ಹೆಚ್ಚಿನ ವಿವರಗಳನ್ನು ಬೇಕಾದರೆ ಪ್ರತ್ಯೇಕವಾಗಿ ಮಂತ್ರಿಗಳಲ್ಲಿ ಹೇಳುತ್ತೇನೆ. ಒಟ್ಟಿನಲ್ಲಿ ಇವರಿಗೆ ರಕ್ಷಣೆ, ಉತ್ತೇಜನ ಮತ್ತು ಸಹಾಯ ದ್ರವ್ಯಗಳನ್ನು ಕೊಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ.

ಈಗ ಸರ್ಕಾರದಲ್ಲಿ ತಕ್ಕಷ್ಟು ಹಣದ ಅಭಾವವಿರುವುದರಿಂದ ದೊಡ್ಡ ದೊಡ್ಡ ಕೈಗಾರಿಕೋದ್ಯಮಗಳನ್ನೂ ಯೋಜನೆಗಳನ್ನೂ ಕೈಕೊಳ್ಳುವುದಕ್ಕಾಗುವುದಿಲ್ಲವೆಂಬ ಅಂಶ ಅವರ ಭಾಷಣದಲ್ಲಿ ಅಡಕವಾಗಿದೆ. ಕೆಲವು ಬಾಬುಗಳಲ್ಲಿ ಹೊಸ ಹೊಸ ತೆರಿಗೆಗಳನ್ನು ವಿಧಿಸಬೇಕೆಂದು ವಿಧಾಯಕಮಾಡಿದ್ದಾರೆ. ಈ ವಿಷಯದಲ್ಲಿ ನಾನು ಹೆಚ್ಚು ಹೇಳಲು ಇಷ್ಟಪಡುವುದಿಲ್ಲ. ಒಂದು ಬಾಬಿಗೆ ಮಾತ್ರ ನಾನು ಪೂರ್ಣ ಅನುಮೋದನೆಯನ್ನು ಕೊಟ್ಟು ಅದನ್ನು ಇನ್ನೂ ಹೆಚ್ಚುಮಾಡಿದ್ದರೂ ಬಹಳ ಸಂತೋಷಪಡುತ್ತಿದ್ದೆ. ಅದೇನೆಂದರೆ, ಒಲೆಗಳಿಗೆ ಒದಗಿಸುವ ವಿದ್ಯುಚ್ಛಕ್ತಿಗೆ ಕೊಡಬೇಕಾದ ಹಣವನ್ನು ಯೂನಿಟ್ಟಿಗೆ 6 ಕಾಸಿದ್ದುದನ್ನು 9 ಕಾಸು ಮಾಡಿರುವುದು. ಇದಕ್ಕೆ ಇನ್ನೂ ಮೂರು ಕಾಸು ಹೆಚ್ಚು ಮಾಡಿದ್ದರೂ ನಾನು ಸಂತೋಷಪಡುತ್ತಿದ್ದೆ.

ಶ್ರೀ ಎಚ್. ಸಿ. ದಾಸಪ್ಪನವರು.—ಪಂಪಿಂಗ್ ಸೆಟ್ಟುಗಳಿಗೆ ಉಪಯೋಗಿಸುವುದಕ್ಕೆ?

ಶ್ರೀ ಕೆ. ಸುಬ್ಬರಾಯರು.—ಪಂಪಿಂಗ್ ಸೆಟ್‌ಗೆ ವಿದ್ಯುಚ್ಛಕ್ತಿಯನ್ನು ತೆಗೆದುಕೊಳ್ಳುವವನು ಬಡ ರೈತ. ರೈತರೂ ಹೆಚ್ಚು ಅಭಿವೃದ್ಧಿಗೆ ಬಂದ ಮೇಲೆ ಅವರಿಗೂ ಹೆಚ್ಚಿಸಿ, ಆದರೆ ಈ ದಿವಸ ರೈತರ ಸ್ಥಿತಿ ಹೇಗಿದೆಯೆಂದು ನೋಡಬೇಕಾಗಿದೆ. ಈ ಊರಿನಲ್ಲಿ ಒಂದು ದೊಡ್ಡ ಹೋಟೆಲು ಮಾಲೀಕರು ತಿಂಗಳಿಗೆ ಒಂದು ಸಾವಿರ ರೂಪಾಯಿನ ಸೌದೆಯನ್ನು ಉಪಯೋಗಿಸುತ್ತಿದ್ದರು. ಈಗ ಅವರು ವಿದ್ಯುಚ್ಛಕ್ತಿಯನ್ನು ಉಪಯೋಗಿಸುವುದರಿಂದ ಕೇವಲ 200 ರೂಪಾಯಿ ಖರ್ಚಾಗುತ್ತಿದೆ. ಹೀಗೆ 800 ರೂಪಾಯಿ ಉಳಿಯುವಾಗ ಇನ್ನೂ ನೂರು ರೂಪಾಯಿ ಅವರು ಹೆಚ್ಚಾಗಿ ಕೊಡುವುದರಿಂದ ತೊಂದರೆಯೇನೂ ಇಲ್ಲ. ಅಲ್ಲದೆ ಪ್ರತಿ ತಿಂಗಳೂ ಒಂದು ಸಾವಿರ ರೂಪಾಯಿನ ಸೌದೆ ಬರಬೇಕಾದರೆ ಅರಣ್ಯದಲ್ಲಿ ಎಷ್ಟು ಮರಗಳು ಹಾಳಾಗಬೇಕು! ಸೌದೆ ಅಭಾವ ಹೆಚ್ಚಾದರೆ ಅವರೇ ಹೆಚ್ಚು ಹೆಚ್ಚಾಗಿ ವಿದ್ಯುಚ್ಛಕ್ತಿಯನ್ನು ತೆಗೆದುಕೊಳ್ಳುತ್ತಾರೆಂಬ ವಾದವನ್ನು ಹೇಳಬಹುದು. ಒಟ್ಟಿನಲ್ಲಿ ಈಗ ಹೆಚ್ಚು ಮಾಡಿರುವುದನ್ನು ನಾನು ಪೂರ್ಣವಾಗಿ ಅನುಮೋದಿಸುತ್ತೇನೆ. ಇನ್ನೂ ಹೆಚ್ಚು ಮಾಡುವುದು ಅಥವಾ ಬಿಡುವುದು ಸರ್ಕಾರಕ್ಕೆ ಸೇರಿದ್ದು.

ಇನ್ನೊಂದು ವಿಚಾರ. ರೈಲ್ವೆ ಆದಾಯವನ್ನು ನಾವು ಕೇಂದ್ರ ಸರ್ಕಾರಕ್ಕೆ ಬಿಟ್ಟು ಕೊಟ್ಟೆವು. ಇದಕ್ಕೆ ಸರಿ ಸಮಾನವಾದ ಆದಾಯ ಬರಬಹುದಾದ ಇನ್ನೊಂದು ಬಾಬು ನಮ್ಮ ಕೈಲೇ ಇದೆ. ಅದು ರೋಡ್ ಟ್ರಾನ್ಸ್‌ಪೋರ್ಟ್ ಬಾಬು. ಈ ವರ್ಷ ಇದರಿಂದ ಸುಮಾರು ಮೂರು ಲಕ್ಷರೂಪಾಯಿ ಆದಾಯ ಬರುತ್ತದೆಂದು ತೋರಿಸಿದ್ದಾರೆ. ಈ ರೋಡ್ ಟ್ರಾನ್ಸ್‌ಪೋರ್ಟನ್ನು ಇನ್ನೂ ಹೆಚ್ಚು ಅಭಿವೃದ್ಧಿ ಮಾಡಬೇಕೆಂಬುದು ನನ್ನ ಆಸೆ. ಇದನ್ನು ಒಂದು ದೊಡ್ಡ ಇಲಾಖೆಯನ್ನಾಗಿ ಮಾಡಬೇಕು. ಈ ವಿಷಯವಾಗಿ ನಾನು ಶ್ರೀಮಾನ್ ಮಾಧವರಾಯರನ್ನೂ ಕೇಳಿದೆ. ಸಿಟಿ ಬಸ್ ಸರ್ವಿಸ್ಸಿಗೆ ಹಾಕಿರತಕ್ಕ ಬಂಡವಾಳಕ್ಕೆ ಹೆಚ್ಚಿನ ಉತ್ಪತ್ತಿ ಬರುತ್ತದೆ, ಈಗಲೇ ವರ್ಷಕ್ಕೆ ಎರಡು ಲಕ್ಷ ಚಿಲ್ಲರೆ ಹುಟ್ಟುವಳಿ ಬರುತ್ತಿದೆ ಎಂದು ಅವರು ಹೇಳಿದರು. ಇದನ್ನು ಸರಿಯಾದ ರೀತಿಯಲ್ಲಿ ವ್ಯವಸ್ಥೆಮಾಡಿ ನಡೆಸುವುದಾದರೆ ಖಂಡಿತವಾಗಿಯೂ ಇದರಿಂದ ಬಹಳ ಹೆಚ್ಚಿನ ಉತ್ಪತ್ತಿ ಬರುತ್ತದೆಂದು ಹೇಳಬಹುದು. ಹಾಗೆ ಮಾಡುವುದು ಎರಡು ದೃಷ್ಟಿಯಿಂದ ನಮ್ಮ ದೇಶಕ್ಕೆ ಅನುಕೂಲವಾಗುತ್ತದೆ.

ನಿರುದ್ಯೋಗ ಸಮಸ್ಯೆ ಪರಿಹಾರವಾಗುವುದೊಂದು ಮತ್ತು ಜನರಿಗೆ ಪ್ರಯಾಣ ಸೌಕರ್ಯ ಹೆಚ್ಚಿ ಅನುಕೂಲವಾಗುವುದೊಂದು

ಇನ್ನೊಂದು ವಿಚಾರದಲ್ಲಿ ನನಗೆ ಸ್ವಲ್ಪ ಸಂದೇಹವಿದೆ. ಅಂಚೆಯ ವಿಚಾರದಲ್ಲಿ ಕೇಂದ್ರ ಸರ್ಕಾರದಿಂದ ಒಂದು ರಿಯಾಯಿತಿ ಅಥವಾ ಸಹಾಯ ನಮಗಿದ್ದುದು ಈಗ ಹೊರಟು ಹೋಯಿತು. ಈಗ ನಮಗೆ ಅಂಚೆ ರಿಯಾಯಿತಿ ಇಲ್ಲ. ನಮ್ಮ ದೇಶದ ಕಾಗದಗಳನ್ನು ನಮ್ಮಲ್ಲೇ ಬೇರೆ ಬೇರೆ ಸ್ಥಳಗಳಿಗೆ ನಮ್ಮ ಬಸ್ಸುಗಳಲ್ಲಿ ಕಳುಹಿಸುವುದರಲ್ಲಿ ಅಭ್ಯಂತರವಿಲ್ಲವೆಂದು ಕಾಣುತ್ತದೆ. ನಮ್ಮಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಕಳುಹಿಸಬೇಕಾದ ದೊಡ್ಡ ದೊಡ್ಡ bundles ಮತ್ತು packets ಇರುತ್ತವೆ. ಇಂಥವುಗಳನ್ನು ಊರಿಂದೂರಿಗೆ ತಲುಪಿಸಲು ಸುಲಭವಾಗುತ್ತದೆ. ಇದು ಆಗಬಹುದೋ ಇಲ್ಲವೋ ಗೊತ್ತಿಲ್ಲ.

Sri T. MARIAPPA (Home Minister).—That is not allowed.

Sri K. PUTTASWAMY (Mandya District-General).—Are we prevented from sending letters through special messengers ?

Sri T. MARIAPPA.—We cannot use our bus services to transit letters.

ಶ್ರೀ ಕೆ. ಸುಬ್ಬರಾಯರು.—ಎರಡು ಅನುಕೂಲಗಳಂತೂ ನಿಸ್ಸಂಶಯವಾಗಿ ಆಗುತ್ತದೆ. ಈ ಸಂಬಂಧವಾಗಿ ಮತ್ತೊಂದಂಶವನ್ನು ಹೇಳಬೇಕಾಗಿದೆ. ಈ ಇಲಾಖೆಯಲ್ಲಿ ಪ್ರಭಾವಶಾಲಿಯಾಗಿ ಕೆಲಸ ನಡೆಯುತ್ತಿಲ್ಲವೆಂದು ಹೇಳಬೇಕಾಗಿದೆ. ಬಸ್ಸುಗಳ ವಿಷಯ ನನಗೂ ಸ್ವಲ್ಪ ಅನುಭವವಿದೆ. ಮೂಲಧನವನ್ನು ತಕ್ಕಷ್ಟು ಹೆಚ್ಚು ಮಾಡಿ ಸರಿಯಾಗಿ ಕೆಲಸ ಮಾಡಿದರೆ ಒಂದೆರಡು ವರ್ಷಗಳಲ್ಲಿ ಮೂಲಧನಕ್ಕೆ ತಕ್ಕಷ್ಟು ಉತ್ಪತ್ತಿ ಖಂಡಿತವಾಗಿಯೂ ಬರುತ್ತದೆ. ಅಲ್ಲದೆ ಮೂಲಧನವೂ ಬರುತ್ತದೆ. ಖಾಸಗಿ ವ್ಯಕ್ತಿಗಳು ನಡೆಸಲು ಎಷ್ಟೋ ಕಷ್ಟಗಳಿರುತ್ತವೆ. ಅವರು ಕಾಳಸಂತೆಯಲ್ಲಿ ಪೆಟ್ರೋಲ್ ತೆಗೆದುಕೊಳ್ಳುತ್ತಾರೆ, ಎಣ್ಣೆಯನ್ನು ತೆಗೆದುಕೊಳ್ಳುತ್ತಾರೆ. ಹಾಗೆ ಇವಕ್ಕೆಲ್ಲಾ ಬೇಕಾದಷ್ಟು ಖರ್ಚುಗಳನ್ನಿಟ್ಟರೂ ಕೂಡ ಅವರಿಗೆ ಒಂದೆರಡು ವರ್ಷಗಳಲ್ಲಿ ಬೇಕಾದಷ್ಟು ಲಾಭ ಬರುವಾಗ ಸರ್ಕಾರದವರಿಗೆ ಇನ್ನೂ ಹೆಚ್ಚಿನ ಉತ್ಪತ್ತಿ ಬರಲೇಬೇಕು. ಆದಗೆ ಸರಿಯಾದ ವ್ಯವಸ್ಥೆ ಇರಬೇಕು.

ಈಗ ಇದರಲ್ಲಿ ಇರುವುದು ಇಷ್ಟು. ಸರ್ಕಾರದವರಿಗೆ ಯಾವ ಕಷ್ಟವೂ ಇಲ್ಲ. ಸಾಕಾದಷ್ಟು ಪೆಟ್ರೋಲ್ ಇರುತ್ತದೆ. ಯಂತ್ರ ಸಾಮಗ್ರಿ ಇರುತ್ತದೆ. ರಿಪೇರಿ ವಗೈರೆ ಬಹಳಮಟ್ಟಿಗೆ ಕಮ್ಮಿ ಆಗುತ್ತದೆ. ಆಡಳಿತವನ್ನು ನೋಡಿಕೊಳ್ಳುವುದಕ್ಕೆ ದಕ್ಷರಾದವರೊಬ್ಬರಿದ್ದರೆ ಸಾಕು. ಹೀಗೆ ಕಮ್ಮಿ ಖರ್ಚಿನಲ್ಲಿ ಹೆಚ್ಚು ಉತ್ಪತ್ತಿ ಮಾಡಿಕೊಳ್ಳುವುದಕ್ಕೆ ಗಮನ ಕೊಡಬಹುದು ಎಂದು ಕಾಣುತ್ತದೆ. ಈಗ ಸಾಮಾನ್ಯವಾಗಿ ನೋಡಿದ್ದರಲ್ಲಿ ಡ್ರೈವರುಗಳ ಮತ್ತು ಕಂಡಕ್ಟರುಗಳ ಮೇಲೆ ಸರಿಯಾದ ಉಸ್ತುವಾರಿ ಇಲ್ಲವೆಂದು ಕಾಣುತ್ತದೆ. ಅವರ ಮೇಲೆ ಉಸ್ತುವಾರಿ ಮಾಡುವುದಕ್ಕೆ ಯಾರಾದರೂ ಇದ್ದಾರೆಯೋ ಇಲ್ಲವೋ ಎಂಬ ಸಂದೇಹವುಂಟಾಗಿದೆ. ಇನ್ನೊಂದು ವಿಷಯವನ್ನು ಸರ್ಕಾರದವರ ಗಮನಕ್ಕೆ ತರಬೇಕಾಗಿದೆ. ಅದರಿಂದ ಸರ್ಕಾರದವರಿಗೆ ಹಣ ಕಮ್ಮಿ ಆಗುತ್ತದೆ ಎಂದು ಭಾವಿಸಬೇಕಾಗಿಲ್ಲವೆಂದು ನನ್ನ ಅಭಿಪ್ರಾಯ. ಕೆಲವುಕಾಲ ಮೈಲಿಗೆ 6 ಕಾಸಿನಂತೆ ಕಡಿಮೆ ದೂರ ಇದ್ದರೂ ಹೋಗಬೇಕೆಂದು ಇತ್ತು. ಅದರಂತೆ ಸರ್ಕಾರಿ ಬಸ್ಸುಗಳಲ್ಲಿ ಮಾಡುತ್ತಿದ್ದರು. ಇತ್ತೀಚೆಗೆ 9 ಕಾಸಿನಂತೆ ಮಾಡಿದ್ದಾರೆ. ಆ ರೀತಿ ಹಾಕಿದರೆ ರೈಲಿನ ಎರಡನೇ ತರಗತಿಗಿಂತಲೂ ಹೆಚ್ಚಾಗುತ್ತದೆ.

ಶ್ರೀ ಎಚ್. ಕೆ. ವೀರಣ್ಣಗೌಡರು.—9 ಕಾಸಿನಂತೆ ಅಲ್ಲ. 8 ಕಾಸಿನಂತೆ ಹಾಕಿದ್ದಾರೆ.

ಶ್ರೀ ಕೆ. ಸುಬ್ಬರಾಯರು.—ಎಂಟು ಕಾಸಿನಂತೆ ಲೆಕ್ಕ ಹಾಕಿದರೂ ಕೂಡ ಹೆಚ್ಚಾಗುತ್ತದೆ. ಉದಾಹರಣೆಗೆ ಕ್ಲೋಸ್‌ಪೇಟೆಯಿಂದ ಬೆಂಗಳೂರಿಗೆ ರೈಲ್ವೆ ಚಾರ್ಜು ಒಂದು ರೂಪಾಯಿ ಎರಡಾಣೆ ಇದೆ. ಅದೇ ಬಸ್ಸಿನಲ್ಲಿ ಒಂದೂಕಾಲು ರೂಪಾಯಿ ವಸೂಲು ಮಾಡುತ್ತಾರೆ. ಇದು ನಿರ್ವಿವಾದವಾದದ್ದು. ಆದ್ದರಿಂದ ಈ ಸಂದರ್ಭದಲ್ಲಿ ನಮ್ಮ ಮಾನ್ಯ ಮಂತ್ರಿಗಳು ಇವುಗಳನ್ನೆಲ್ಲಾ ಗಮನಿಸಬೇಕು. ಇದರಲ್ಲಿ ಅನೇಕ ನ್ಯೂನತೆಗಳಿವೆ. ಅವುಗಳನ್ನೆಲ್ಲಾ ಸರಿಪಡಿಸಬೇಕು. ದೇಶದ ಪ್ರತಿಯೊಂದು ರಸ್ತೆಯಲ್ಲೂ ಕೂಡ ಸರ್ಕಾರಿ ಬಸ್ಸುಗಳು ಓಡಬೇಕು. ಒಂದುವೇಳೆ ಖಾಸಗೀ ಬಸ್ಸುಗಳನ್ನೆಲ್ಲಾ ನಿಲ್ಲಿಸಿಬಿಟ್ಟರೆ ಅವರಿಗೆ ತೊಂದರೆಯಾಗುತ್ತದೆ ಎನ್ನುವುದಾದರೆ ಅವರಿಗೂ ಅವಕಾಶ ಕೊಡಿ, ಬೇಡವೆಂದು ಹೇಳುವುದಿಲ್ಲ. ಸರ್ಕಾರದವರು ಅವರಿಗಿಂತ ಹೆಚ್ಚು ದರ ಇಟ್ಟು ನಡೆಸುವುದಾದರೆ ಸರ್ಕಾರದವರಿಗೆ ನಷ್ಟವಾಗುತ್ತದೆ. ಆದ್ದರಿಂದ ದರ ಕಡಿಮೆಮಾಡಿ ನಡೆಸುವುದಾದರೆ ಹುಟ್ಟುವಳಿ ಖಂಡಿತವಾಗಿಯೂ ಹೆಚ್ಚಿಗೆ ಬರುತ್ತದೆ. ಇದು ಬಹಳ ಪ್ರಾಮುಖ್ಯವಾದ ಉತ್ಪನ್ನ ಬರುವ ಕಾರ್ಯವೆಂದು ಹೇಳುತ್ತೇನೆ.

ಇನ್ನು ಪೋಲೀಸ್ ಇಲಾಖೆಯ ವಿಷಯದಲ್ಲಿ........

ಅಧ್ಯಕ್ಷರು.—ಮೂರು ಗಂಟೆಗೆ ತಮ್ಮ ಭಾಷಣವನ್ನು ಮುಗಿಸುತ್ತೀರೋ ?

ಶ್ರೀ ಕೆ. ಸುಬ್ಬರಾಯರು.—ಆಗಬಹುದು. ಪೋಲೀಸ್ ಇಲಾಖೆಯಲ್ಲಿ ಒಂದು ಲಕ್ಷ ರೂಪಾಯಿ ಖೋತಾ ಮಾಡಿದ್ದೀರೆಂದು ತಿಳಿಯುತ್ತದೆ. ಇನ್ನಾವ ಇಲಾಖೆಯಲ್ಲಿ ಬೇಕಾದರೂ ಖೋತಾ ಮಾಡಿ, ಇದರಲ್ಲಿ ಮಾತ್ರ ಮಾಡಬೇಡಿ ಎಂದು ಹೇಳುವುದರಲ್ಲಿ ನಾನು ಹಿಂತೆಗೆಯುವುದಿಲ್ಲ. ಈ ಒಂದುಲಕ್ಷ ರೂಪಾಯಿಗಳನ್ನು ರಾಷ್ಟ್ರೀಯ ರಕ್ಷಣಾದಳಕ್ಕೆ ಏನು ಖರ್ಚು ಮಾಡುತ್ತಿದ್ದಿರೋ ಅದನ್ನು ಖೋತಾ ಮಾಡಿದ್ದೀರೆಂದು ನನಗೆ ಅನ್ನಿಸುತ್ತದೆ. ಈ ಹೋಂ ಗಾರ್ಡುಗಳಿಗೆ ದಿನಕ್ಕೆ 8 ಆಣೆ ಕೊಡುತ್ತಿದ್ದೀರಿ. ಆ ಒಂದು ಉತ್ತೇಜನ ಇತ್ತು. ಅಷ್ಟೇ ಹೊರತು ಬೇರೆ ಏನೂ ಇರಲಿಲ್ಲ. ಅದನ್ನು ಖೋತಾ ಮಾಡಿದ್ದೀರೆಂದು ನನಗೆ ಸಂದೇಹವಿದೆ. ಈಗ ಪೋಲೀಸ್ ಇಲಾಖೆಯಲ್ಲಿ ಮೊದಲು ಮೊದಲು ತೆಗೆದುಕೊಂಡಿರತಕ್ಕವರೆಲ್ಲಾ ಅವಿದ್ಯಾವಂತರು. ಈಗ ಹೊಸಬರನ್ನು ವಿದ್ಯಾವಂತರಾದವರನ್ನು ತೆಗೆದುಕೊಂಡಿದ್ದೀರಿ. ಪೋಲೀಸ್ ಇಲಾಖೆಯಲ್ಲಿ ತಕ್ಸೀರುಗಳನ್ನು ಕಂಡುಹಿಡಿಯುವುದು ಅಷ್ಟೇ ಅಲ್ಲ. ನಾಗರಿಕ ಸಮಾಜಕ್ಕೆ ಬೇಕಾದ ರಕ್ಷಣೆಯನ್ನು ಕೊಡತಕ್ಕ ಜವಾಬ್ದಾರಿ ಅವರ ಮೇಲಿವೆ. ಅವರಿಗೆ ಸಂಬಳ ಸಾರಿಗೆಗಳು ಹೆಚ್ಚಾಗಿದ್ದರೆ ತೃಪ್ತಿ ಇರುತ್ತದೆ. ಇಲ್ಲದೇಇದ್ದರೆ ಅವರು ಸಣ್ಣ ಕೆಲಸಕ್ಕೆ ಕೈಹಾಕುತ್ತಾರೆ. ಬೇರೆಕಡೆ ಅವರ ಮನಸ್ಸು ಓಡುತ್ತದೆ. ಆದ್ದರಿಂದ ನಾವು ಅವರಿಗೆ ಸಾಕಾದಷ್ಟು ಉತ್ತೇಜನ ಕೊಡಬೇಕು. ದೇಶದಲ್ಲಿರತಕ್ಕ ಪರಿಸ್ಥಿತಿಯನ್ನು ಗಮನಿಸಿದರೆ, ಅವರ ಅವಶ್ಯಕತೆ ಎಷ್ಟಿದೆ ಎಂಬುದನ್ನು ಮತ್ತೆ ಹೇಳಬೇಕಾಗಿಲ್ಲ. ಈದಿನ ಇರತಕ್ಕ ವಿಷಮ ಪರಿಸ್ಥಿತಿಯಲ್ಲಿ ಕೇಂದ್ರಸರ್ಕಾ

ರದವರು ಯಾವುದನ್ನು ಮಾಡುತ್ತಾರೋ, ಅದನ್ನೇ ನೀವೂ ಮಾಡಬೇಕಾಗಿದೆ. ಅದಕ್ಕೆ ನಾವೆಲ್ಲರೂ ನಿಮ್ಮ ಹಿಂದೆ ಇದ್ದೇವೆ. ದೇಶವೇ ಇದೆ. ಅದರಲ್ಲಿ ಸಂದೇಹವಿಲ್ಲ. ದೇಶದಲ್ಲಿ ಶಾಂತಿಯನ್ನು ಕಾಪಾಡಲು ತಯಾರಾಗಿರತಕ್ಕ ಒಂದು ಅಂಗಕ್ಕೆ ಈದಿನ ನೀವು ಇಷ್ಟು ಹಣವನ್ನು ಖೋತಾಹಾಕಿ ಏಕೆ ಉಳಿಸಬೇಕೆಂದು ಮಾಡಿದ್ದೀರೋ ನನಗೆ ಗೊತ್ತಾಗುವುದಿಲ್ಲ. ಏನೇ ಆಗಲೀ ಮತ್ತೆ ಮಾನ್ಯ ಮಂತ್ರಿಗಳು ಒಂದು ಹುಕುಂ ಹೊರಡಿಸಿ ಇದನ್ನು ನಿರಿಪಡಿಸಿದರೆ, 3,000 ಜನ ರಕ್ಷಣಾ ದಳದವರು ಯಾವ ಕೆಲಸವನ್ನು ಬೇಕಾದರೂ ಮಾಡಲಿಕ್ಕೆ ತಯಾರಾಗಿದ್ದಾರೆ, ಸಿದ್ಧವಾಗಿದ್ದಾರೆ. ಬೇರೆ ಯಾವ ಪ್ರತಿಫಲವನ್ನೂ ಅಪೇಕ್ಷೆ ಮಾಡುವುದಿಲ್ಲವೆಂದು ಹೇಳುತ್ತೇನೆ. ರಕ್ಷಣಾದಳದವರ ಮತ್ತು ಪೋಲೀಸಿನವರ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ ಎಂದು ಹೇಳಬಹುದು.

ಪಾನ ನಿರೋಧವನ್ನು ಕೆಲವು ಕಡೆ ಮಾತ್ರ ಜಾರಿಗೆ ತಂದಿದ್ದೀರಿ. ಅದರಿಂದ ಕೆಳಮಟ್ಟದ ಜನರಿಗೆ ಉಪಕಾರವಾಗುತ್ತದೆ. ಕೆಲವು ಜಿಲ್ಲೆಗಳಲ್ಲಿ ಪಾನನಿರೋಧವನ್ನು ಮಾಡಿದ್ದೀರಿ. ಇನ್ನೂ ಕೆಲವು ಜಿಲ್ಲೆಗಳಲ್ಲಿ ಮಾಡಬೇಕಾಗಿದೆ. ದೇಶದಲ್ಲಿ ಪೂರ್ಣ ಪಾನನಿರೋಧವನ್ನು ಮಾಡಿದ್ದೇ ಆದರೆ ಜನರು ಚಿರಋಣಿಗಳಾಗಿರುತ್ತಾರೆ. ಏನೇ ಆಗಲೀ ನಿಧಾನವಾಗಿ ಆದರೂ ಕೂಡ ಇದು ಪೂರ್ತಿ ಆಗುತ್ತದೆ ಎಂಬ ಭರವಸೆ ಇದೆ. ಇದರಿಂದ ಹೆಚ್ಚು ಪ್ರಯೋಜನವಾಗಿದ್ದರೂ ಕೂಡ ಕೆಲವು ಸಣ್ಣ ದೂರುಗಳು ಬರುತ್ತಾ ಇವೆ. ಅದೇನೆಂದರೆ, ಕಳ್ಳಭಟ್ಟಿ ಇಳಿಸುವುದು ಬಹಳ ಹೆಚ್ಚಾಗಿದೆ. ಈ ವಿಷಯದಲ್ಲಿ ಸ್ವಂತವಾಗಿ ಹೇಳುವುದಾದರೆ ಅನೇಕಸಲ ಹಿಂದಿನ ಸರ್ಕಾರದಲ್ಲಿದ್ದ ಇದಕ್ಕೆ ಸಂಬಂಧಪಟ್ಟ ಮಂತ್ರಿಗಳವರಲ್ಲಿ ಹೇಳಿದ್ದೇನೆ. ಈರೀತಿ ಕಳ್ಳಭಟ್ಟಿ ಇಳಿಸುವವರನ್ನು ರಕ್ಷಣಾದಳದವರು ಹಿಡಿದುಕೊಂಡು ಬಂದು ಕೊಟ್ಟಿದ್ದಾರೆ. ಆದರೂ ಕೂಡ ಇಲಾಖೆಯವರು ತಕ್ಕಷ್ಟು ಸಿಬ್ಬಂದಿ ಇಲ್ಲದೇ ಇದ್ದದ್ದರಿಂದ ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದಾರೆ. ನೀವೇ ಮಾಡಿ ಎಂದರೆ ಆ ಸ್ಥಳಕ್ಕೆ ಹೋಗುವುದರೊಳಗೇ ಏನೇನೋ ಆಗಿಹೋಗಿ ಬಹಳ ಕಷ್ಟವಾಗುತ್ತದೆ ಎಂದು ಹೇಳಿದ್ದಾರೆ. ಅದಕ್ಕೋಸ್ಕರವೇ ಅದನ್ನು ಪೋಲೀಸ್‌ನವರಿಗೂ, ರಕ್ಷಣಾ ದಳದವರಿಗೂ ವಹಿಸುವುದಾದರೆ ನಿಜವಾಗಿಯೂ ಯಾವ ಉದ್ದೇಶದಿಂದ ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಕಳೆದುಕೊಂಡಿದ್ದಾರೋ ಅದು ಸಾರ್ಥಕವಾಗುತ್ತದೆ. ಇಲ್ಲದೆ ಇದ್ದರೆ ಅದರಿಂದ ಜನಗಳಿಗೆ ಏನೂ ಉಪಯೋಗವಾಗಲಾರದು. ಆ ದೃಷ್ಟಿಯಿಂದ ನೋಡಿದರೆ ರಕ್ಷಣಾದಳ ಮತ್ತು ಪೋಲೀಸಿನವರನ್ನು ಅದಕ್ಕಾಗಿ ತೃಪ್ತರಾಗಿಡುವುದು ಅನಿವಾರ್ಯವೆಂದು ಹೇಳುತ್ತೇನೆ. ಇದೇ ಸಂದರ್ಭದಲ್ಲಿ ರಾಷ್ಟ್ರೀಯ ರಕ್ಷಣಾದಳ ಅಥವಾ ಸೇವಾದಳದ ವಿಷಯವಾಗಿಯೂ ಕೂಡ ಕೆಲವು ಮಾತುಗಳನ್ನು ಹೇಳಬೇಕೆಂದು ನನಗೆ ಆಶೆ ಇದೆ. ಅದಕ್ಕಾಗಿ ಈವರ್ಷ 1 ಲಕ್ಷ 25 ಸಾವಿರ ರೂಪಾಯಿಗಳನ್ನು ಒದಗಿಸಿದ್ದೀರಿ. ಅದರಲ್ಲಿ ಸ್ಕೌಟ್ ಚಳುವಳಿಗೆ ಸಹಾಯವೂ ಸೇರಿದೆ. ರಾಷ್ಟ್ರೀಯ ರಕ್ಷಣಾದಳ ಇದೆಎನ್ನುವುದು ತಿಳಿದಿದೆಯೋ ಇಲ್ಲವೋ ಗೊತ್ತಿಲ್ಲ. ದೇಶದಲ್ಲಿರತಕ್ಕ ಎಲ್ಲಾ ಸ್ಕೂಲುಗಳಲ್ಲಿಯೂ ಕಾಲೇಜುಗಳಲ್ಲಿಯೂ ಮತ್ತು ಹೊರಗಡೆಯೂ ಸಹ ಈ ರಾಷ್ಟ್ರೀಯ ರಕ್ಷಣಾದಳವನ್ನು ಸ್ಥಾಪನೆ ಮಾಡಬೇಕು, ಅಭಿವೃದ್ಧಿ ಮಾಡಬೇಕು, ಬೆಳೆಸಿಕೊಂಡು ಬರಬೇಕು ಎಂಬ ಆಶೋತ್ತರವಿರುವಾಗ ಈ 1 ಲಕ್ಷ 25 ಸಾವಿರ ರೂಪಾಯಿಗಳನ್ನು ಎಲ್ಲರಿಗೂ ಹಂಚಿದರೆ ಇದು ಕೇವಲ ಅತ್ಯಲ್ಪವೆಂದು ಧಾರಾಳವಾಗಿ ಹೇಳುತ್ತೇನೆ. ಇದಕ್ಕೆ ಇನ್ನು ಎಷ್ಟು ಹಣ ಸಾಧ್ಯವೋ ಅಷ್ಟನ್ನೂ ಎಂದರೆ, ಕೊನೇಪಕ್ಷ 5 ಲಕ್ಷ ರೂಪಾಯಿಗಳನ್ನಾದರೂ ಒದಗಿಸಿದರೆ ಬಹಳ ಒಳ್ಳೆಯದು ಎಂದು ನಾನು ಅಂದುಕೊಂಡಿದ್ದೇನೆ.

ಈ ಸಂದರ್ಭದಲ್ಲಿ ಮತ್ತೊಂದು ವಿಷಯವನ್ನು ಹೇಳಲಿಚ್ಛಿಸುತ್ತೇನೆ. ವಯಸ್ಕರ ಶಿಕ್ಷಣ ಯೋಜನೆಗೆ 5 ಲಕ್ಷ ರೂಪಾಯಿ ಕೊಡುತ್ತೀರಿ. ಇದನ್ನು ವಯಸ್ಕರ ವಿದ್ಯಾಭ್ಯಾಸಕ್ಕಾಗಿ ಕೊಟ್ಟಿದ್ದೀರಿ. ವಯಸ್ಕರ ವಿದ್ಯಾಭ್ಯಾಸಕ್ಕೆ ಖರ್ಚು ಮಾಡುವುದಕ್ಕೆ ಬದಲಾಗಿ ಬಾಲಕರಲ್ಲಿ ನೈತಿಕ ಮಟ್ಟವನ್ನು ಹೆಚ್ಚಿಸುವ ವಿದ್ಯಾಭ್ಯಾಸಕ್ಕೆ ಉಪಯೋಗಿಸಿದರೆ ಬಹಳ ಒಳ್ಳೆಯದು. ಇದು ಚಿಗುರುವ ಮರ, ಬೆಳೆಯುವ ಮರ ಎಂದು ಹೇಳುತ್ತೇನೆ. ಇದನ್ನು ವಿದ್ಯಾಭ್ಯಾಸದ ಇಲಾಖೆಯವರ ಕೈಗೆ ಕೊಟ್ಟರೂ ಕೊಡಬಹುದು. ಈ ಹಣವನ್ನು ಬಾಲಕರ ನೈತಿಕಮಟ್ಟ ಹೆಚ್ಚಿಸುವುದಕ್ಕೂ ಒಳ್ಳೆಯ ಗುಣಗಳನ್ನು ಬೆಳೆಸಿಕೊಳ್ಳುವುದಕ್ಕೂ ಮತ್ತು ರಾಷ್ಟ್ರೀಯ ರಕ್ಷಣಾದಳದ ಶಿಕ್ಷಣವನ್ನು ಕೊಡುವುದಕ್ಕೂ ಉಪಯೋಗಿಸಿದರೆ, ದೇಶಕ್ಕೂ ಕ್ಷೇಮ, ಮುಂದಿನ ಜನಾಂಗವೂ ಉತ್ತಮಸ್ಥಿತಿಗೆ ಬರುತ್ತದೆ ಎಂದು ಹೇಳುತ್ತೇನೆ.

Sri K. PUTTA SWAMY.—Probably my friend mistakes Adult literacy for Adult education.

ಶ್ರೀ ಕೆ. ಸುಬ್ಬರಾಯರು.—ಆ ರೀತಿ ಏನೂ ಇಲ್ಲ. ಏನೇ ಆಗಲೀ ಈಗ ಶ್ರೀ ಮಾದಯ್ಯಗೌಡರು ಯಾವುದಕ್ಕೆ ಅಧ್ಯಕ್ಷರಾಗಿದ್ದಾರೋ ಅದಕ್ಕೆ ಕೊಡುತ್ತಿರುವ ಹಣದ ವಿಷಯ ನಾನು ಹೇಳುತ್ತೇನೆ. ಈ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ಇಚ್ಛಿಸುತ್ತೇನೆ.

ಅಧ್ಯಕ್ಷರು.—ಅವೆಲ್ಲಾ ಈಗ ಏಕೆ? ಖೋತಾ ನಿರ್ಣಯ ಬಂದಾಗ ಹೇಳಿ.

ಶ್ರೀ ಕೆ. ಸುಬ್ಬರಾಯರು.—ಈಗ ಮಲೆನಾಡಿನ ಅಭಿವೃದ್ಧಿಗೆ ಬೇಕಾದಷ್ಟು ಒತ್ತಾಯ ಸರ್ಕಾರದವರ ಮೇಲಿದೆ. ಈ ವರ್ಷ 81 ಆರೋಗ್ಯ ಕೇಂದ್ರಗಳನ್ನು ಸ್ಥಾಪನೆಮಾಡಿದ್ದೀರಿ. ಬಹಳ ಸಂತೋಷ, ಕೃತಜ್ಞರಾಗಿದ್ದೇವೆ. ಇದರಿಂದ ಎರಡು ಪ್ರಯೋಜನವಿದೆ. ಅದನ್ನು ಸರ್ಕಾರದವರ ಗಮನಕ್ಕೆ ತಂದರೆ ಕೂಡಲೇ ಮಲೆನಾಡಿನವರಿಗೆ ಇನ್ನೂ ಹೆಚ್ಚಿನ ಸಹಾಯ ಒದಗಬಹುದು ಎಂಬ ಉದ್ದೇಶದಿಂದ ಹೇಳುತ್ತೇನೆ. ಮೊದಲನೆಯದು, ಜನರಿಗೆ ಮುಖ್ಯವಾಗಿರಬೇಕಾದ್ದು ಆರೋಗ್ಯ ಭಾಗ್ಯ. ಅದಕ್ಕಿಂತ ಹೆಚ್ಚಿನ ಭಾಗ್ಯವಿಲ್ಲವೆಂಬುದನ್ನು ಹೆಚ್ಚಾಗಿ ವಿವರಿಸಿ ಹೇಳಬೇಕಾಗಿಲ್ಲ, ಕೃಷ್ಣರಾಜನಗರದಲ್ಲಿ ಇಂಥಾ ಆರೋಗ್ಯ ಕೇಂದ್ರಗಳನ್ನು ಮಾಡಿರುವುದರಿಂದ ಜನರು ಆರೋಗ್ಯವಂತರಾಗಿ 2,500 ಎಕರೆ ಹೆಚ್ಚಿಗೆ ಸಾಗುವಳಿ ಮಾಡಿದ್ದಾರೆ. ಹಿಂದೆ ಸಾಗುವಳಿ ಆಗದೇ ಇದ್ದ ಜಮೀನುಗಳಲ್ಲಿ ಸಾಗುವಳಿ ಮಾಡಿ ಹೆಚ್ಚಿನ ಬೆಳೆ ಬೆಳೆದಿದ್ದಾರೆ ಎಂದು ಕೇಳಿದ್ದೇನೆ. ನಿಜವಾಗಿಯೂ ಮಲೆನಾಡಿನಲ್ಲಿ ಲಕ್ಷಾಂತರ ಎಕರೆ ಜಮೀನು ಇರುವಾಗ ಅಲ್ಲಿ ಜನರು ಆರೋಗ್ಯವಂತರಾಗಿ, ದೃಢಕಾಯರಾಗಿ ಇರುವ ಪಕ್ಷದಲ್ಲಿ ಆ ಜಮೀನುಗಳು ಅಭಿವೃದ್ಧಿ ಸ್ಥಿತಿಗೆ ಬರುತ್ತವೆ. ಅವುಗಳನ್ನು ಸಾಗುವಳಿಗೆ ತಂದು ಆಹಾರೋತ್ಪತ್ತಿ ಹೆಚ್ಚು ಮಾಡಬಹುದು. ಇದರಲ್ಲಿ ಖೋತಾ ಮಾಡಬೇಕಾದ ಅವಶ್ಯಕತೆಯಿಲ್ಲವೆಂದು ನನಗೆ ಅನ್ನಿಸುತ್ತದೆ.

ಶ್ರೀ ಎಚ್. ಸಿ. ದಾಸಪ್ಪನವರು.—ಖೋತಾ ಮಾಡಿಲ್ಲ.

ಶ್ರೀ ಕೆ. ಸುಬ್ಬರಾಯರು.—ಈ ಆರೋಗ್ಯ ಕೇಂದ್ರಗಳು ಅಗತ್ಯವಾಗಿ ಬೇಕೇಬೇಕು. ಇನ್ನೂ ಹೆಚ್ಚು ಹೇಳದೆ ಇಷ್ಟು ಮಾತ್ರ ಹೇಳುತ್ತೇನೆ. ಸರ್ಕಾರದವರಿಗೆ ಅನೇಕ ಬಾಬುಗಳಲ್ಲಿ ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಅವಕಾಶವಿದೆ. ಈ ಕೆಲವು ಬಾಬುಗಳನ್ನು ಸರ್ಕಾರದವರು ಗಮನಿಸಿದರೆ ಒಳ್ಳೆಯದು. Introduction of agricultural income-tax, land revenue settlement, careful review of exemption of taxes, general increase in the motor tax to the level of Madras. ಈ ವಿಷಯವಾಗಿ ನಾನು ಎರಡು ಮಾತುಗಳನ್ನು ಹೇಳಬೇಕಾಗಿದೆ. 1936–37ನೆಯ ಇಸವಿಯಿಂದ 1950–51ಕ್ಕೆ ಈ ಅಂಕಿಅಂಶಗಳು ಹೋಲಿಸಿ ನೋಡಿದರೆ ಈ ಲಾರಿ ಬಸ್ಸುಗಳ ಸಂಖ್ಯೆ ಒಂದಕ್ಕೆ ನಾಲ್ಕರಷ್ಟು ಏರಿಹೋಗಿದೆ. ಸರ್ಕಾರದವರು ಈಗಲೂ ಸಹ ಯಾವುದಾದರೂ ಒಂದು ಲೈಸನ್ಸು ಮಂಜೂರುಮಾಡಿ ಕೊಡುತ್ತೇವೆಂದು ಪ್ರಕಟಣೆ ಮಾಡಿದರೆ ನೂರಾರು ಅರ್ಜಿಗಳು ಬರುತ್ತವೆ. ಎಂದ ಮೇಲೆ ಈ ಬಾಬಿನಿಂದ ಜನರು ಎಷ್ಟರಮಟ್ಟಿಗೆ ಹಾಲು ಕರೆಯುತ್ತಿರುತ್ತಾರೆಂಬುದು ಎಲ್ಲರಿಗೂ ವೇದ್ಯವಾಗುತ್ತದೆ. ಏನೇ ಆಗಲೀ ಸರ್ಕಾರದವರು ಹೊಸ ಹೊಸ ತೆರಿಗೆಗಳನ್ನು ವಿಧಿಸುವಂಥ ಮತ್ತು ಹೊಸ ಹೊಸ ಆದಾಯ ಬರುವಂಥ ಮಾರ್ಗಗಳನ್ನು ಕಂಡುಹಿಡಿಯಲೇ ಬೇಕಾಗಿದೆ. ಒಂದು ಕಡೆ ಆಗುತ್ತಿರುವ ನಷ್ಟವನ್ನು ಸರಿಗಟ್ಟಿಕೊಳ್ಳಲು ಮತ್ತೊಂದು ಕಡೆ ಆದಾಯ ಬರುವಂಥ ಮಾರ್ಗವನ್ನು ಕಂಡುಹಿಡಿಯಲೇ ಬೇಕಾಗಿದೆ. ಈಗ ಇಲ್ಲಿಯತನಕ ನಮಗೆ ಈ ಬಾಬಿನಿಂದ ಬರುತ್ತಿದ್ದ 325 ಲಕ್ಷ ರೂಪಾಯಿಗಳು ಈಗ ತಪ್ಪಿ ಹೋದಂತಾಯಿತು. ಆದುದರಿಂದ ಸರ್ಕಾರದವರು ಹೊಸ ಹೊಸ ರೀತಿಯಲ್ಲಿ ಧನಿಕರಾದವರ ಮೇಲೆ ತೆರಿಗೆ ಹಾಕಲು ಮಾರ್ಗವನ್ನು ಕಂಡುಹಿಡಿಯಲೇ ಬೇಕಾಗಿದೆ. ಖರ್ಚಿಗೆ ತಕ್ಕ ಉತ್ಪತ್ತಿ ಇರಲೇಬೇಕು. ಈ ಬಗ್ಗೆ ನಾವೆಲ್ಲರೂ ಸರ್ಕಾರಕ್ಕೆ ನಮ್ಮ ಸಲಹೆಗಳನ್ನು ನೀಡಬೇಕಾಗಿದೆ. ಅದನ್ನ ತಿಳಿಸಲಿಕ್ಕೆ ಹೋದರೆ ಅನೇಕ ವಿಚಾರಗಳಿವೆ. ಆದರೆ ಇನ್ನೂ ಮಾತನಾಡತಕ್ಕ ಮಹನೀಯರು ಬಹಳವಾಗಿರುವುದರಿಂದ ನಾನೊಬ್ಬನೇ ಎಲ್ಲಾ ವಿಷಯಗಳನ್ನೂ ವಿವರಿಸಬೇಕಾಗಿಲ್ಲ. ಒಟ್ಟಿನಲ್ಲಿ ಇಷ್ಟು ಮಾತ್ರ ತಿಳಿಸಬೇಕಾಗಿದೆ. ನಮ್ಮ ಹಣಕಾಸಿನ ಸ್ಥಿತಿಯ ಭದ್ರತೆಗೆ ಏನೂ ಕೊರತೆಯಾಗಿಲ್ಲ. ಆ ಬಗ್ಗೆ ಯಾರೂ ಅಂಜಬೇಕಾದ್ದಿಲ್ಲ. ಈ ಬಾಬುಗಳನ್ನೆಲ್ಲಾ ಮಹನೀಯರುಗಳೂ, ದೊಡ್ಡದೊಡ್ಡ ಬುದ್ಧಿವಂತರೂ ಇರುವ ಸರ್ಕಾರದವರೂ ಮತ್ತು ನಮ್ಮ ಹಣಕಾಸಿನ ಮಂತ್ರಿಗಳೂ ಸೇರಿ ತಯಾರಿಸಿದ್ದಾರೆ. ಇದರಲ್ಲಿ ಯಾವ ನ್ಯೂನಾತಿರಿಕ್ತಗಳೂ ಇಲ್ಲ. ಆದಾಗ್ಯೂ ನಮ್ಮ ಹಣಕಾಸಿನ ಸ್ಥಿತಿಗಳನ್ನು ಉತ್ತಮಪಡಿಸಿಕೊಳ್ಳತಕ್ಕ ಬಗ್ಗೆ ನಾನು ಕೆಲವು ನನ್ನ ಕೈಲಾದಮಟ್ಟಿಗೂ, ರಚನಾತ್ಮಕ ಟೀಕೆಗಳ ಮೂಲಕ ಸಲಹೆಗಳನ್ನು ಸರ್ಕಾರದವರ ಮುಂದಿಟ್ಟಿದ್ದೇನೆ. ಅವುಗಳನ್ನು ಅವರು ತಮ್ಮ ಗಮನಕ್ಕೆ ತೆಗೆದುಕೊಂಡು, ರೈತರಿಗೆ ಒದಗಿಸಬೇಕಾದ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಟ್ಟು, ದೇಶದ ಸುಖಸಂಪತ್ತುಗಳು ಹೆಚ್ಚುವ ರೀತಿಯಲ್ಲಿ ಹೆಚ್ಚು ಹೆಚ್ಚಾಗಿ ತೆರಿಗೆಗಳನ್ನು ಶ್ರೀಮಂತರಾಗಿರತಕ್ಕವರ ಮೇಲೆ ಹಾಕಿ, ಬಡವರು ಬಾಳುವ ರೀತಿ ಕಾನೂನುಗಳಲ್ಲಿ ಬದಲಾವಣೆ ಮಾಡಿ, ದೇಶಕ್ಕೆ ಅನುಕೂಲವನ್ನುಂಟುಮಾಡುತ್ತಾರೆಂದು ನಂಬಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗ ಜಿಲ್ಲೆ).—ಸ್ವಾಮಿ, ನೂತನ ರಾಜ್ಯಾಂಗ ಶಾಸನದ ಪ್ರಕಾರ ಈ ಸಭೆಯ ಮುಂದೆ ಈಗ ಮಂಡಿಸಿರುವ ಪ್ರಥಮ ಬಡ್ಜೆಟ್ಟನ್ನು ಸ್ವಾಗತಿಸುತ್ತ ಕೆಲವು ವಿಷಯಗಳನ್ನು ಮಾನ್ಯ ಸಭೆಯವರ ಗಮನಕ್ಕೆ ತರಲಿಚ್ಛಿಸುತ್ತೇನೆ. ನಮಗೆ ಸ್ವಾತಂತ್ರ್ಯ ಬಂದ ಮೇಲೆ ನಮ್ಮ ಎಲ್ಲಾ ಆದಾಯ ಮತ್ತು ಖರ್ಚು ಬಾಬುಗಳು ಜಾಸ್ತಿಯಾಗಲೇಬೇಕಾದುದು ಸಹಜವಾದುದೆಂಬ ಒಂದು ತತ್ವವನ್ನು ಗಮನದಲ್ಲಿಟ್ಟುಕೊಂಡು. ಮುಂದಿನ ದೇಶಾಭ್ಯುದಯ ಬಾಬುಗಳಿಗಾಗಿ ಸರ್ಕಾರದವರು ಹೆಚ್ಚು ಹೆಚ್ಚು ಹಣವನ್ನು ಒದಗಿಸಿರುತ್ತಾರೆಯೇ, ಸರ್ಕಾರಕ್ಕೆ ಹಣ ಒದಗಿಸಿಕೊಳ್ಳತಕ್ಕ ಬಗ್ಗೆ ಹೊಸ ಹೊಸ ವಿಧಾನದಲ್ಲಿ ತೆರಿಗೆಯನ್ನು ಹಾಕಲು ಸರ್ಕಾರದವರು ಯಾವುದಾದರೂ ಮಾರ್ಗವನ್ನು ಹೊಸದಾಗಿ ಕಂಡುಹಿಡಿದಿದ್ದಾರೆಯೇ, ಎಂಬೀ ಅಂಶಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ವಿಮರ್ಶೆ ಮಾಡುವುದು ಉಚಿತವಾಗಿರುತ್ತೆ. ಈ ದೃಷ್ಟಿಯಿಂದ ನೋಡುವುದಾದರೆ ನಮ್ಮ ಮುಂದಿರತಕ್ಕ ಬಡ್ಜೆಟ್ ಸಂಪೂರ್ಣವಾಗಿ ಸಮರ್ಪಕವಾಗಿದೆಯೆಂದು ಹೇಳಬೇಕಾಗಿದೆ.

ಸರ್ಕಾರದವರು ಉತ್ಪತ್ತಿಯನ್ನು ಹೆಚ್ಚುಮಾಡಿಕೊಳ್ಳತಕ್ಕ ಬಗ್ಗೆ ಅನುಸರಿಸಿರುವ ರೀತಿ ನೀತಿಗಳ ವಿಷಯದಲ್ಲಿ ನಾನು ಕೆಲವು ಮಾತುಗಳನ್ನಾಡಲು ಇಚ್ಛಿಸುತ್ತೇನೆ. ತೆರಿಗೆಯನ್ನು ವಿಧಿಸತಕ್ಕ ವಿಚಾರದಲ್ಲಿ ಸರ್ಕಾರದವರು ಅದನ್ನೆಲ್ಲಾ ಶ್ರೀಮಂತರ ಮೇಲೆ ಮತ್ತು ತೆರಿಗೆಯನ್ನು ಹೊರಬಲ್ಲ ಧನಿಕರುಗಳ ಮೇಲೆ ಮಾತ್ರ ವಿಧಿಸುವಂತೆ ಅವರು ಕಾನೂನುಗಳನ್ನು ಮಾಡಬೇಕೇ ಶಿವಾಯಿ ಬಡವನ ಮೇಲೆ ಈ ವಜೆ ಬೀಳದಂತೆ ನೋಡಿಕೊಳ್ಳಬೇಕಾಗುತ್ತದೆಂದು ಸೂಚಿಸುತ್ತೇನೆ.

ಹಿಂದೆ ಒಂದಾವರ್ತಿ ನಾನು ಇದೇ ಬಡ್ಜೆಟ್ಟಿನ ಸಂದರ್ಭದಲ್ಲಿ ಭಾಷಣ ಮಾಡುತ್ತಿದ್ದಾಗ, ಇಂದಲ್ಲ ನಾಳೆ, ಎಂದೇ ಆಗಲಿ ನಮ್ಮ ದೇಶ ಕಮ್ಯುನಿಸ್ಟರ ಕೈಗೆ ಸೇರದಿರುವಂತೆ ಮಾಡಬೇಕಾಗಿದ್ದರೆ, ಇಂದೇ ನಾವು ನಮ್ಮ ದೇಶದಲ್ಲಿ ಬಡವರಿಗೂ, ಶ್ರೀಮಂತರಿಗೂ ಇರತಕ್ಕ ಅಜಗಜಾಂತರ ವ್ಯತ್ಯಾಸವನ್ನು ಕೂಡಲೇ ತಪ್ಪಿಸಬೇಕೆಂಬ ಒಂದು ಸೂಚನೆಯನ್ನು ಅಂದೇ ನಾನು ಕೊಟ್ಟಿದ್ದೇನೆ. ಆ ದೃಷ್ಟಿಯಿಂದ ನಾನೀಗ ಈ ಬಡ್ಜೆಟ್ಟನ್ನು ವಿಮರ್ಶೆಮಾಡುತ್ತಿದ್ದೇನೆ. ನಾನು ಈಗ ಇತರ ವಿಷಯವಾಗಿ ಅಷ್ಟು ಹೆಚ್ಚು ಪ್ರಸ್ತಾಪಮಾಡುವುದಿಲ್ಲ. ಆಗಲೇ ಶ್ರೀಮಾನ್ ಕೆ. ಸುಬ್ಬರಾಯರು ತಿಳಿಸಿದ ಪ್ರಕಾರ ತಾವು ಹಾಕತಕ್ಕ ತೆರಿಗೆಗಳೆಲ್ಲವೂ ಶ್ರೀಮಂತರ ಮೇಲೆ ಬೀಳುವಂತಿರಬೇಕೇ ಹೊರತು, ಬಡವರ ಮೇಲೆ ಬೀಳಬಾರದು. ಆದರೆ ಅಂಥಾ ದೊಡ್ಡ ದೊಡ್ಡ ಶ್ರೀಮಂತರಾಗಿರುವವರು ಈಗ ಕೊಡುತ್ತಿರುವ ತೆರಿಗೆಗಳೆಲ್ಲವೂ ಕೇಂದ್ರ ಸರ್ಕಾರಕ್ಕೇ ಹೋಗತಕ್ಕವುಗಳಾಗಿವೆ. ಆದುದರಿಂದ ಈಗ ತಾವೊಂದು ಕ್ರಾಂತಿಕಾರಕ ಕಾರ್ಯ ಕ್ರಮವನ್ನು ಜಾರಿಗೆ ತಂದು ತಾವು property tax ಎಂಬುದಾಗಿ ಅವರೆಲ್ಲರ ಮೇಲೂ ವಿಧಿಸಬಹುದಾಗಿದೆ. ಇದರ ಬಗ್ಗೆ ತಾವು ಒಂದು ಕಮಿಟಿಯನ್ನು ಬೇಕಾದರೆ ಇಟ್ಟುಕೊಳ್ಳಬಹುದು. 50,000 ರೂಪಾಯಿಗಳ ಮೇಲ್ಪಟ್ಟು ಆಸ್ತಿ ಇರತಕ್ಕವರೆಲ್ಲರೂ ಈ property tax ಕೊಡಬೇಕೆಂದು ತಾವು ವಿಧಾಯಕವಮಾಡಬಹುದು. ಹಾಗೆ ಮಾಡುವುದು ಸೂಕ್ತವೆಂದು ನಾನು ತಿಳಿಸುತ್ತೇನೆ.

ಇದೇ ರೀತಿ ಭೋಗ್ಯವಸ್ತುಗಳನ್ನು ಉಪಯೋಗಿಸತಕ್ಕವರ ಮೇಲೂ ತಾವು ಸುಂಕವನ್ನು ವಿಧಿಸಬಹುದು. ಇದು ಕೂಡ ಸೂಕ್ತವಾದುದೆಂದು ಹೇಳುತ್ತೇನೆ.

ಆದರೆ ನಮ್ಮಲ್ಲಿ ಕೆಲವರಿಗೆ ಒಂದು ಮನೋಭಾವ ಕೆಲವು ವರ್ಷಗಳಿಂದೀಚೆಗೆ ಕಂಡುಬರುತ್ತಿದೆ. ಅದೇನೆಂದರೆ ಒಂದು ಕಡೆ ಅಭ್ಯುದಯದ ಕೆಲಸಗಳಿಗಾಗಿ ಹೆಚ್ಚು ಹೆಚ್ಚು ಹಣವನ್ನು ಒದಗಿಸಬೇಕೆಂದು ಹೆಚ್ಚು ಹೆಚ್ಚಾಗಿ ಸ್ಕೂಲುಗಳನ್ನೂ, ಆಸ್ಪತ್ರೆಗಳನ್ನೂ ಕಟ್ಟಿಸಿಕೊಡಬೇಕೆಂದು ಒತ್ತಾಯಪಡಿಸುತ್ತಾ, ಮತ್ತೊಂದು ಕಡೆ ತೆರಿಗೆ ವಿಧಿಸಬೇಡಿ, ಎಂದು ಹೇಳುತ್ತಿರುವುದನ್ನು ನೋಡಿದರೆ, "ಅಕ್ಕಿಯ ಮೇಲೆ ಆಸೆ ನೆಂಟರ ಮೇಲೆ ಪ್ರೀತಿ" ಎಂಬುವ ಹಾಗೆ ಮಾಡಿದರೆ ಹೇಗೆ ಸಾಧ್ಯವಾಗುತ್ತದೆ! ದೇಶಕ್ಕೆ ಈಗತಾನೆ ಇನ್ನೂ ಸ್ವಾತಂತ್ರ್ಯ ಲಭಿಸಿದೆ. ಇಂಥಾ ಸಮಯದಲ್ಲಿ ಹಾಗೆ ಸಂಪಾದಿಸಿದ ಸ್ವಾತಂತ್ರ್ಯ ಉಳಿಸಿಕೊಳ್ಳಲು ಹೊಸ ತೆರಿಗೆಗಳನ್ನು ಕೊಡಲೇಬೇಕಾಗಿದೆ. ದೇಶದಲ್ಲಿ ಹೊಸ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಬೇಕಾಗಿದೆ. ಜನಗಳನ್ನು ಕೇಳಿ, ನೀವು ತೆರಿಗೆ ಕೊಡುತ್ತೀರಾ, ನಿಮ್ಮ ಮೇಲೆ ತೆರಿಗೆ ಹಾಕಬಹುದೇ ಎಂದು ಕೇಳುತ್ತಾ ಹೋದರೆ ಅದಕ್ಕೆ ಯಾರೂ ಸಮ್ಮತಿಪಡುವುದಿಲ್ಲ. ಆದುದರಿಂದ ತೆರಿಗೆ ವಿಧಿಸತಕ್ಕ ಸಂದರ್ಭದಲ್ಲಿ ಟೀಕೆ ಟಿಪ್ಪಣಿಗಳು ಬಂದೇ ಬರುತ್ತವೆ. ಆದರೆ ಅವುಗಳಿಗೆ ಜಗ್ಗದೆ ಮತ್ತು ಅಂಜಿಕೊಳ್ಳದೆ ಸರ್ಕಾರದವರು ಧೈರ್ಯವಾಗಿ ಅವರ ಆಕ್ಷೇಪಣೆಗಳಿಗೆ ಹೆದರದಂತೆ ಇದನ್ನು ಶ್ರೀಮಂತರ ಮೇಲೆ ವಿಧಿಸತಕ್ಕದ್ದು ಮತ್ತು ಅದೇ ರೀತಿ ಕಡ್ಡಾಯವಾಗಿ ಅದನ್ನು ನಿರ್ದಾಕ್ಷಿಣ್ಯವಾಗಿ ವಸೂಲು ಮಾಡತಕ್ಕದ್ದು ನ್ಯಾಯವಾದುದೆಂದು ನಾನು ಸೂಚಿಸುತ್ತೇನೆ.

ಇದೇ ರೀತಿ ಹೇಳುವುದಾದರೆ, ಹೊಸ ತೆರಿಗೆಗಳ ಜೊತೆಗೆ ಸರ್ಕಾರದ ಆಡಳಿತದ ಖರ್ಚುಗಳನ್ನು ಕೂಡ ಆದಷ್ಟು ಕಡಿಮೆಮಾಡಬೇಕೆಂಬ ತತ್ವವನ್ನು ಸರ್ಕಾರದವರು ಗಮನದಲ್ಲಿಟ್ಟುಕೊಳ್ಳಬೇಕು. ನಾನಾ ಬಾಬುಗಳಿಗೆ ಒದಗಿಸಿತಕ್ಕ ಹಣ ಸರಿಯಾಗಿ ಖರ್ಚಾಗುತ್ತಿದೆಯೇ ಇಲ್ಲವೇ ಎಂಬುದನ್ನು ನಾವು ಬಹಳ ಕೂಲಂಕಷವಾಗಿ ನೋಡಬೇಕಾಗಿದೆ. ಅನೇಕ ಬಾಬುಗಳಲ್ಲಿ ಈಗ ಒದಗಿಸಿರತಕ್ಕ ಹಣ ಸಾಲದೆಂದು ಹೇಳಿದರೂ ಕೂಡ ಕೆಲವು ಬಾಬುಗಳಲ್ಲಾದರೂ ಖರ್ಚನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಿದೆಯೆಂಬುದನ್ನು ನಾನು ಸೂಚಿಸಬಿಚ್ಛಿಸುತ್ತೇನೆ. ರೆವೆನ್ಯೂ ಇಲಾಖೆಯಲ್ಲಿ ಡಿಸ್ಟ್ರಿಕ್ಟ್‌ಗಳನ್ನು ಕಡಿಮೆಮಾಡುವುದಕ್ಕೂ. ಡೆಪ್ಯುಟಿ ಕಮಿಷನರ ದರ್ಜೆಯ ಕೆಲವು ಅಧಿಕಾರಿಗಳನ್ನು ಕಡಿಮೆ ಮಾಡುವುದಕ್ಕೂ ಸಾಧ್ಯವಿದೆಯೆಂದು ನಾನು ಸೂಚನೆ ಮಾಡುತ್ತೇನೆ. ಹಾಗೆಯೇ ಕೆಲವು ತಾಲ್ಲೂಕುಗಳ ಸಂಖ್ಯೆಯನ್ನೂ ಸಹ ಖೋತಾ ಮಾಡಬಹುದು.

ಆಮೇಲೆ ಭೂಕಂದಾಯದ ಇಲಾಖೆಯ ವಿಚಾರದಲ್ಲಿ ಇನ್ನೊಂದು ವಿಷಯ ಹೇಳುತ್ತೇನೆ. ಈಗ ಲ್ಯಾಂಡ್ ರೆವೆನ್ಯೂ ರಿವಿಜನ್ ಸಮಿತಿಯವರು ಒಂದು ಇಂಟರಿಮ್ ವರದಿಯನ್ನು ಕಳುಹಿಸಿಕೊಟ್ಟಿದ್ದಾರೆಂದು ತಿಳಿದುಬಂದಿದೆ. ಆ ವರದಿಯನ್ನು ಕೂಡಲೇ ಒಪ್ಪಿಕೊಂಡು ಆದಷ್ಟು ಜಾಗ್ರತೆ ಸರ್ಕಾರಿ ಹುಕುಮನ್ನು ಹೊರಡಿಸುವುದು ಸೂಕ್ತವೆಂದು ಹೇಳುತ್ತೇನೆ.

ಭೂಕಂದಾಯದ ವಿಷಯವನ್ನು ಪ್ರಸ್ತಾಪಮಾಡುವಾಗ ಮಲೆನಾಡಿಗೆ ಸಂಬಂಧಪಟ್ಟಂತೆ ಒಂದಂಶವನ್ನು ಹೇಳಬೇಕೆಂದಿದ್ದೇನೆ. ಮೈದಾನ ಪ್ರಾಂತಗಳಲ್ಲಿಲ್ಲದ ಒಂದು ವಿಶೇಷ ಸಮಸ್ಯೆ ಮಲೆನಾಡು ಪ್ರದೇಶದಲ್ಲಿದೆ. ಮಲೆನಾಡಿನಲ್ಲಿ ಹಿಡುವಳಿದಾರರು ಕಡಿಮೆ; ಗೇಣಿದಾರರು ಜಾಸ್ತಿ. ಮೈದಾನದಲ್ಲಿ ಸ್ವಂತಸಾಗುವಳಿ ಮಾಡುವ ಹಿಡುವಳಿದಾರರುಗಳೇ ಜಾಸ್ತಿ. ಇದರಿಂದ ಗೇಣಿದಾರರಿಗೂ ಜಮೀನುದಾರರುಗಳಿಗೂ ಚರ್ಚೆಗಳು ಪ್ರಾರಂಭವಾಗಿ ಸಾಗರ ತಾಲ್ಲೂಕಿನಲ್ಲಿ ಕೆಲವು ಕಡೆಗಳಲ್ಲಿ ಹೊಡೆದಾಟಗಳು ಸಂಭವಿಸಿರುವುದೂ ಉಂಟು. ಆದ್ದರಿಂದ ಮಲೆನಾಡಿಗೆ ಅನ್ವಯಿಸುವಂತೆ ಒಂದು ಗೇಣೀದಾರರ ಕಾನೂನನ್ನು ಅತಿ ಜರೂರಾಗಿ ಜಾರಿಗೆ ತರುವುದು ಅತ್ಯಗತ್ಯವೆಂದು ಹೇಳುತ್ತೇನೆ. ಬಹುಶಃ ಇಲ್ಲಿನತಕ್ಕ ಮಾನ್ಯ ಸದಸ್ಯರುಗಳನೇಕರಿಗೆ ಗೇಣಿದಾರರ ಸಮಸ್ಯೆಯೆಂದರೆ ಏನೆಂದು ಅರ್ಥವಾಗದಿರಬಹುದು. ಮಾನ್ಯ ಮಂತ್ರಿಗಳಿಗೂ ಗೊತ್ತಿದೆಯೋ ಇಲ್ಲವೋ ಹೇಳಲಾರೆ.

ಶ್ರೀ ಎಚ್. ಸಿ. ದಾಸಪ್ಪನವರು.—ರೆವೆನ್ಯೂ ಮಂತ್ರಿಗಳು ಮಲೆನಾಡಿನವರೇ ಆಗಿರುವಾಗ ಈ ರೀತಿ ಅಪಾದನೆಮಾಡುವುದು ಸರಿಯಲ್ಲ.

ಶ್ರೀ ಕಡಿದಾಳ್ ಮಂಜಪ್ಪನವರು.—ಇನ್ನು ವ್ಯವಸಾಯ ಮತ್ತು ಆಹಾರದ ಇಲಾಖೆಗೆ ಸಂಬಂಧಪಟ್ಟ ಒಂದೆರಡು ಮಾತುಗಳನ್ನು ಹೇಳುತ್ತೇನೆ. ನಿನ್ನೆ ದಿನ ಒಂದು ಉಪಪ್ರಶ್ನೆಗೆ ಉತ್ತರಕೊಡುತ್ತಾ ಕಳೆದವರ್ಷ ಇದ್ದ ತರೀ ಸಾಗುವಳಿ ಪ್ರದೇಶದ ವಿಸ್ತೀರ್ಣಕ್ಕಿಂತ ಈ ಸಾರಿ 2,000 ಎಕರೆಗಳಷ್ಟು ಕಡಿಮೆಯಾಗಿದೆಯೆಂದು ಹೇಳಿದರು. ಅದಕ್ಕೆ ಏನೇನೋ ಕಾರಣಗಳನ್ನು ಕೊಟ್ಟರು. ಆದರೆ ನನ್ನ ಅಭಿಪ್ರಾಯದಲ್ಲಿ ಒಂದು ಪ್ರಬಲವಾದ ಕಾರಣವಿದೆ. ಸರ್ಕಾರದವರು ಹೆಚ್ಚು ಬೆಳೆ ಬೆಳೆಯುವ ಯೋಜನೆಗೆ ಅನೇಕ ವಿಧಗಳಲ್ಲಿ ಖರ್ಚು ಮಾಡಿದ್ದರೂ, ಅನೇಕ ವಿಧಗಳಲ್ಲಿ ರೈತರಿಗೆ ಪ್ರೋತ್ಸಾಹಕೊಡುತ್ತಿದ್ದರೂ ರೈತರು ಹೆಚ್ಚು ಬೆಳೆಯುತ್ತಿಲ್ಲ. ಒಂದು ಹೋಟಲಿಡುವುದಕ್ಕೆ ಲೈಸೆನ್ಸ್ ಕೊಡುತ್ತೇನೆಂದು ಹೇಳಿದರೆ ಸಾಕು, ಎಷ್ಟೋ ಜನರು ಮುಂದೆ ಬರುತ್ತಾರೆ! ಒಂದು ಬಸ್ಸು ಲೈಸೆನ್ಸ್ ಕೊಡುತ್ತೇನೆಂದರೆ ಎಷ್ಟೋ ಜನರು ಓಡಿಸುವುದಕ್ಕೆ ಸಿದ್ಧವಾಗಿರುತ್ತಾರೆ. ಆದರೆ ವ್ಯವಸಾಯದ ವಿಷಯದಲ್ಲಾದರೋ ನೀರಾವರೀ ಸೌಲಭ್ಯ, ಗೊಬ್ಬರದ ಸೌಲಭ್ಯ ಕೊಟ್ಟರೂ ವ್ಯವಸಾಯಾಭಿವೃದ್ಧಿ ಏಕೆ ಆಗುತ್ತಿಲ್ಲವೆಂಬುದನ್ನು ಯೋಚನೆ ಮಾಡಬೇಕಾಗಿದೆ. ಎಲ್ಲಿಯವರೆಗೆ ಸರ್ಕಾರದವರು $1\frac{1}{2}$ ಕೋಟಿ ರೂಪಾಯಿಗಳನ್ನು ನಷ್ಟಮಾಡಿಕೊಂಡು ಪಟ್ಟಣಿಗರಿಗೆ ಮಾತ್ರ ಆಹಾರವನ್ನು ಒದಗಿಸುತ್ತಾರೋ ಅಲ್ಲಿಯವರೆಗೆ ಪಟ್ಟಣಿಗರಿಗೆ ಹಳ್ಳಿಗಳ ಕಡೆ ಹೋಗುವುದಕ್ಕೆ ಇಷ್ಟವಾಗುವುದಿಲ್ಲ ಮತ್ತು ಹಳ್ಳಿಗರಿಗೆ ಪಟ್ಟಣದ ಕಡೆಗೆ ವಲಸೆಹೋಗುವ ಆಸೆ ಹೋಗುವುದಿಲ್ಲ.

ಇನ್ನು ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ ಒಂದು ಮಾತು. ಅಲ್ಲಿಯೂ ಅನೇಕ ಬಾಬುಗಳಲ್ಲಿ ಖರ್ಚು ಕಡಿಮೆಮಾಡಲಿಕ್ಕೆ ಸಾಧ್ಯವಿದೆ. ಅಲ್ಲಿರುವ ಅಧಿಕಾರ ವರ್ಗವನ್ನು ನೋಡುವುದಾದರೆ, ಚೀಫ್ ಕನ್ಸರ್ವೇಟರು, ಅಸಿಸ್ಟೆಂಟ್ ಕನ್ಸರ್ವೇಟರು, ಸಬ್ ಅಸಿಸ್ಟೆಂಟ್ ಕನ್ಸರ್ವೇಟರು, ಫಾರೆಸ್ಟ್ ರೇಂಜರು, ಇತ್ಯಾದಿ ಎಷ್ಟು ಆಫೀಸರುಗಳಿದ್ದಾರೆ!! ಅದೇ ನೆರೆ ಪ್ರಾಂತ್ಯವಾದ ಮದ್ರಾಸಿನಲ್ಲಿ ನೋಡುವುದಾದರೆ, ಅಲ್ಲಿ ಒಂದೊಂದು ಡಿವಿಜನ್ನೂ ಇಲ್ಲಿನದಕ್ಕೆ ಒಂದಕ್ಕೆರಡರಷ್ಟು ದೊಡ್ಡದಾಗಿದೆ. ಅಲ್ಲಿ ಒಬ್ಬರೇ ಒಬ್ಬರು ಫಾರೆಸ್ಟ್ ಆಫೀಸರಿರುವ ಕಡೆ ಇಲ್ಲಿ ಆರು ಜನ ಕೆಲಸಮಾಡುತ್ತಾರೆ. ಇಲ್ಲಿ ಒಂದೊಂದು ಪ್ರದೇಶಕ್ಕೆ ಎರಡು ಮೂರು ಜನ ಫಾರೆಸ್ಟ್ ಆಫೀಸರುಗಳಿರುವುದೂ ಉಂಟು. ಉದಾಹರಣೆಗೆ ಶಿವಮೊಗ್ಗದಲ್ಲಿ ಭದ್ರಾವತಿ ಡಿವಿಜನ್‌ಗೇ ಒಬ್ಬರು, ಸಾಗರಕ್ಕೇ ಒಬ್ಬರು, ಶಿವಮೊಗ್ಗಾಕ್ಕೆ ಒಬ್ಬರು.

ಶ್ರೀ ಎಚ್. ಸಿ. ದಾಸಪ್ಪನವರು.—ಭದ್ರಾವತಿಯಲ್ಲಿರುವುದು ಸೌದೆ ಸಬ್ ಡಿವಿಜನ್ನು.

Sri L. SIDDAPPA (Shimoga District—General).—There are two Forest Officers one in charge of fuel operations and the other for the district !!

ಶ್ರೀ ಕಡಿದಾಳ್ ಮಂಜಪ್ಪನವರು.—ಆಮೇಲೆ ಟಿಂಬರ್ ಕಂಟ್ರೋಲಿನ ವಿಚಾರದಲ್ಲಿ ಒಂದು ವಿಷಯ ಹೇಳಬೇಕಾಗಿದೆ. ಟಿಂಬರ್ ವಿಷಯದಲ್ಲಿ ಕಳ್ಳ ಸಾಗಾಣಿಕೆಯನ್ನು ತಪ್ಪಿಸಬೇಕೆಂದೇನೋ ತಾವಿದನ್ನು ತಂದು ಹಾಕಿದಿರಿ. ಇದರಿಂದ ಈ ಕಳ್ಳತನವೇನೋ ಕಡಿಮೆಯಾಗಿದೆ, ನಿಜ. ಆದರೆ ಮಲೆನಾಡಿನ ಜನ ಸಾಮಾನ್ಯಕ್ಕೆ ಇದು ಎಷ್ಟು ತೊಂದರೆಗೆ ಕಾರಣವಾಗಿದೆಯೆಂಬುದನ್ನು ಹೇಳತೀರದು. ಒಂದು ಕೊಯ್ಯದ ಪರ್ಮಿಟ್ ತೆಗೆದುಕೊಳ್ಳಬೇಕೆಂದರೂ ಬಹಳ ಕಷ್ಟವಿದೆ. ರೈತರಿಗೆ ಈ ಆರ್ಡರಿನಿಂದ ಬಹಳ ಹಿಂಸೆಯಾಗುತ್ತಿದ್ದು, ಮಲೆನಾಡಿನಲ್ಲಿ ಜೀವನಮಾಡುವುದೇ ಕಷ್ಟವಾಗಿ ಪರಿಣಮಿಸಿದೆ. ಸಣ್ಣಪುಟ್ಟ ಅಧಿಕಾರಿಗಳ ಕೈಯಲ್ಲಿ ಪಡುವ ಹಿಂಸೆಯನ್ನು ಸಹಿಸಿಕೊಂಡಿರುವುದು ಮಲೆನಾಡಿನ ರೈತರಿಗೆ ಬಹಳ ದುಸ್ಸಹವಾಗಿದೆ.

ಎಕ್ಸೈಸ್ ಇಲಾಖೆಯ ವಿಚಾರ. ಮನುಷ್ಯರನ್ನು ಒಂದೇ ಸಾರಿ ದೇವರನ್ನಾಗಿ ಮಾಡುವುದಕ್ಕೆ ಪ್ರಯತ್ನ ಪಡುವುದೂ ಸರಿಯಲ್ಲವೆಂದು ಕಾಣುತ್ತದೆ. ಕುಡಿತವೆಂಬುದು ವೇದಗಳ ಕಾಲದಿಂದಲೂ ಬಂದಂಥಾದ್ದು. ಅದನ್ನೀಗ ತಕ್ಷಣ ತಪ್ಪಿಸಿ ಪಾನನಿರೋಧದಲ್ಲಿ ನಾವು ಎಷ್ಟುಮಟ್ಟಿಗೆ ಜಯಪ್ರದವಾಗುತ್ತೇವೆಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳಲಾರೆ. ಆದ್ದರಿಂದ ನನಗನ್ನಿಸುವುದೇನೆಂದರೆ, ಕುಡಿಯುವುದಕ್ಕೆ ಒಂದು ಮಾರ್ಗ ಇರುವುದೂ ವಾಸಿ ಎಂದು.

ಒಬ್ಬ ಸದಸ್ಯರು.—ಅದರಲ್ಲೂ ಮಲೆನಾಡಿನಲ್ಲಿ.

ಶ್ರೀ ಕಡಿದಾಳ್ ಮಂಜಪ್ಪನವರು.—ನನ್ನ ವೈಯಕ್ತಿಕ ಅಭಿಪ್ರಾಯವನ್ನು ಹೇಳುವುದಾದರೆ ಹೆಂಡ ಮತ್ತು ಬೀರ್ ಇವೆರಡನ್ನು ಮಾತ್ರ ಕುಡಿಯುವುದಕ್ಕೆ ಆಸ್ಪದ ಕೊಟ್ಟು ಬಾಕಿ ಮಾದಕ ಪದಾರ್ಥಗಳನ್ನು ನಿಷೇಧಿಸಬಹುದೆಂದು ಹೇಳುತ್ತೇನೆ.

Sri L. SIDDAPPA.—How about Akki Bhoja, Sir?

Sri H. C. DASAPPA.—That is regular arrack.

ಶ್ರೀ ಕಡಿದಾಳ್ ಮಂಜಪ್ಪನವರು.—ಸೇಲ್ಸ್ ಟ್ಯಾಕ್ಸ್ ವಿಷಯದಲ್ಲಿ ಕೆಲವು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಸೇಲ್ಸ್‌ಟ್ಯಾಕ್ಸ್‌ನಿಂದ ಈಗ ಕೊಳ್ಳುವವರಿಗೂ ಪ್ರಾಮಾಣಿಕತೆಯುಳ್ಳ ವರ್ತಕರಿಗೂ ತೊಂದರೆಯಾಗುತ್ತಿದೆಯೇ ವಿನಾ unscrupulous ವರ್ತಕರಿಗೇನೂ ತೊಂದರೆಯಿಲ್ಲ. ಇದನ್ನು ತಪ್ಪಿಸಬೇಕಾದರೆ single pointನಲ್ಲಿ ತೆರಿಗೆ ಹಾಕಿದರೇನೇ ಒಳ್ಳೆಯದು. ಇದರಿಂದ ವರ್ತಕರಿಗೂ ಪ್ರಯೋಜನವಿದೆ, ಬಳಸುವವರಿಗೂ ಪ್ರಯೋಜನವಿದೆ ಅನೇಕ ಸಂದರ್ಭಗಳಲ್ಲಿ ಇದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದರೂ ಇದನ್ನಿನ್ನೂ ಏರ್ಪಾಡುಮಾಡಿಲ್ಲ. ಅದರಲ್ಲಿರುವ ತೊಂದರೆಯೇನೋ ತಿಳಿಯದು.

ಶ್ರೀ ಎಚ್. ಸಿ. ದಾಸಪ್ಪನವರು.—ಹೋದಸಲವೇ ಉತ್ತರ ಕೊಟ್ಟಿದ್ದೇನೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಸರ್ಕಾರದ ಸಾಮಾನ್ಯಾಡಳಿತದ ವಿಚಾರದಲ್ಲೂ ಹೇಳುವುದಾದರೆ, ಅನೇಕ ಬಾಬುಗಳಲ್ಲಿ ಖರ್ಚು ಕಡಿಮೆಮಾಡುವುದಕ್ಕೆ ಸಾಧ್ಯವಿದೆ. Guest Houses ಗಳಿಗೆ ಈಗ ವಿಪರೀತ ಹಣ ಖರ್ಚಾಗುತ್ತಿದೆ. ಅಂದ ಮಾತ್ರಕ್ಕೇ ಹೊರಗಿನಿಂದ ಬಂದವರಿಗೆ ಸರಿಯಾಗಿ ಆತಿಥ್ಯ ತೋರಿಸಕೂಡದೆಂದು ನಾನು ಹೇಳುವುದಿಲ್ಲ. ಆದರೂ ನಮ್ಮ ಖರ್ಚಿನಲ್ಲಿ ಮಿತವ್ಯಯ ಮಾಡಬಹುದೆಂದು ಸೂಚಿಸುತ್ತೇನೆ.

ಇನ್ನು ರೆಕ್ರೂಟ್‌ಮೆಂಟ್ ವಿಚಾರದಲ್ಲಿ ಒಂದೆರಡು ಮಾತು. ಶೀಘ್ರದಲ್ಲೇ ಪಬ್ಲಿಕ್ ಸರ್ವಿಸ್ ಕಮಿಷನ್ ಸ್ಥಾಪಿತವಾಗಲಿದೆ. ಈ ಕಮಿಷನ್‌ಗೆ ದಾರಿ ತೋರಿಸುವಂಥ ಕೆಲವು ಕಾನೂನುಗಳನ್ನು ಮಾಡುತ್ತಾರೆಂದು ನಾನು ಭಾವಿಸಿದ್ದೇನೆ. ಹಾಗೆ ಮಾಡುವಾಗ ಅದರಲ್ಲಿ ಕೆಲವು ಲೋಪದೋಷಗಳಿರಬಹುದೆಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಮೈಸೂರು ದೇಶದಲ್ಲಿ ರಾಜಕೀಯವೆಂದರೆ ನೌಕರಿ ರಾಜಕೀಯ. ಸಾಮಾನ್ಯ ವಿದ್ಯಾವಂತರ ದೃಷ್ಟಿ, ಯಾರನ್ನು ನೌಕರಿಗೆ ನೇಮಿಸುತ್ತಾರೆ, ಯಾರಿಗೆ ಬಡ್ತಿ ಕೊಡುತ್ತಾರೆ ಎಂಬೀ ವಿಚಾರದ ಕಡೆಗೆ ಹೋಗುತ್ತದೆಯೇ ಹೊರತು, ಬಡತನ ನಿವಾರಣೆ, ಅವಿದ್ಯೆಯ ನಿವಾರಣೆ ಎಂಬ ಸಮಸ್ಯೆಗಳ ಕಡೆಗೆ ಹೋಗುವುದೇ ಇಲ್ಲ. ಹೀಗಾದರೆ ಬಡತನ ಹೇಗೆ ನಿವಾರಣೆಯಾದೀತು ! ನೌಕರಿ ವಿಚಾರದಲ್ಲಿ ಅನವಶ್ಯಕ ಪ್ರಾಶಸ್ತ್ಯವನ್ನು ಕೊಡುತ್ತಿದ್ದಾರೆ. ಅದೊಂದು ಬ್ಲಾಕ್‌ಮಾರ್ಕೆಟ್ ಎನ್ನಬಹುದು. ನನ್ನ ವೈಯಕ್ತಿಕ ಅಭಿಪ್ರಾಯದಲ್ಲಿ ಹಿಂದುಳಿದ ಪಂಗಡದವರಿಗೆ ಪ್ರಾಶಸ್ತ್ಯ ದೊರೆಯಬೇಕಾದ್ದು ಅಗತ್ಯ. ಆದರೆ ಒಂದೊಂದು ಕೋಮಿಗೂ ವಿಶೇಷ ಗಮನಕೊಟ್ಟು ಹರಿದು ಹಂಚುವುದಕ್ಕೆ ಅವಕಾಶಕೊಡಬಾರದು. ಸದ್ಯದ ಪರಿಸ್ಥಿತಿಯಲ್ಲಿ ಜಾತಿ ಜಾತಿಯಲ್ಲಿಯೂ ಒಳಜಾತಿಗಳನ್ನು ವಿಂಗಡಿಸುತ್ತಾ ಹೋದರೆ, ಅದು ದೇಶದ ಹಿತದೃಷ್ಟಿಯಿಂದ ಒಳ್ಳೆಯದಲ್ಲವೆಂದು ಭಾವಿಸುತ್ತೇನೆ. ಅದಕ್ಕೆ ನಾನು ಇಷ್ಟುಮಾತ್ರ ಹೇಳುತ್ತೇನೆ ಇದರಲ್ಲಿ A, B, C ಎಂದು ಮೂರು ಪಂಗಡಮಾಡಿ ಒಂದು ಲಿಸ್ಟಿನಲ್ಲಿ ಸರ್ಕಾರಿ ನೌಕರಿಗಳಲ್ಲಿ ಹೆಚ್ಚು ಪ್ರಾತಿನಿಧ್ಯ ಹೊಂದಿರುವವರನ್ನೂ, ಇನ್ನೊಂದು ಪಟ್ಟಿಯಲ್ಲಿ ಸರ್ಕಾರಿ ನೌಕರಿಯಲ್ಲಿ ಕಡಮೆ ಪ್ರಾತಿನಿಧ್ಯ ಹೊಂದಿರುವವರನ್ನೂ, ಮತ್ತೊಂದು ಪಟ್ಟಿಯಲ್ಲಿ ಬಹಳ ಹಿಂದುಳಿದಿರುವವರನ್ನೂ ಸೇರಿಸಬೇಕು. ಹಾಗೆ ಸೇರಿಸಿ ಆಯಾ ದರ್ಜೆಯನ್ನನುಸರಿಸಿ ಮುಂದುವರಿದಿರುವವರು, ಹಿಂದುಳಿದಿರುವವರು ಮತ್ತು ಮಧ್ಯಮ ವರ್ಗದವರು ಎಂದು ಮೂರು ಗ್ರೂಪುಗಳಿರುವುದಕ್ಕನುಸಾರವಾಗಿ ಸರ್ಕಾರಿ ನೌಕರಿಗಳನ್ನು ಹಂಚುವ ಏರ್ಪಾಡುಮಾಡುವುದಕ್ಕೆ ಸಾಧ್ಯವಿದೆಯೆಂದು ಸರ್ಕಾರಕ್ಕೆ ಸೂಚಿಸುತ್ತೇನೆ.

ಆ ಮೇಲೆ ಸ್ಟೇಷನರಿ ಮತ್ತು ಪ್ರಿಂಟಿಂಗ್ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ಈ ಇಲಾಖೆಯಲ್ಲಿ ಬಹುಕಾಲದಿಂದಲೂ ಜನರ ದೂರು ಇದೆ. ಪಠ್ಯಪುಸ್ತಕಗಳು ಮತ್ತು ಕಾನೂನು ಪುಸ್ತಕಗಳು ಸರ್ಕಾರಿ ಮುದ್ರಣಾಲಯದಲ್ಲಿ ಸಿಕ್ಕುವುದಿಲ್ಲವೆಂದು ಹೇಳುವುದು ಬಹಳ ವಿಷಾದಕರ, ಕಾಲೇಜುಗಳು ಮತ್ತು ಸ್ಕೂಲುಗಳು ಪ್ರಾರಂಭವಾಗಿ ತಿಂಗಳುಗಟ್ಟಲೆಯಾದರೂ ಪಠ್ಯಪುಸ್ತಕಗಳೇ ದೊರೆಯುವುದಿಲ್ಲ. ಅದೇ ರೀತಿಯಲ್ಲಿ ಬೇಕಾದ ಕಾನೂನು ಪುಸ್ತಕಗಳು ಕೂಡ ಸಿಕ್ಕುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ಶಿವಮೊಗ್ಗದಲ್ಲಿ ಒಂದು ಎನಾಕ್ಟ್‌ಮೆಂಟ್ ಸಿಕ್ಕದೇ ಹೋದ್ದರಿಂದ ವಿಧಿಯಿಲ್ಲದೆ ಒಂದು ಕೇಸನ್ನು ಖುಲಾಸೆಮಾಡಬೇಕಾಗಿ ಬಂತು. ಇದು ಬಹಳ ಅನ್ಯಾಯ.

ಶ್ರೀ ಎಚ್. ಸಿ. ದಾಸಪ್ಪನವರು.—ಬಡ್ಜೆಟ್ಟನ್ನು ಸ್ವಲ್ಪ ನೋಡಿದರೆ ಈ ಸಲ ಹೆಚ್ಚು ಹಣ ಒದಗಿಸಿರುವುದು ತಮಗೇ ಗೊತ್ತಾಗುತ್ತದೆ.

ಶ್ರೀ ಕಡಿದಾಳ್ ಮಂಜಪ್ಪನವರು.— ಸಂತೋಷ. ಆಮೇಲೆ ವೈದ್ಯ ಇಲಾಖೆ ಮತ್ತು ಜನಾರೋಗ್ಯ ಇಲಾಖೆ ವಿಚಾರದಲ್ಲಿ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಮಲೆನಾಡಿನ ಜನರಿಗೆ ಸರ್ಕಾರದಿಂದ ಒಂದು ಸಹಾಯವಾಗಿದೆ. ಕೆಲವು ಕಡೆಗಳಲ್ಲಿ ಡಿ.ಡಿ.ಟಿ. ಯಿಂದ ಬಹಳ ಸಹಾಯವಾಗಿದೆ. ಇನ್ನೂ ಸ್ಪಷ್ಟವಾಗಿ ಹೇಳಬೇಕಾದರೆ ಈ ಪ್ರಯೋಗದಿಂದ ಸೇಕಡ 35 ಅಥವಾ 50ರಷ್ಟು ಮಲೇರಿಯಾ ಕಡಮೆಯಾಗಿದೆ. ಈ ಪ್ರಯೋಗವನ್ನು ಎಲ್ಲಾ ಹಳ್ಳಿಗಳಿಗೂ ಅನ್ವಯಿಸುವಂತೆ ಮಾಡುವುದು ಅತ್ಯಗತ್ಯ. ಮಲೆನಾಡಿನ ವಿಚಾರ ಹೆಚ್ಚಾಗಿ ಹೇಳಿದರೆ ಅನ್ಯಥಾ ಭಾವಿಸಬಾರದು. ಮಲೆನಾಡು ಒಂದಾನೊಂದು ಕಾಲದಲ್ಲಿ ಬಹಳ ಜನಭರಿತವಾಗಿತ್ತು. ಬಹಳ ಉನ್ನತಸ್ಥಿತಿಯಲ್ಲಿತ್ತು. ಇತ್ತೀಚೆಗೆ ಕಾರಣಾಂತರದಿಂದ ಅಲ್ಲಿ ಜನಸಂಖ್ಯೆ ಕಡಮೆಯಾಗಿದೆ. ಬಹುಶಃ ಇದುವರೆಗೆ ಜನರು ಸಾಯುತ್ತಿರುವಂತೆ ಮುಂದೆಯೂ ಆರೀತಿ ಆಗುವುದಾದರೆ ಇನ್ನು ಕೆಲವು ಶತಮಾನಗಳಲ್ಲೇ ಮಲೆನಾಡು ಬರೀ ಕಾಡಾಗಿ ಉಳಿಯಬಹುದು. ಇಡೀ ಸಂಸ್ಥಾನದ ದೃಷ್ಟಿಯಿಂದ ಇದನ್ನು ಹೇಳುತ್ತಿದ್ದೇನೆ. ಜನರು ಈ ದಿವಸ ಸಾಯಬಹುದು. ಇನ್ನು ಕೆಲವು ಶತಮಾನಗಳಲ್ಲಿ ಮಲೆನಾಡು ನಿರ್ಜನವಾಗಬಹುದು. ಆದರೆ ಅತ್ಯಂತ ರಮಣೀಯವಾಗಿಯೂ ಸ್ವಿಟ್ಜರ್‌ಲೆಂಡ್‌ನಂತೆಯೂ ಇರುವ ನಮ್ಮ ಆ ಪ್ರದೇಶವನ್ನು ಕಡೆಗಣ್ಣಿನಿಂದ ನೋಡಬಾರದು. ಬಹುಶಃ ಅಮೇರಿಕಾ ಮೊದಲಾದ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಇಂಥ ಪ್ರದೇಶವಿದ್ದರೆ ಅದರಿಂದ ಹೆಚ್ಚಿನ ಸಹಾಯವನ್ನು ಪಡೆಯುತ್ತಿದ್ದರು. ಬೇಕಾದಷ್ಟು ಪ್ರಕೃತಿ ಸಂಪತ್ತು ಮಲೆನಾಡಿನಲ್ಲಿದೆ. ಮಳೆ ಚೆನ್ನಾಗಿ ಆಗುತ್ತದೆ. ಆದರೆ ನಾವು ಅದನ್ನು ಪುರಸ್ಕರಿಸುತ್ತಿಲ್ಲ. ಒಟ್ಟಿನಲ್ಲಿ ಹೆಚ್ಚಾಗಿ ಹೇಳದೆ ಹೆಚ್ಚು ಆಸ್ಪತ್ರೆ ಮತ್ತು ಡಾಕ್ಟರುಗಳನ್ನು ಕೊಡುವುದಕ್ಕಿಂತ ಡಿ.ಡಿ.ಟಿ. ಪ್ರಯೋಗವನ್ನು ಹೆಚ್ಚು ಹೆಚ್ಚಾಗಿ ಮಾಡುವುದು ಅತ್ಯಗತ್ಯವೆಂದು ಒತ್ತಿ ಹೇಳುತ್ತೇನೆ.

ಕೈಗಾರಿಕೋದ್ಯಮಗಳ ವಿಚಾರದಲ್ಲಿ ಒಂದು ಮಾತು. ಸಾಧಾರಣವಾಗಿ ಕೈಗಾರಿಕೆಗಳಲ್ಲಿ ಕೆಲಸ ಮಾಡುವವರ ಸಂಖ್ಯೆ ಬಹಳ ಜಾಸ್ತಿಯಾಗಿದೆ. ಉದಾಹರಣೆಗೆ ಭದ್ರಾವತಿಯಲ್ಲಿ ಕೂಡ ಈ ರೀತಿಯಿದೆ. ಮ್ಯಾನೇಜರುಗಳು, ಸೂಪರಿಂಟೆಂಡೆಂಟರು ಮುಂತಾದ ಆಫೀಸರುಗಳೂ, ಕೂಲಿಗಾರರೂ ಬಹುಮಂದಿ ಇದ್ದಾರೆ, ಅನೇಕ ಕಡೆ ಈ ರೀತಿ ಇದೆ ಎಂಬುದಾಗಿ ಕೇಳಿದ್ದೇನೆ. ಆದ್ದರಿಂದ ಕೆಲಸ ಮಾಡುವವರ ಸಂಖ್ಯೆಯನ್ನು ಕಡಮೆಮಾಡುವುದು ಸೂಕ್ತವೆಂದು ಸೂಚಿಸುತ್ತೇನೆ.

ವಿದ್ಯಾಭ್ಯಾಸದ ವಿಚಾರದಲ್ಲಿ ಹೇಳುವುದಾದರೆ ಸಂಸ್ಥಾನದ ವರಮಾನದಲ್ಲಿ ಸುಮಾರು ¼ ಭಾಗ ಹಣವನ್ನು ಈ ಬಾಬಿಗಾಗಿ ಖರ್ಚುಮಾಡುತ್ತಿದ್ದಾರೆ. ಆದರೆ ಅದರಿಂದ ದೇಶಕ್ಕೆ ಎಷ್ಟು ಪ್ರಯೋಜನವಾಗುತ್ತಿದೆಯೆಂದು ಯೋಚನೆಮಾಡಬೇಕಾಗಿದೆ. ಕಾಲೇಜುಗಳಲ್ಲಿ ಸುಮಾರು 10 ಸಾವಿರ ಜನ ವಿದ್ಯಾರ್ಥಿಗಳಿದ್ದಾರೆ. ಹೈಸ್ಕೂಲುಗಳಲ್ಲಿ ಸುಮಾರು 30 ಸಾವಿರ ಜನ, ಮಾಧ್ಯಮಿಕ ಶಾಲೆಗಳಲ್ಲಿ ಸುಮಾರು ಒಂದು ಲಕ್ಷ ಜನ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಅವರೆಲ್ಲರೂ ವ್ಯಾಸಂಗ ಮುಗಿದ ಮೇಲೆ ಸರ್ಕಾರಿ ನೌಕರರಾಗುವುದಕ್ಕೆ ಪ್ರಯತ್ನಪಡುತ್ತಾರೆ ಅಥವಾ ಯಾವುದೂ ಸಾಧ್ಯವಿಲ್ಲದಿದ್ದರೆ ಬೀಡಿ ಅಂಗಡಿ ಇಡುತ್ತಾರೆ. ಯಾವ ಸಂದರ್ಭದಲ್ಲೂ ಕೂಡ ಅವರು ವ್ಯವಸಾಯಕ್ಕೆ ಅಥವಾ ಕೈಗಾರಿಕೆಗಳಿಗೆ ಹೋಗುವುದಿಲ್ಲ. ಇಂಥ ವಿದ್ಯೆಯಿಂದ ಎಷ್ಟು ಸಹಾಯ ಲಭಿಸಬಹುದೆಂಬುದನ್ನು ಸರ್ಕಾರದವರು ಯೋಚನೆಮಾಡಬೇಕು. ಇದು ಸಾರ್ವಜನಿಕರೂ ಸಹ ತೀವ್ರವಾಗಿ ಯೋಚನೆಮಾಡಬೇಕಾದ ವಿಷಯವಾಗಿದೆ. ಆದ್ದರಿಂದ ವಿದ್ಯಾಭ್ಯಾಸದ ಪದ್ಧತಿಯನ್ನು ಆದಷ್ಟು ಜಾಗ್ರತೆಯಾಗಿ ಬದಲಾಯಿಸುವುದು ಸೂಕ್ತ. ಕಾಲೇಜು ಮತ್ತು ಹೈಸ್ಕೂಲುಗಳಲ್ಲಿ ಈಗ ಶಿಸ್ತು ಬಹಳ ಕಡಮೆಯಾಗುತ್ತಿದೆ. ಈ ವಿಚಾರದಲ್ಲಿ ಸರ್ಕಾರದವರು ತೀವ್ರ ಗಮನವನ್ನು ಕೂಡಲೇ ಕೊಡಬೇಕು. ನಮ್ಮ ಯುವಕರಲ್ಲಿ ಒಂದು dignity of labour ಭಾವನೆ ಬರಬೇಕಾದರೆ ಕಾಲೇಜು ಮತ್ತು ಹೈಸ್ಕೂಲುಗಳಲ್ಲಿ ಕನಿಷ್ಟಪಕ್ಷ ವರ್ಷಕ್ಕೆ ಒಂದು ತಿಂಗಳ ಕಾಲವಾದರೂ ವ್ಯವಸಾಯ ಅಥವಾ ಕೈಗಾರಿಕಾ ಕ್ಷೇತ್ರಗಳಲ್ಲಿ ಮ್ಯಾನ್ಯುಯಲ್ ಲೇಬರ್ ಮಾಡುವಂತೆ ಕಡ್ಡಾಯಮಾಡಬೇಕೆಂದು ಸೂಚಿಸುತ್ತೇನೆ. ಸ್ಪೆಷಲ್ ಕಮ್ಯೂನಿಟಿ ಎಜ್ಯುಕೇಷನ್ ಎಂದು ಕೆಲವು ಸಂಗಡದವರಿಗಾಗಿ ಪ್ರತ್ಯೇಕವಾಗಿ 3½-4 ಲಕ್ಷ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಪಾಕಿಸ್ಥಾನ ಮತ್ತು ಹಿಂದೂಸ್ಥಾನ ಬೇರೆಯಾದಾಗ ಮುಸ್ಲಿಂಬಾಂಧವರು ಅನ್ಯೋನ್ಯವಾಗಿರುತ್ತಾರೆಂಬ ಮನೋಭಾವ ವ್ಯಕ್ತಪಟ್ಟಿದೆ. ಆದ್ದರಿಂದ ಅವರಿಗೇಕೆ ಪ್ರತ್ಯೇಕ ಸ್ಕೂಲುಗಳಿರಬೇಕು ? ಉರ್ದು ಮೌಲ್ವಿಗಳನ್ನು ಇತರ ಸ್ಕೂಲುಗಳಲ್ಲಿಟ್ಟರೆ ಬೇಕಾದವರು ಅಲ್ಲಿ ಉರ್ದು ಕಲಿಯಬಹುದು ; ಇತರ ಭಾಷೆಗಳನ್ನೂ ಕಲಿಯಬಹುದು. ಖರ್ಚೂ ಉಳಿತಾಯವಾಗುತ್ತದೆ.

Sri B. HUTCHE GOWDA (Tumkur District General)-On a point of order, Sir The Hon'ble Minister for Education is not here.

Mr. SPEAKER.--That does not matter.

Janab MOHAMED VALIULLA (Kolar Muslim).—Another point of order, Sir. Under the Constitution of India, Muslims getting education in their mother tongue is allowed.

Sri Kadial MANJAPPA.—Yes. That is allowed. But what I am saying is that an Urdu teacher may be appointed in the same school and he may be asked to teach Urdu for Muslims in that school. There need be no necessity for having a separate Urdu School. That is all.

ಈಗಿನ ವಾತಾವರಣದಲ್ಲಿ ಪ್ರತ್ಯೇಕ ಸ್ಕೂಲಿನ ಆವಶ್ಯಕತೆಯಿಲ್ಲವೆಂದು ಹೇಳುತ್ತೇನೆ.

ರೋಡ್ ಟ್ರಾನ್ಸ್‌ಪೋರ್ಟ್ ವಿಚಾರದಲ್ಲಿ ಒಂದು ಮಾತು. ಕಳೆದ ಒಂದು ವಾರದಲ್ಲಿ ನಮ್ಮ ಜಿಲ್ಲೆಯಲ್ಲಿ ಮೂರು ಮರಣಗಳಾಗಿವೆ. ಇದಕ್ಕೆ ಕಾರಣ ಬಸ್ಸು ಮತ್ತು ಲಾರಿಗಳು ಹೆಚ್ಚಿರುವುದು.

ಶ್ರೀ ಎಚ್. ಸಿದ್ದಯ್ಯನವರು (ರೆವಿನ್ಯೂ ಸಚಿವರು).— ಸರ್ಕಾರಿ ಬಸ್ಸುಗಳೇ ?

ಶ್ರೀ ಕಡಿದಾಳ್ ಮಂಜಪ್ಪನವರು.—ಅಲ್ಲ ; ಖಾಸಗೀ ಬಸ್ಸುಗಳು. ಅಂಥ ಸಂದರ್ಭಗಳಲ್ಲಿ ಡ್ರೈವರುಗಳಿಗೆ ಲೈಸೆನ್ಸನ್ನು ಖಾಯಂವಾಗಿ ರದ್ದುಮಾಡಬೇಕು. ಇಲ್ಲದಿದ್ದರೆ ಅನಾಹುತಗಳು ಹೆಚ್ಚುವುದಕ್ಕೆ ಅವಕಾಶವಾಗುತ್ತದೆ.

ಲಂಚ ನಿರೋಧ ಶಾಖೆಯು ವಿಚಾರದಲ್ಲಿ ಒಂದು ಮಾತು. ಲಂಚಕೋರತನವನ್ನು ತಡೆಗಟ್ಟಬೇಕೆಂದು 1913ರ ರ ಲಾಗಾಯ್ತು ಬೇಕಾದಷ್ಟು ಪ್ರಬಲವಾದ ಚಳುವಳಿ ಹೂಡಿದ್ದೇವೆ. ಅದರ ಪರಿಣಾಮವಾಗಿ ಅನೇಕ ಇಲಾಖೆಗಳಲ್ಲಿ ಲಂಚಕೋರತನ ಕಡಮೆಯಾಗಿದೆ. ಆದರೂ ಒಂದೆರಡು ಇಲಾಖೆಗಳಲ್ಲಿ ಸ್ವಲ್ಪಮಟ್ಟಿಗೆ ಹೆಚ್ಚಾಗಿದೆಯೆಂದು ಹೇಳಬೇಕಾಗಿದೆ. ಸರ್ಕಾರದ ನಿಗಾ ಆ ಇಲಾಖೆಗಳ ಮೇಲೆ ಇರಬೇಕೆಂದು ಸೂಚನೆಮಾಡುತ್ತೇನೆ.

Sri H. C. DASAPPA.—Hon'ble Member made mention of two Departments. It is too vague. May I know what they are?

Sri Kadial MANJAPPA.—Public Works and Police.

ನನ್ನ ಅನುಭವವನ್ನು ಹೇಳುವುದಾದರೆ ಬರೀ ಸರ್ಕಾರದ ಕಾರ್ಯಕ್ರಮವೇ ಸಾಲದು. ಜನರ ನೈತಿಕ ಮಟ್ಟ ಹೆಚ್ಚಬೇಕು. ಎಲ್ಲಿಯವರೆಗೆ ಆ ಮಟ್ಟವು ಉನ್ನತ ಸ್ಥಾನಕ್ಕೆ ಬರುವುದಿಲ್ಲವೋ ಅಲ್ಲಿಯವರೆಗೆ ಲಂಚವು ಇದ್ದೇ ಇರುತ್ತದೆ; ದೇಶವೂ ಉತ್ತಮಸ್ಥಿತಿಗೆ ಬರುವುದಿಲ್ಲ. ಇದು ಸ್ಪಷ್ಟವಾದ ಅಭಿಪ್ರಾಯ.

ಕೊನೆಯದಾಗಿ ಹೇಳುವುದಾದರೆ ನಮ್ಮ ದೇಶವು ಪ್ರಕೃತ ಸಂದರ್ಭದಲ್ಲಿ ಸುರಕ್ಷಿತವಾಗಿದೆಯೆಂದು ಹೇಳುವುದಕ್ಕೆ ನಾನು ಸಿದ್ಧವಾಗಿಲ್ಲ. ಇದನ್ನೇಕೆ ಹೇಳುತ್ತೇನೆಂದರೆ ನಮ್ಮ ದೇಶದಲ್ಲಿ ಇರುವವರೆಲ್ಲರೂ ಒಮ್ಮನಸ್ಸಿನಿಂದ ಒಬ್ಬ ಮನುಷ್ಯನಂತೆ ವರ್ತಿಸಬೇಕಾದ್ದು ಅತ್ಯಗತ್ಯ. ದೇಶದಲ್ಲಿ ಅನೇಕ ವ್ಯಕ್ತಿಗಳು ನಾನಾಕಾರಣಗಳಿಗಾಗಿ ದೇಶವನ್ನು ಒಡೆಯಲು ಮತ್ತು ಸಮಾಜದಲ್ಲಿ ಒಡಕನ್ನು ಹುಟ್ಟಿಸಲು ಅಲ್ಲಲ್ಲಿ ಪ್ರಯತ್ನಿಸುತ್ತಿದ್ದಾರೆ. ಇಂಥ ವಿಚಾರಗಳಲ್ಲಿ ಸರ್ಕಾರದ ಗಮನವಿರಬೇಕಾದ್ದು ಅತ್ಯಗತ್ಯ. ಪ್ರಜಾಪ್ರಭುತ್ವವು ನಮ್ಮ ದೇಶದಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟು ಪ್ರಯೋಗದಲ್ಲಿದೆ. ಅದು ಉಳಿಯಬೇಕಾದರೆ ಭದ್ರವಾದ, ಪ್ರಬಲವಾದ, ಸರಿಯಾದ ರೀತಿಯಲ್ಲಿರುವ ಮತ್ತು ಬಿಗಿ ಉಳ್ಳ ಸರ್ಕಾರ ಅತ್ಯಗತ್ಯ. ಸರ್ಕಾರದಲ್ಲಿ ದರ್ಪ ಮತ್ತು ಬಿಗಿ ಅತ್ಯಗತ್ಯವಾಗಿ ಬೇಕಾಗಿದೆ. ಸಮಾಜದ್ರೋಹಿಗಳನ್ನು ಶಿಕ್ಷಿಸುವುದಕ್ಕೆ ತಕ್ಕ ವ್ಯವಸ್ಥೆ ಮಾಡುವುದು ಅತ್ಯಾವಶ್ಯಕ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. SPEAKER.—The House will now rice for lunch.

The Assembly adjourned for lunch Thirty Five Minutes past Three of the Clock and reassembled at Five Minutes past Four of the Clock, Mr. Speaker (Sri V. Venkatappa) in the Chair.

ಶ್ರೀ ಡಬ್ಲ್ಯೂ. ಎಚ್. ಹನುಮಂತಪ್ಪನವರು (ಬೆಂಗಳೂರು ಜಿಲ್ಲೆ).—ಸ್ವಾಮಿ, ಈ ಬಡ್ಜೆಟ್ ವಿಚಾರದಲ್ಲಿ ನಾನು ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಬಡ್ಜೆಟ್ಟನ್ನು ಕೇವಲ ಅಂಕಿ ಅಂಶಗಳಿಂದ ಮಾತ್ರ ಪರಿಶೀಲಿಸುವುದು ಒಂದು ವಿಧಾನವಾದರೂ ಅನೇಕ ದೃಷ್ಟಿಗಳಿಂದ ಪರಿಶೀಲಿಸುವುದು ನ್ಯಾಯವಾಗಿದೆ. ನ್ಯಾಯದೃಷ್ಟಿಯಿಂದ ಇದನ್ನು ನೋಡುವುದಾದರೆ ಜನರ ಜೀವನದ ಮಟ್ಟವನ್ನು ಹೆಚ್ಚಿಸುವುದಕ್ಕೂ, ಕೈಗಾರಿಕೆಗಳನ್ನು ಹೆಚ್ಚಿಸುವುದಕ್ಕೂ, ನಮ್ಮ ದೇಶದ ಆಹಾರ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕೂ ವಿದ್ಯುಚ್ಛಕ್ತಿಯ ಸಂಪತ್ತನ್ನು ಹೆಚ್ಚು ಬೆಳೆಸುವುದಕ್ಕೂ ಮತ್ತು ಇನ್ನೂ ಅನೇಕ ವಿಧವಾದ ಅಭಿವೃದ್ಧಿಗಳಿಗೆ ಅವಕಾಶಮಾಡಲು ಹಣವನ್ನೊದಗಿಸಿ ಈ ಬಡ್ಜೆಟ್ಟನ್ನು ತಯಾರಿಸಿ ಸರ್ಕಾರದವರು ನಮ್ಮ ಮುಂದಿಟ್ಟಿದ್ದಾರೆ. ನಮ್ಮ ಎದುರು ಪಕ್ಷದವರು ಈ ಬಡ್ಜೆಟ್ಟಿನಲ್ಲಿ ಏನಾದರೂ ಲೋಪದೋಷಗಳನ್ನು ಕಂಡುಹಿಡಿದು ಅದನ್ನು ಪ್ರಚಾರ ಮಾಡಬೇಕೆಂದು ಪ್ರಯತ್ನಪಟ್ಟರು. ಇದರಲ್ಲಿರುವ ಎಲ್ಲಾ ಅಂಶಗಳನ್ನೂ ಸಂಗ್ರಹವಾಗಿ ಶ್ರೀಮನ್ಮಹಾರಾಜರವರು ಅವರ ಭಾಷಣದಲ್ಲಿ ತೋರಿಸಿದಾಗ ತಿದ್ದುಪಡಿಗಳ ಮೂಲಕ ಅನೇಕ ವಿಷಯಗಳನ್ನೆತ್ತಿ ಮಾತನಾಡಲು ಪ್ರಯತ್ನಪಟ್ಟು ಅವರಿಗೆ ಸರಿಯಾದ ವಿಷಯಗಳು ದೊರೆಯದೇಹೋದುದರಿಂದ ಆ ತಿದ್ದುಪಡಿಗಳನ್ನು ವಾಪಸ್ಸು ತೆಗೆದುಕೊಂಡರು. ಈಗಿನ ಬಡ್ಜೆಟ್ಟಿನ ಮುಖ್ಯ ಅಂಶಗಳನ್ನು ಅವರೂ ನಾವೂ ನೋಡುವುದಾದರೆ ಸಾಧಾರಣ ಹುಟ್ಟುವಳಿ ಮತ್ತು ಖರ್ಚು ಸಮತೂಕವಾಗಿದೆಯೇ ಎಂಬುದನ್ನು ನೋಡಬೇಕು. ನಾವು ಎಷ್ಟೇ ಕೂಲಂಕಷವಾಗಿ ಪರಿಶೀಲಿಸಿ ನೋಡಿದರೂ ಕೂಡ ಸಾಧಾರಣ ಆದಾಯಕ್ಕೂ ಮತ್ತು ಸಾಧಾರಣ ವೆಚ್ಚಕ್ಕೂ ಸರಿಯಾಗಿದೆಯೆಂಬುದು ಇದರಲ್ಲಿ ವ್ಯಕ್ತವಾಗುತ್ತದೆ. ಆದಕಾರಣ ನಮ್ಮ ಎದುರುಪಕ್ಷದವರ ಜವಾಬ್ದಾರಿ ಹೆಚ್ಚಾಗಿದೆ. ಸಾಧಾರಣ ಉತ್ಪತ್ತಿಯನ್ನು ಹೆಚ್ಚಿಸಿ ಖರ್ಚನ್ನೂ ಹೆಚ್ಚಿಸಬಹುದೆಂದು ಅವರು ಹೇಳುವುದಾದರೆ ಅವರ ಜವಾಬ್ದಾರಿ ಇನ್ನೂ ಹೆಚ್ಚುತ್ತದೆ. ಶ್ರೀಮಾನ್ ಹುಚ್ಚೇಗೌಡರು ತಿದ್ದುಪಡಿಗಳ ವಿಚಾರವಾಗಿ ಮಾತನಾಡುವಾಗ 'ನಾವು ಕೇವಲ ರಚನಾತ್ಮಕ ಸಲಹೆ ಕೊಡಲು ಮಾತ್ರ ಬಂದಿಲ್ಲ, ಟೀಕೆ, ಟಿಪ್ಪಣಿಗಳನ್ನು ಮಾಡಲು ಬಂದಿದ್ದೇವೆ, ಎಂದು ಹೇಳಿದರು. ಈ ದಿವಸವಾದರೂ ಅವರು ಬಡ್ಜೆಟ್ಟನ್ನು ಯಾವ ವಿಧವಾದ ನೀತಿಯನ್ನಿಟ್ಟುಕೊಂಡು ತಯಾರಿಸಬೇಕೆಂಬುದನ್ನು ಹೇಳಿದರೆ ಸಂತೋಷಪಡಬಹುದು. ಹಾಗೆ ತೋರಿಸಿಕೊಡಲು ಅವರಿಗೆ ಸಾಧ್ಯವಿಲ್ಲವೆಂದು ಕಂಠೋಕ್ತವಾಗಿ ನಾನು ಹೇಳಬಲ್ಲೆ. ಕಾಂಗ್ರೆಸ್ಸಿನವರು ಈ ದಿವಸ ಸರ್ಕಾರವನ್ನು ನಡೆಸುತ್ತಿದ್ದಾರೆ. ಕಷ್ಟಪಟ್ಟು ದೇಶದ ಸ್ವಾತಂತ್ರ್ಯವನ್ನು ಸಂಪಾದನೆ ಮಾಡಿ, ದೇಶದಲ್ಲಿರುವ ಪ್ರಜೆಗಳಿಗಿರತಕ್ಕ ಅನೇಕ ಕಷ್ಟಗಳನ್ನು ತಿಳಿದುಕೊಂಡು, ಅವುಗಳನ್ನು ನಿವಾರಿಸಿ ದೇಶದ ಕಲ್ಯಾಣಕ್ಕಾಗಿ ಎಷ್ಟುಮಟ್ಟಿಗೆ ದುಡಿಯುತ್ತಿದ್ದಾರೆಂಬುದು ಎಲ್ಲ ಜನರಿಗೂ ಗೊತ್ತಿರುವ ವಿಷಯ. ಈ ದಿವಸ ದೇಶಕ್ಕೆ ಬಂದಿರುವ ಆಹಾರಾಭಾವ ಮತ್ತು ಕಾಶ್ಮೀರ ಮತ್ತು ಪೂರ್ವ ಬಂಗಾಳದಲ್ಲಿ ನಡೆಯುತ್ತಿರುವ ಘಟನೆಗಳು— ಇವುಗಳನ್ನು ಮನಸ್ಸಿಗೆ ತಂದುಕೊಂಡು ನೋಡಿದರೆ, ನಮ್ಮ ದೇಶಕ್ಕಾಗಿ ಪಂಡಿತ ಜವಹರಲಾಲರೂ ಇತರ ನಾಯಕರೂ ಎಷ್ಟು ಕಷ್ಟ ಪಡುತ್ತಿದ್ದಾರೆಂಬುದು ವ್ಯಕ್ತವಾಗುತ್ತದೆ. ಈಗ ನಾವು ಕೇಂದ್ರ ಸರ್ಕಾರದೊಡನೆ ಸೇರಿರುವುದರಿಂದ ಅವರು ಹಾಕತಕ್ಕ ಮೇಲ್ಪಂಕ್ತಿಯನ್ನು ನಾವು ಅನುಸರಿಸಬೇಕಾಗಿದೆಯೆಂಬ ಅಂಶವನ್ನು ಗಮನಿಸಬೇಕಾಗಿದೆ. ಈಗ ದೇಶದ ಮುಂದಿರತಕ್ಕ ಮುಖ್ಯವಾದ ಸಮಸ್ಯೆಯೆಂದರೆ, ಅದು ಆಹಾರ ಸಮಸ್ಯೆ. ಆಹಾರದ ಉತ್ಪತ್ತಿ ಕಡಿಮೆಯಾಗಿದೆ, ಅದನ್ನು ಹೇಗೆ ಹೆಚ್ಚುಮಾಡಬೇಕು ಎಂಬ ವಿಷಯ ನಮ್ಮ ಮುಂದೆ ನಿಂತಿದೆ. ಆಹಾರ ಹೆಚ್ಚಾಗಿ ಉತ್ಪತ್ತಿಮಾಡುವುದಕ್ಕೆ ಸರ್ಕಾರದವರು ಅನುಸರಿಸಿರುವ ಮಾರ್ಗದಲ್ಲಿ ಏನಾ

ದರೂ ಲೋಪ ದೋಷಗಳು ಬಂದಿವೆಯೆ ಅಥವಾ ಇಲ್ಲವೆ ಎಂಬುದನ್ನು ನಾವು ಪರಿಶೀಲನೆ ಮಾಡಿ ನೋಡೋಣ. ಆಹಾರ ಹೆಚ್ಚಿಸುವುದಕ್ಕಾಗಿ ಇಂಡಿಯಾ ಸರ್ಕಾರದವರು ನಮಗೆ ಬೇಕಾದಷ್ಟು ಅನುಕೂಲಗಳನ್ನೊದಗಿಸಿಕೊಡಲು ಸಿದ್ಧವಾಗಿರುವುದಲ್ಲದೆ ದ್ರವ್ಯ ಸಹಾಯ ಕೂಡ ಮಾಡುತ್ತಿದ್ದಾರೆ. ನಮ್ಮ ಸರ್ಕಾರದವರು ಕೂಡ ಪ್ರಜೆಗಳಿಗೆ ಸುಮಾರು ಏಳು ಕೋಟಿ ರೂಪಾಯಿಗಳಷ್ಟು ಹಣವನ್ನು ಸಹಾಯದ್ರವ್ಯವಾಗಿಯೂ ಕೊಟ್ಟು ಆಹಾರವನ್ನೊದಗಿಸುವ ಕೆಲಸವನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಹೀಗಿರತಕ್ಕ ಕಾಲದಲ್ಲಿ ಆಹಾರವನ್ನು ಹೇಗೆ ಹೆಚ್ಚಿಗೆ ಬೆಳೆಸಬೇಕೆಂಬ ವಿಷಯದಲ್ಲಿ ಸರ್ಕಾರದವರು ಒಂದು ನೀತಿಯನ್ನನುಸರಿಸಬೇಕೆಂದು ಅರಿಕೆಮಾಡಿಕೊಳ್ಳುತ್ತೇನೆ. ಅದೇನೆಂದರೆ ಈಗ ತುಂಗಾ ಮತ್ತು ನುಗು ನದಿಗಳಿಗೆ ಅಣೆಕಟ್ಟು ಹಾಕುವ ಕೆಲಸ ನಡೆಯುತ್ತಿದೆ. ಲಕ್ಕವಳ್ಳಿ ಪ್ರಾಜೆಕ್ಟಿಗೆ ಬಹಳ ಹೆಚ್ಚು ದುಡ್ಡು ಖರ್ಚಾಗಬಹುದು. ಆದ್ದರಿಂದ ಈಗ ದುಡ್ಡಿನ ಅಭಾವವಿದೆ, ಮುಂದೆ ತೆಗೆದುಕೊಳ್ಳೋಣ ಎಂಬ ಮನಸ್ಸು ಸರ್ಕಾರದವರಿಗೆ ಇರುವಹಾಗೆ ಕಾಣುತ್ತದೆ. ಈ ಪ್ರಾಜೆಕ್ಟುಗಳಿಂದ ಸುಮಾರು 2 ಲಕ್ಷ ಚಿಲ್ಲರೆ ಎಕರೆ ಜಮೀನು ಸಾಗುವಳಿಗೆ ಬರಲು ಅವಕಾಶವಾಗುತ್ತದೆ. ಇದಕ್ಕೆ ದುಡ್ಡಿನ ಅಭಾವವಿರುವುದರಿಂದ ಇದನ್ನು ಇಂಡಿಯಾ ಸರ್ಕಾರದವರಿಗೆ ತಿಳಿಸಿ ಸಾಲದ ರೂಪವಾಗಿಯಾದರೂ ಕೊಡಿ ಎಂದು ಕೇಳಿದರೆ ಅವರು ಹಿಂತೆಗೆಯಲಾರರು. ನಮ್ಮ ದೇಶದಲ್ಲಿ 29 ಸಾವಿರ ಚದರ ಮೈಲಿಯಲ್ಲಿ ಸುಮಾರು 24 ಸಾವಿರ ಕೆರೆಗಳು ಇವೆ. ಇವುಗಳನ್ನು ಅಭಿವೃದ್ಧಿಮಾಡಿಕೊಂಡು ಹೊಸದಾಗಿ ತೆಗೆದುಕೊಂಡಿರತಕ್ಕ ಈ ಕಾಮಗಾರಿಗಳನ್ನು ಇಂಡಿಯಾ ಸರ್ಕಾರದವರ ಸಹಾಯದಿಂದ ಪೂರೈಸಿ ರೈತರಿಗೆ ಬೇಕಾದ ಸೌಕರ್ಯಗಳನ್ನು ಒದಗಿಸಿದ ಪಕ್ಷದಲ್ಲಿ ನಮ್ಮ ದೇಶದಲ್ಲಿ ಆಹಾರದ ಅಭಾವವೇ ಇರುವುದಿಲ್ಲ. ಆಹಾರದ ಅಭಾವವನ್ನು ತಪ್ಪಿಸಿದರೆ ಸುಗಮವಾಗಿ ಎಲ್ಲಾ ಆಡಳಿತವೂ ನಡೆಯುತ್ತದೆ. ಆದ್ದರಿಂದ ಸರ್ಕಾರದವರು ಒಂದು ನೀತಿಯನ್ನು ಕೈಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ. ಈಗ ಒಂದು ಇಲಾಖೆಗೂ ಇನ್ನೊಂದು ಇಲಾಖೆಗೂ ಸಹಕಾರ ಇಲ್ಲವೆಂಬ ಸಂಶಯ ಬರುತ್ತದೆ. ಈ ಸಹಕಾರವನ್ನುಂಟುಮಾಡಲು ಒಂದು ಸಮಿತಿಯನ್ನು ಮಾಡಬೇಕು. ಅದಕ್ಕೆ ಹೆಸರು ಏನು ಬೇಕಾದರೂ ಇಟ್ಟುಕೊಳ್ಳಿ. ಈ ರೀತಿ ಮಾಡಬೇಕಾದ್ದು ಅವಶ್ಯಕ ಎಂಬುದನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಈಗ ಹಳ್ಳಿಗಾಡಿನಲ್ಲಿರತಕ್ಕವರು ಅಥವಾ ಪೇಟೆಯಲ್ಲಿರತಕ್ಕವರು ಯಾವುದಾದರೂ ಒಂದು ಸಾಮಾನನ್ನು ತೆಗೆದುಕೊಳ್ಳಬೇಕಾದರೆ ಒಂದೊಂದು ಕಡೆ ಒಂದೊಂದು ತೂಕ, ಒಂದೊಂದು ಅಳತೆ ಇರುತ್ತದೆ. ಒಂದು ಕಡೆ ದೊಡ್ಡ ತೂಕ, ಇನ್ನೊಂದು ಕಡೆ ಚಿಕ್ಕ ತೂಕ ಇದೆ.

ಈಗ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಮನೆಗಳ ಸಮಸ್ಯೆ ಇದೆ. ಬಿದರಿನಿಂದ ಕಟ್ಟಿರತಕ್ಕ ಮನೆಗಳು ನೂರಾರು ವರ್ಷಗಳಿಂದ ಇವೆ. ಹಳ್ಳಿಗಾಡಿನಲ್ಲೇ ಆಗಲಿ, ದೊಡ್ಡ ಪಟ್ಟಣಗಳಲ್ಲೇ ಆಗಲಿ ಅಂಥವುಗಳನ್ನು ಕಟ್ಟಬಹುದು. ಸುಟ್ಟ ಇಟ್ಟಿಗೆಯಿಂದಲೇ ಆಗಲೀ, ಸಿಮೆಂಟಿನಿಂದಲೇ ಆಗಲೀ ಕಟ್ಟಬೇಕೆಂದೇನೂ ಇಲ್ಲ. ಆ ಮೂಲಕ ಮನೆಗಳನ್ನು ಕಟ್ಟುವುದಾದರೆ ಮನೆಗಳ ಸಮಸ್ಯೆ ಇರುವುದಿಲ್ಲವೆಂದು ನನಗೆ ಅನ್ನಿಸುತ್ತದೆ.

ಈಗ ನಮ್ಮ ದೇಶದಲ್ಲಿ ಮಿಲ್ಲುಗಳನ್ನು ಅನೇಕ ಕಾರಣಗಳಿಂದ ಪ್ರಾರಂಭಿಸಿದ್ದಾರೆ. ಹಳ್ಳಿಗಾಡುಗಳಲ್ಲಿ ವಾಸಮಾಡುತ್ತಿದ್ದವರ ಪೈಕಿ ಶೇಕಡ 60ರಷ್ಟು ಜನ ಪಟ್ಟಣಗಳಿಗೆ ಬಂದು ಈ ಮಿಲ್ಲುಗಳಲ್ಲಿ ಸೇರಿಕೊಂಡಿದ್ದಾರೆ. ಇದಕ್ಕೆ ಅನೇಕ ಕಾರಣಗಳಿರಬಹುದು. ಈಗ ಮಧುರೆಯಲ್ಲಿ ಕೆಲವು ಮಿಲ್ಲುಗಳಿವೆ. ಅಲ್ಲಿ ಬರೀ ದಾರವನ್ನು ಮಾಡಿ ಕಳುಹಿಸುತ್ತಾರೆ. ಆ ರೀತಿ ಬರೀ ದಾರವನ್ನು ತಯಾರು ಮಾಡುವುದಕ್ಕೇ ದೊಡ್ಡ ಮಿಲ್ಲುಗಳನ್ನು ಇಟ್ಟುಕೊಂಡಿದ್ದಾರೆ. ನಮ್ಮಲ್ಲೂ ಹ್ಯಾಂಡ್ ಲ್ಯೂಮ್ ಮೆಷಿನ್‌ಗಳನ್ನು ಕೊಟ್ಟು ಸೀರೆಗಳನ್ನೂ, ಬಟ್ಟೆಗಳನ್ನೂ ತಯಾರು ಮಾಡುವುದಕ್ಕೆ ಪ್ರಯತ್ನಪಟ್ಟರೆ ಹಳ್ಳಿಗಾಡಿನಲ್ಲಿರತಕ್ಕವರಿಗೆ ಒಂದು ಕಸಬು, ಕೈಕೆಲಸ ಸಿಕ್ಕಿದಂತಾಗುತ್ತದೆ. ಅನ್ನದ ಅವಶ್ಯಕತೆಯಿರುವಂತೆಯೇ ಬಟ್ಟೆಯ ಅವಶ್ಯಕತೆಯೂ ಇದೆ. ಅದಕ್ಕೆ ತಕ್ಕ ಕ್ಯಾಲೆಂಡರಿಂಗ್ ಮೆಷಿನರಿ ತರಿಸಿಕೊಟ್ಟರೆ ದೊಡ್ಡ ಮಿಲ್ಲುಗಳಲ್ಲಿ ಹೇಗೆ ನಾಜೂಕಾಗಿ ಬಟ್ಟೆ ತಯಾರು ಮಾಡುತ್ತಾರೋ ಅದೇ ರೀತಿ ಮಾಡಲು ಅನುಕೂಲವಾಗುತ್ತದೆ. ಇಲ್ಲದೇ ಇದ್ದರೆ ಹಳ್ಳಿಗಳಲ್ಲಿರತಕ್ಕವರು ಮಿಲ್ಲುಗಳಲ್ಲಿ ಸೇರಿಕೊಂಡು, ಆಮೇಲೆ ಅದೇ ಒಂದು ಕೂಲಿಗಾರರ ಸಮಸ್ಯೆಯಾಗಿ ಅದನ್ನು ಸರಿಪಡಿಸುವುದಕ್ಕೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಹಳ್ಳಿಗಳಲ್ಲಿರತಕ್ಕವರು ಪಟ್ಟಣಗಳಿಗೆ ಬರದಂತೆ ಮಾಡಬೇಕಾಗಿದ್ದರೆ ಗ್ರಾಮಕೈಗಾರಿಕೆಯ ಯೋಜನೆಯಂತೆ ಬಟ್ಟೆ ನೇಯುವುದು ಮುಂತಾದ ಸಣ್ಣ ಸಣ್ಣ ಕೈಗಾರಿಕೆಗಳನ್ನು ಮಾಡುವುದಕ್ಕೆ ಅನುಕೂಲ ಪಡಿಸಿಕೊಡಬೇಕು.

ಇನ್ನು ನೀರಿನ ಅಭಾವದ ವಿಷಯ. ಪಟ್ಟಣಗಳಲ್ಲಿ ಬಾವಿಗಳು ಬೇಕಾಗಿಲ್ಲವೆಂದು ಹೇಳುತ್ತೇನೆ. ಹಳ್ಳಿಗಳಲ್ಲಿ ಬಾವಿಗಳನ್ನು ತೋಡಿಸುವುದಕ್ಕೆ ಅವಶ್ಯಕವಾದಂಥ ಮೊಬಲಗನ್ನು ದೊರಕಿಸಿದ್ದೀರಿ. ಬೆಂಗಳೂರು ನಗರದಲ್ಲಿ ಚಾಮರಾಜೇಂದ್ರ ವಾಟರ್ ವರ್ಕ್ಸಿನಿಂದ ದಿನ ಒಂದಕ್ಕೆ $10\frac{1}{2}$ ಮಿಲಿಯನ್ ಗ್ಯಾಲನ್ ನೀರು ಬರುತ್ತದೆ. ಅದು ಸಾಲುವುದಿಲ್ಲ. ಪ್ರತಿದಿನ 15 ಮಿಲಿಯನ್ ಗ್ಯಾಲನ್ ನೀರಿನ ಅವಶ್ಯಕತೆ ಇದೆ. 15 ಮಿಲಿಯನ್ ಗ್ಯಾಲನ್ ನೀರು ಬರಬೇಕಾಗಿದ್ದರೆ ಏನು ಮಾಡಬೇಕೆಂಬುದನ್ನು ಪರಿಶೀಲಿಸಲು ಸರ್ಕಾರದವರು ಒಂದು ಸಮಿತಿಯನ್ನು ನೇಮಕ ಮಾಡಿದ್ದರು. ಆ ಸಮಿತಿಯವರ ಅಭಿಪ್ರಾಯದಂತೆ ಸುಮಾರು 30 ಸಾವಿರ ರೂಪಾಯಿ ಖರ್ಚು ಮಾಡಿ ಆ ಕೆರೆಯ ಹತ್ತಿರ ಒಂದು ಕಟ್ಟಡ ಕಟ್ಟಿ ಒಂದು ಮೆಷಿನ್ ತರಿಸಿ ಅಲ್ಲಿ ಇಟ್ಟು ಕೆಲಸ ಮಾಡಿಸಿದರೆ 15 ಮಿಲಿಯನ್ ಗ್ಯಾಲನ್ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಈಗ ಬಡ್ಜೆಟ್‌ನಲ್ಲಿ ಅದಕ್ಕೆ ಏನೂ ಒದಗಿಸಿದಂತೆ ಕಾಣುವುದಿಲ್ಲ. ಬೆಂಗಳೂರು ನಗರದಲ್ಲಿ ನೀರಿನ ಅಭಾವ ವಿಪರೀತವಾಗಿದೆ. ಇದು ಇನ್ನೂ ದೊಡ್ಡದಾಗಿ ಬೆಳೆಯತಕ್ಕ ಪಟ್ಟಣ. ಇದಕ್ಕೋಸ್ಕರ 30 ಲಕ್ಷ ರೂಪಾಯಿಗಳನ್ನು ಒದಗಿಸಿಕೊಡಬೇಕೆಂಬುದಾಗಿ ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ. ಈಗ ತಾನೆ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಪಬ್ಲಿಕ್ ಸರ್ವಿಸ್ ಕಮೀಷನ್ ವಿಚಾರವಾಗಿ ಹೇಳಿದರು. ಇಂಡಿಯಾ ದೇಶದಲ್ಲಿ ಸೆನ್ಸಸ್ ತೆಗೆದುಕೊಳ್ಳುವಾಗ ಜಾತಿ ಮತಗಳನ್ನು ಅದರಲ್ಲಿ ನಮೂದಿಸಕೂಡದೆಂದು ನಮ್ಮ ಮುಖಂಡರು ಅಭಿಪ್ರಾಯಪಟ್ಟಿದ್ದಾರೆ. ಆ ವಿಷಯವನ್ನು ನಮ್ಮ ಸರ್ಕಾರದವರು ಖಚಿತವಾಗಿ ತಿಳಿದುಕೊಂಡು ಪಬ್ಲಿಕ್ ಸರ್ವಿಸ್ ಕಮೀಷನ್ ಏರ್ಪಾಡು ಮಾಡುವುದಕ್ಕೆ ಕೈಹಾಕಬೇಕು. ಈಗ ಅದಕ್ಕೆ 3 ಜನಗಳನ್ನು ತೆಗೆದುಕೊಳ್ಳಬೇಕೆಂದು ಇದ್ದಾರೆಂದು ಕೇಳುತ್ತೇವೆ. ಆ ಮೂರು ಜನಗಳಿಗೆ ಸಾಕಾದಷ್ಟು ಕೆಲಸವಿರುತ್ತದೆಯೇ, ಇಬ್ಬರೇ ಸಾಕೇ ಎಂಬುದನ್ನು ಗಮನಿಸಬೇಕಾಗುತ್ತದೆ.

ನಮ್ಮ ಸಂಸ್ಥಾನದಲ್ಲಿ ಮದರಾಸಿನಲ್ಲಿರುವಂತೆ ವೆನ್ಯೂ ಬೋರ್ಡ್ ಇಲ್ಲ. ಎಲ್ಲಾ ರೆವೆನ್ಯೂ ವಿಷಯ ಳನ್ನೂ ತೀರ್ಮಾನ ಮಾಡುವುದಕ್ಕೆ ಒಂದು ಬೋರ್ಡ್ ರಬೇಕಾಗಿ ಕಾಣುತ್ತದೆ. ಆ ರೆವೆನ್ಯೂ ಬೋರ್ಡಿಗೆ ಬ್ಬರನ್ನು ಅಥವಾ ಇಬ್ಬರನ್ನು ನೇಮಕ ಮಾಡ ಹುದು.

ಬೆಂಗಳೂರು ನಗರದಲ್ಲಿ ಸೌದೆಯ ಅಭಾವ ಎಷ್ಟು ಟ್ಟಿಗೆ ಎಂಬುದು ಮಾನ್ಯ ಮಂತ್ರಿಗಳಿಗೆಲ್ಲರಿಗೂ ಳಿದ ವಿಷಯವೇ ಆಗಿದೆ. ಕಾಕನಕೋಟೆ ಅರಣ್ಯ ವಮೊಗ್ಗ ಕಡೆಗಳಿಂದ ಸೌದೆ ನಮ್ಮ ನಗರಕ್ಕೆ ರುತ್ತಾ ಇದೆ. ಈಗ ನಮ್ಮಲ್ಲಿ ಬೇಕಾದಷ್ಟು ವಿದ್ಯು ಕ್ತಿ ಉತ್ಪತ್ತಿಯಾಗುತ್ತಿದೆ. ಆದ್ದರಿಂದ ಮನೆಗಳಿಗೆ ೀಟಿಂಗ್ ಸರ್ಕ್ಯೂಟ್ ಕೊಟ್ಟು ಅಡಿಗೆಗೂ, ಸ್ನಾನಕ್ಕೂ ದ್ಯುಚ್ಛಕ್ತಿಯನ್ನು ಒದಗಿಸುವುದು ಅಗತ್ಯವಾಗಿದೆ. ಗ ಬಡ್ಜೆಟ್‌ನಲ್ಲಿ ಸುಮಾರು 3 ಕೋಟಿ ರೂಪಾಯಿ ಳನ್ನು ವಿದ್ಯುಚ್ಛಕ್ತಿಗೆ ಒದಗಿಸಿದ್ದೀರಿ. ನಮ್ಮಲ್ಲಿ ದ್ಯುಚ್ಛಕ್ತಿ ಬೇಕಾದಷ್ಟು ಇದೆ. ಅದರಿಂದ ಹೆಚ್ಚಿನ ತ್ಪತ್ತಿಯನ್ನು ಅಪೇಕ್ಷಿಸಿದರೆ ಈ ಸೌದೆಯ ಅಭಾವದ ಾಲದಲ್ಲಿ ಜನಗಳಿಗೆ ಕಮ್ಮಿ ದರದಲ್ಲಿ ಅದನ್ನು ಒದಗಿಸ ೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೂ ಹಲ ಕೆಲವು ವಿಚಾರಗಳನ್ನು ಈ ಬಡ್ಜೆಟ್ಟಿನ ಮೇಲೆ ಮಾತನಾಡಲು ಮುಂದೆ ಅನೇಕ ಖೋತಾ ೂಚನೆಗಳು ಬರತಕ್ಕವುಗಳಿರುತ್ತವೆ; ಆಗ ಇತರೇ ಭಿಪ್ರಾಯಗಳನ್ನು ಸೂಚಿಸಲು ಅಧ್ಯಕ್ಷರು ಅವಕಾಶ ನ್ನು ಕೊಟ್ಟೇ ಕೊಡುತ್ತಾರೆ. ಆದರೆ ಈಗ ಮಂಡಿ ರತಕ್ಕ ಬಡ್ಜೆಟ್‌ನಲ್ಲಿ ಜನರ ಜೀವನದ ಮಟ್ಟವನ್ನು ಚ್ಚು ಮಾಡುವುದಕ್ಕೆ ಸಾಕಾದಷ್ಟು ಅವಕಾಶ ಳನ್ನು ಕಲ್ಪಿಸಿಕೊಟ್ಟಿದ್ದಾರೆ. ಆಲೋಚನೆ ಮಾಡಿ ಾತನಾಡತಕ್ಕವರುಗಳಿಗೆಲ್ಲ ಇದು ಗೋಚರವಾಗದೆ ರಲಾರದು. ಇದು ಎಲ್ಲಾ ರೀತಿಯಲ್ಲೂ ಉತ್ತಮ ೀತಿಯ ಬಡ್ಜೆಟ್ಟಾಗಿದೆಯೆಂದು ತಿಳಿಸಿ ನಾನು ನನ್ನ ಾಷಣವನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಸ್ವಾಮಿ, ಭಾರತದಲ್ಲಿ ರಿಪಬ್ಲಿಕ್ ಸರ್ಕಾರ ಸ್ಥಾಪಿತ ಾದ ಮೇಲೆ ನಮ್ಮ ದೇಶದಲ್ಲಿ ತಾವು ನಮ್ಮ ಮುಂದೆ ುಂಡಿಸಿರುವಂಥ ಈ ಬಡ್ಜೆಟ್ ಮೊದಲನೆಯದಾಗಿದೆ. ದರೆ ಈ ಬಡ್ಜೆಟ್ಟಿನಲ್ಲಿ ಎಲ್ಲಾ ಅಂಶಗಳೂ ಅಷ್ಟು ಚಿತವಾಗಿ ಮತ್ತು ಕರಾರುವಾಕ್ಕಾಗಿ ತಿಳಿಸಲ್ಪಟ್ಟಿವೆ ೆಂದು ನಾನು ಹೇಳಲಾರೆ. ಆದರೆ ಕೆಲವು ವಿಚಾರ ಳಲ್ಲಿ ಸರ್ಕಾರದವರಿಗೆ ನಾನು ಕೆಲವು ಸೂಚನೆಗಳನ್ನು ಾತ್ರ ಈಗ ಕೊಡಲಿಚ್ಛಿಸುತ್ತೇನೆ.

ಈ ಬಡ್ಜೆಟ್ಟಿನಲ್ಲಿ ಎಲ್ಲಾ ಸದಸ್ಯರಿಗೂ ಸಾಕಷ್ಟು ಳಿವಳಿಕೆ ಕೊಡತಕ್ಕ ಅಂಕಿ ಅಂಶಗಳ ಬಗ್ಗೆ ಮತ್ತು ಂಸ್ಥಾನದ ರೀತಿ ನೀತಿಗಳು ಈಗ ಯಾವ ರೀತಿ ಾರ್ಪಾಡು ಮಾಡಲ್ಪಟ್ಟಿವೆ, ಮುಂದಕ್ಕೆ ಯಾವ ಯಾವ ಾಬುಗಳಲ್ಲಿ ಏನೇನು ಮಾರ್ಪಾಡುಗಳು ಆಗಬೇಕಾ ವೆ, ಎಂಬೀ ವಿಚಾರಗಳನ್ನೆಲ್ಲಾ ಎಲ್ಲರಿಗೂ ತಿಳಿಯು ಂತೆ ಇದರಲ್ಲಿ ತಾವು ಕೊಟ್ಟಿಲ್ಲ. ಈ ಬಡ್ಜೆಟ್ಟನ್ನು ುಂಡಿಸುವಾಗ ಆರ್ಥಿಕ ಸಚಿವರು ಕೇವಲ ಅಷ್ಟಿಷ್ಟು ಿಷಯಗಳನ್ನೇ ಅಡಕಮಾಡಿ ತಮ್ಮ ಭಾಷಣದಲ್ಲಿ ಿಳಿಸಿದರು. ಆದರೆ ಅದಷ್ಟೇ ಸಾಲದು. ಅದೇ ೀತಿ ಇತರ ಎಲ್ಲಾ ಮಂತ್ರಿಗಳೂ ತಮ್ಮ ತಮ್ಮ ಆಡಳಿತ ಕ್ಕೊಳಪಟ್ಟ ವಿಚಾರಗಳ ಪರವಾಗಿ ಹಿಂದಿನ ವರ್ಷ ಏನೇನು ನಡೆದಿರುತ್ತವೆ, ಮುಂದಿನ ಸಾಲಿಗೆ ಬಾಕಿ ಿಂತಿರುವ ಕೆಲಸ ಕಾರ್ಯಗಳೇನು, ಯಾವ ಯಾವ ೆಲಸಗಳು ಎಷ್ಟೆಷ್ಟರಮಟ್ಟಿಗೆ ಮುಂದುವರಿದಿವೆ ಎಂಬ ವಿಷಯಗಳ ಬಗ್ಗೆ ಸ್ವಲ್ಪಮಟ್ಟಿಗಾದರೂ ತಿಳಿಸಿದ್ದರೆ ಚೆನ್ನಾಗಿತ್ತೆಂದೂ ಮತ್ತು ಅದರ ಪರಿಣಾಮವಾಗಿ ಮುಂದೆ ಅನಾವಶ್ಯಕವಾದ ಟೀಕೆಗಳಿಗೆ ದಾರಿಯಿರುತ್ತಿರಲಿಲ್ಲವೆಂದೂ ನಾನು ಭಾವಿಸಿದ್ದೇನೆ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಹಿಂದೆಲ್ಲಾ ಆ ರೀತಿಯ ಪದ್ಧತಿ ಜಾರೀಲಿತ್ತೇನು ?

ಶ್ರೀ ಬಿ. ಹುಚ್ಚೇಗೌಡರು.—ನಾನು ಆ ರೀತಿ ಹೇಳಿದ್ದನ್ನು ಯಾರೂ ಅಪಾರ್ಥವಾಗಿ ಭಾವಿಸಬಾರದು. ಹಾಗೆ ಮಾಡಿದರೆ ಅದರಲ್ಲಿ ತಪ್ಪೇನಿದೆ ? ಅದರಿಂದ ಮಾತನಾಡುವ ಸದಸ್ಯರಿಗೆಲ್ಲ ಎಷ್ಟೋ ಅನುಕೂಲ ಮಾಡಿದಂತಾಗುತ್ತದೆ. ಆದಕಾರಣ ಆ ವಿವರಣೆಗಳು ಅತ್ಯಾವಶ್ಯಕವೆಂದು ನಾನು ಹೇಳುತ್ತೇನೆ. ಇದು ಕೇವಲ ನನ್ನದೊಂದು ಅಭಿಪ್ರಾಯ. ಇದರಿಂದ ಅನವ್ಯಶಕವಾದ ಭಾಷಣಗಳನ್ನು ನಿಲ್ಲಿಸಿ ಈ ಸಭೆಯ ಕಾಲವನ್ನು ಕೇವಲ ಉಪಯುಕ್ತವಾದ ವಿಷಯಗಳಿಗೆ ಮಾತ್ರ ಬಳಸಿದಂತಾಗುತ್ತದೆಂದು ನಾನು ಭಾವಿಸಿದ್ದೇನೆ. ಇದನ್ನು ಆಲೋಚನೆ ಮಾಡಬೇಕೆಂಬುದಾಗಿ ನಾನು ಈ ಸಭಾ ನಾಯಕರಾದ ಶ್ರೀಮಾನ್ ಕೆ. ಚೆಂಗಲರಾಯರೆಡ್ಡಿಯವರಿಗೆ ಸೂಚಿಸ ಬಯಸುತ್ತೇನೆ. ಉದಾಹರಣೆಗಾಗಿ ಈ ಬಗ್ಗೆ ಒಂದೆರಡು ವಿಷಯಗಳನ್ನು ಪ್ರಸ್ತಾಪಿಸಲಿಚ್ಛಿಸುತ್ತೇನೆ.

ಈಗ ತಾವು ಗೋಲ್ಡ್ ಡ್ಯೂಟಿ ಆಕ್ಟನ್ನು ಜಾರಿಗೆ ತಂದಿದ್ದೀರಿ. ಇದರ ಮೂಲಕ ನಮ್ಮ ಸಂಸ್ಥಾನಕ್ಕೆ ಬರುತ್ತಿದ್ದ 90 ಲಕ್ಷ ರೂಪಾಯಿಗಳು ಈಗ ಖೋತಾ ಬಿದ್ದಿರುತ್ತೆಂಬುದಾಗಿ ಮಾನ್ಯ ಹಣಕಾಸಿನ ಸಚಿವರು ಕಳೆದ ವರ್ಷದ ತಮ್ಮ ಭಾಷಣದಲ್ಲಿ ಮೊನ್ನೆ ತಿಳಿಸಿದರು. ಆದರೆ ಹಾಗೆ ಲುಕ್ಸಾನಾದ ಮೊಬಲಗನ್ನು ಬೇರೊಂದು ಮಾರ್ಗದಲ್ಲಿ ಯಾವ ರೀತಿ ಅದನ್ನು ಪಡೆದು, ಈ ಲುಕ್ಸಾನನ್ನು ಸರಿಗಟ್ಟಿಕೊಳ್ಳಲು ಪ್ರಯತ್ನ ಪಟ್ಟಿದ್ದಾರೆಂಬುದನ್ನು ತಿಳಿದುಕೊಳ್ಳಬೇಕಾದ್ದು ಒಂದು ಮುಖ್ಯ ವಿಷಯ. ಇದು ಸರ್ಕಾರಕ್ಕೆ ಬರತಕ್ಕ ಫಾಯಿದೆ ವಿಚಾರ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ತಾವು ತಿಳಿಸಿದಂತೆ ಅದು "ಗೋಲ್ಡ್ ಡ್ಯೂಟಿ ಆಕ್ಟ್" ಅಲ್ಲ. ತಾವು ಹೇಳುತ್ತಿರುವುದು 'ಗೋಲ್ಡ್ ಡ್ಯೂಟಿ ರಿಪೀಲ್ ಆಕ್ಟ್.'

ಶ್ರೀ ಬಿ. ಹುಚ್ಚೇಗೌಡರು.—ಹೌದು ನಿಜ. ಆ ಗೋಲ್ಡ್ ಡ್ಯೂಟಿ ರಿಪೀಲ್ ಆಕ್ಟಿನ ವಿಚಾರವನ್ನೇ ಅವರೂ ತಿಳಿಸಿದ್ದಾರೆ. ಹೀಗೆಲ್ಲಾ ಮಾಡುತ್ತಿರುವ ಸಮಯದಲ್ಲಿ ನಮ್ಮ ದೇಶದ ಆರ್ಥಿಕ ಸ್ಥಿತಿಯನ್ನು ಹೇಗೆ ಉತ್ತಮಪಡಿಸಲು ಯಾವ ಯಾವ ಪ್ರಯತ್ನಗಳನ್ನು ಕೈಗೊಂಡಿರುತ್ತಾರೆ, ಅವುಗಳಿಂದ ಎಷ್ಟರ ಮಟ್ಟಿನ ಅನುಕೂಲ ಅಥವಾ ಪ್ರತಿಕೂಲವಾಗಿರುತ್ತವೆಂಬುದನ್ನು ತಿಳಿಯಬೇಕೆಂಬುದೇ ನಮ್ಮೆಲ್ಲರ ಆಸೆಯೂ ಆಗಿದೆ.

ಇದರಂತೆಯೇ ಈ ಹೆಚ್ಚು ಆಹಾರ ಬೆಳೆಯುವ ಯೋಜನೆ ಇನ್ನೂ ಇತರ ಎಷ್ಟೋ ಯೋಜನೆಗಳು ಆಗಿಂದಾಗ್ಗೆ ಬದಲಾವಣೆಯಾಗಿ ಬರುತ್ತಿವೆ. ಆದರೆ ಅವುಗಳೆಲ್ಲ ಎಷ್ಟರಮಟ್ಟಿಗೆ ಕಾರ್ಯಾಚರಣೆಯಲ್ಲಿ ಬಂದು ಫಲದಾಯಕವಾಗಿರುತ್ತವೆಂಬುದನ್ನು ತಿಳಿದುಕೊಳ್ಳಬೇಕಾದುದು ನಮ್ಮ ಕರ್ತವ್ಯ. ಅದನ್ನು ಈ ಸಭೆಯ ಅವಗಾಹನೆಗೆ ತರತಕ್ಕದ್ದು ಸರ್ಕಾರದವರ ಮುಖ್ಯ ಕರ್ತವ್ಯವೆಂದು ನಾನು ಭಾವಿಸಿದ್ದೇನೆ.

ರೂರಲ್ ಡೆವಲಪ್‌ಮೆಂಟ್ ಕಮಿಟಿಯೆಂಬ ಒಂದು ಹೊಸ ಯೋಜನೆಯನ್ನು ಕಳೆದ ವರ್ಷದ ಏಪ್ರಿಲ್ ತಿಂಗಳಲ್ಲಿ ಜಾರಿಗೆ ತಂದರು. ಅದು ಈಗ ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿದೆ, ಮುಂದಿನ ವರ್ಷ ಅದರಲ್ಲಿ ಏನಾ

ದರೂ ಪರಿವರ್ತನೆ ಮಾಡತಕ್ಕದ್ದು ಅಗತ್ಯವಾಗಿದೆಯೋ ಅಥವಾ ಅದರ ಕೆಲಸ ಕಾರ್ಯಗಳು ಸಮರ್ಪಕವಾಗಿ ನೆರವೇರಿಸಲ್ಪಡುತ್ತಿವೆಯೋ ಎಂಬುದನ್ನು ಮತ್ತು ಈ ಮಲ್ಟಿಪರ್‌ಪಸ್ ಕೋ-ಆಪರೇಟಿವ್ ಸೊಸೈಟಿಗಳ ವಿಚಾರವಾಗಿ ಈಗಾಗಲೇ 25 ಲಕ್ಷ ರೂಪಾಯಿಗಳ ನಿಧಿಯನ್ನು ವಸೂಲು ಮಾಡಿದ್ದಾರೆ, ಆದರೆ ಅದರಲ್ಲಿರುವ ಸಾಧಕ ಬಾಧಕಗಳೇನೆಂಬುದೇ ತಿಳಿಯದಾಗಿದೆ. ಇಂಥಾ ವಿಚಾರಗಳನ್ನೆಲ್ಲಾ ಈ ಮಾನ್ಯ ಸಭೆಯ ಸದಸ್ಯರ ಅವಗಾಹನೆಗೆ ಸಂಬಂಧಪಟ್ಟ ಮಂತ್ರಿಗಳು ತರತಕ್ಕದ್ದು ಅವರ ಕರ್ತವ್ಯ. ಆದಕಾರಣ ಪ್ರತಿಯೊಬ್ಬ ಮಂತ್ರಿಗಳೂ ಕೂಡ ತಮ್ಮ ತಮ್ಮ ಆಡಳಿತಕ್ಕೆ ಸಂಬಂಧಪಟ್ಟ ವಿಚಾರಗಳನ್ನು ತಿಳಿಸುವುದು ಉತ್ತಮವಾದ ಪದ್ಧತಿಯೆಂದು ಹೇಳಲಿಚ್ಛಿಸುತ್ತೇನೆ. ಆದರೆ ಇದರಲ್ಲಿ ತಮ್ಮೆಲ್ಲರ ಜಂಟಿ ಜವಾಬ್ದಾರಿ ಇದ್ದಾಗ್ಯೂ ಶ್ರೀಮಾನ್ ದಾಸಪ್ಪನವರು ಅವರ ಆಡಳಿತಕ್ಕೊಳಪಟ್ಟ ವಿಚಾರಗಳ ಬಗ್ಗೆ 2-3 ಪುಟಗಳಲ್ಲಿ ತಿಳಿಸಿ, ಬಾಕಿ ಎಲ್ಲಾ ವಿಚಾರದಲ್ಲೂ ಕೇವಲ 4-5 ಪುಟಗಳಲ್ಲೇ ಮುಗಿಸಿದ್ದಾರೆ. ಕಳೆದ ವರ್ಷ ಎಲ್ಲೆಲ್ಲಿ ಎಷ್ಟೆಷ್ಟು ಪಾಠಶಾಲೆಗಳನ್ನು ಅಥವಾ ಕಾಲೇಜುಗಳನ್ನು ತೆರವಿದ್ದಾರೆ ಎಂಬ ಸಂಗತಿಗಳು ಅಷ್ಟು ವಿವರವಾಗಿ ಇದರಲ್ಲಿರುವುದಿಲ್ಲ. ಅವರ ಭಾಷಣದಲ್ಲೂ ತಿಳಿಸಲಿಲ್ಲ.

ಶ್ರೀ ಟಿ. ಮರಿಯಪ್ಪನವರು.—ಆರ್ಥಿಕ ಸಚಿವರ ಭಾಷಣದ ಪ್ರತಿಯ 35ನೆಯ ಪುಟದಲ್ಲಿ ಅದನ್ನೆಲ್ಲಾ ವಿವರಿಸಿದ್ದಾರೆ. ಆದರೆ ತಾವು ಅದನ್ನು ಓದದೆ ಇದ್ದರೆ ನಾನೇನು ಮಾಡಲಿಕ್ಕಾಗುತ್ತದೆ?

ಅಧ್ಯಕ್ಷರು.—ಇಲ್ಲವೆಂದು ತಿಳಿಸಲಿಲ್ಲ. ಸ್ವಲ್ಪ ಮಾತ್ರ ಇದೆಯೆಂದು ಹೇಳಿದ್ದಾರೆ.

ಶ್ರೀ ಬಿ. ಹುಚ್ಚೇಗೌಡರು.—ನಾನು ಹೇಳಿದ್ದೆಲ್ಲಾ ಆದನಂತರ ತಾವು ಮಾಡತಕ್ಕ ಟೀಕೆಗಳಿಗೆ ಉತ್ತರವನ್ನು ನಾನು ಕೊಡಬಲ್ಲೆ.

ಈಗ ತಾವು ಮಾರ್ಪಾಡು ಮಾಡಿರತಕ್ಕ ಈ ಸಭೆಯ ಕಾರ್ಯಕಲಾಪಗಳ ಕಾನೂನಿನ ಬಗ್ಗೆ ಮತ್ತು ತಮ್ಮ ನೀತಿಯ ವಿಷಯದಲ್ಲಿ ಕೆಲವು ನ್ಯೂನಾತಿರಿಕ್ತಗಳಿವೆ. ನಮಗೆ ಸಾಕಷ್ಟು ಕಾಲಾವಕಾಶವಿಲ್ಲ. ನಮಗೆ ತಾವೀಗ ಈ ಲಿಟರೇಚರುಗಳನ್ನು ಒದಗಿಸುತ್ತಿರುವುದು ಮತ್ತು ಅವುಗಳನ್ನು ಓದಿ ನಾವು ಅವುಗಳ ಬಗ್ಗೆ ನಮ್ಮ ಅಭಿಪ್ರಾಯ ಸೂಚಿಸುವುದಕ್ಕೆ ನಮಗೆ ಕಾಲ ಸಾಕಾಗುತ್ತಿಲ್ಲ. ಆದ್ದರಿಂದ ಈ ಖಾಯಂ ಹುಕುಮುಗಳನ್ನು ಕೊಂಚ ಬದಲಾವಣೆ ಮಾಡಬೇಕೆಂದು ಅಧ್ಯಕ್ಷರಲ್ಲಿ ಪ್ರಾರ್ಥಿಸುತ್ತೇನೆ.

ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ).—ಈಗಿನ ಕಾರ್ಯಕ್ರಮದಲ್ಲಿ ಏನು ಬದಲಾವಣೆಯಾಗಿದೆ!

ಶ್ರೀ ಬಿ. ಹುಚ್ಚೇಗೌಡರು.—ನೆನ್ನೆ ನಮಗೆ ಈ ಬಡ್ಜೆಟ್ಟನ್ನು ಕೊಟ್ಟಿದ್ದಾರೆ. ಈ ದಿವಸವೇ ನಾವು ಅದರ ಮೇಲೆ ಎಲ್ಲಾ ವಿಷಯದಲ್ಲೂ ಭಾಷಣ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅದನ್ನು ತಿರುವಿ ಹಾಕುವುದಕ್ಕೂ ಸಹ ಕಾಲ ಸಾಕಾಗುವುದಿಲ್ಲ.

ಆಮೇಲೆ ಚರ್ಚೆಗಳಿಗೂ ಮತ್ತು ಖೋತಾ ಸೂಚನೆಗಳಿಗೂ ಇನ್ನೂ ಹೆಚ್ಚಿಗೆ ಕಾಲ ಕೊಡಬೇಕು. ಈಗ ಕೊಟ್ಟಿರತಕ್ಕ ಮೂರು ದಿವಸಗಳು ಸಾಲದು. ಆದ್ದರಿಂದ ನಮ್ಮ ಖಾಯಂ ನಿಬಂಧನೆಗಳನ್ನು ಸ್ವಲ್ಪಮಟ್ಟಿಗೆ ಬದಲಾಯಿಸಬೇಕೆಂದು ಹೇಳುತ್ತೇನೆ. ಈ ವಿಷಯ ಈಗಾಗಲೇ ತಮ್ಮ ಗಮನದಲ್ಲಿಯೂ ಇರಬಹುದು. ಆದರೂ ಆದಷ್ಟು ಜಾಗ್ರತೆ ಬದಲಾಯಿಸಬೇಕೆಂದು ನನ್ನ ಅರಿಕೆ.

ಈಗ ನಮ್ಮ ಮುಂದಿರುವ ಬಡ್ಜೆಟ್ ನೋಡಿದರೆ ಮೂರು ಲಕ್ಷ ರೂಪಾಯಿಗಳ ಉಳಿತಾಯವನ್ನೇನೋ ತೋರಿಸಿದಂತಿದೆ. ಈ ಉಳಿತಾಯದ ಬಡ್ಜೆಟ್ಟು, ಖೋತಾ ಬಡ್ಜೆಟ್ಟು ಇವುಗಳನ್ನೆಲ್ಲಾ ಯಾವ ರೀತಿ ಅಂಕಿಗಳನ್ನು ಜೋಡಣೆ ಮಾಡಿ ತೋರಿಸಬಹುದು, ಅದರಿಂದ ಏನು ವ್ಯತ್ಯಾಸವಾಗುತ್ತದೆಂಬುದು ಎಲ್ಲರಿಗೂ ತಿಳಿದಿರುವ ವಿಚಾರ ಅಭಿವೃದ್ಧಿ ಇಲಾಖೆಗಳಿಗೆ ಹಣ ಕೊಡುವುದನ್ನು ಖೋತಾ ಮಾಡಿತೆಂದರೆ ಎಷ್ಟು ಬೇಕಾದರೂ ಉಳಿತಾಯ ತೋರಿಸಬಹುದು. ಈಗ ಈ ಬಡ್ಜೆಟ್ ನೋಡುವುದರಲ್ಲಿ, ನನಗೆ ತಿಳಿದಮಟ್ಟಿಗೆ ಹೋದ ವರ್ಷ ಕೊಟ್ಟಿರುವುದಕ್ಕಿಂತ ಎಲ್ಲಾ ಬಾಬುಗಳಲ್ಲೂ ಖೋತಾ ಆಗಿದೆ.

ಶ್ರೀ ಎಚ್. ಸಿ. ದಾಸಪ್ಪನವರು.—ಇಲ್ಲವೇ ಇಲ್ಲ; ತೋರಿಸಿ, ನೋಡೋಣ.

ಶ್ರೀ ಬಿ. ಹುಚ್ಚೇಗೌಡರು.—114ನೆಯ ಪುಟವನ್ನು ನೋಡಿ. ವಿದ್ಯಾಭ್ಯಾಸಕ್ಕೆ 2,89,40,000 ಕೊಟ್ಟಿರುವುದಕ್ಕೆ ಬದಲಾಗಿ ಈ ಸಾರಿ 2,83,06,000 ರೂಪಾಯಿಗಳನ್ನು ಮಾತ್ರ ಕೊಟ್ಟಿದೆ. ಮಿಡ್ಲ್ ಸ್ಕೂಲುಗಳಿಗೆ 28 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದ ಕಡೆ, ಈಗ 19 ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದೆ.

ಶ್ರೀ ಎಚ್. ಸಿ. ದಾಸಪ್ಪನವರು.—ನನಗೆ ಅವಕಾಶ ಕೊಟ್ಟರೆ ಇದನ್ನು ವಿಶದೀಕರಿಸುತ್ತೇನೆ. ಅವರು ಹೇಳಿದ್ದನ್ನು ಯುದ್ಧಾನಂತರ ಯೋಜನೆಗಳಲ್ಲಿ ಸೇರಿಸಿರಬಹುದೆಂದು ಕಾಣುತ್ತೆ.

ಇದೇ 114 ನೆಯ ಪುಟದಲ್ಲಿ ತಾವು 15 (A) 'ಐಟಂ' ಸ್ವಲ್ಪ ನೋಡಬೇಕು. 129 ಲಕ್ಷ ಚಿಲ್ಲರೆಯಷ್ಟು ಹಣ ತೋರಿಸಿದೆ. ಹಿಂದಿನ ವರ್ಷ ಎಷ್ಟಕ್ಕೆ ಬಡ್ಜೆಟ್ ಮಾಡಿತ್ತೆಂಬುದನ್ನು ಹೇಳಿ.

ಶ್ರೀ ಬಿ. ಹುಚ್ಚೇಗೌಡರು.—ಹಿಂದಿನ ವರ್ಷ ಏನೂ ಇಲ್ಲ.

ಶ್ರೀ ಎಚ್. ಸಿ. ದಾಸಪ್ಪನವರು.—ಆಮೇಲೆ 1-7-1949 ರಿಂದೀಚೆಗೆ ಎಷ್ಟು ಖರ್ಚು ಮಾಡಿದ್ದೇವೋ ಅದನ್ನು ಎರಡನೆಯ ಭಾಗದಲ್ಲಿ ತೋರಿಸಿದ್ದೇವೆ. ಅಲ್ಲಿ ಪ್ರೈಮರಿ, ಮಿಡ್ಲ್ ಮತ್ತು ಹೈಸ್ಕೂಲು ವಿದ್ಯಾ ಬಾಬುಗಳಿಗೆ ಎಷ್ಟೆಷ್ಟು ಹೆಚ್ಚಿಗೆ ಕೊಟ್ಟಿದೆಯೆಂಬುದು ತಮಗೇ ಗೊತ್ತಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—ಹಾಗಲ್ಲ. ಇಲ್ಲಿ 114 ನೆಯ ಪುಟದಲ್ಲಿ ಕೊಟ್ಟಿರುವುದನ್ನು ಲೆಕ್ಕ ಹಾಕಿದರೆ ಹೋದ ವರ್ಷಕ್ಕಿಂತ ಈ ವರ್ಷ ವಿದ್ಯಾಭ್ಯಾಸಕ್ಕೆ 6,47,000 ರೂಪಾಯಿ ಕಮ್ಮಿಯಾಗಿದೆ.

Sri H. C. DASAPPA.—That is a budgeted figure. ಹಾಲಿ ಆಗಿರುವ ಖರ್ಚೆಷ್ಟು ಎಂಬುದನ್ನು ಅಲ್ಲಿ ತೋರಿಸಿಲ್ಲ. ಏನಿದ್ದರೂ ಕಟ್ಟಡಗಳಿಗೆ ಒದಗಿಸಿರುವುದರಲ್ಲಿ ಸ್ವಲ್ಪ ಖೋತಾ ಆಗಿದೆ, ಅಷ್ಟೆ. ಸ್ಕೂಲುಗಳು ಮುಂತಾದ ಅಭಿವೃದ್ಧಿ ಬಾಬುಗಳಿಗೆ ಖೋತಾ ಮಾಡಿಯೇ ಇಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ ಈ 2 ಕೋಟಿ 89 ಲಕ್ಷ ರೂಪಾಯಿಗಳಿಗಿಂತ ಕಮ್ಮಿ ಖರ್ಚು ಮಾಡುತ್ತಾರೆಂದು ತಿಳಿದುಕೊಳ್ಳುವುದಕ್ಕಾಗುವುದಿಲ್ಲವೇ? ಏಕೆಂದರೆ ಮಿಡ್ಲ್ ಸ್ಕೂಲುಗಳ ವಿಷಯ ತೆಗೆದುಕೊಂಡರೆ ತಾವು ಅಂದಾಜು ಮಾಡಿರುವ ಬಡ್ಜೆಟ್ಟು ಹಾಲಿ ಆಗಿರುವ ಖರ್ಚಿಗಿಂತ 6 ಲಕ್ಷ ರೂಪಾಯಿಗಳು ಕಡಿಮೆಯಾಗುತ್ತದೆಯಲ್ಲವೇ?

ಇಷ್ಟು ಮಾಡಬೇಕಾದರೂ ತೆರಿಗೆ ಹಾಕುವುದೇನೂ ತಪ್ಪಲಿಲ್ಲ. ನಾನೇನೋ ಮೊದ ಮೊದಲು ಶ್ರೀಮನ್ಮಹಾರಾಜರವರ ಭಾಷಣವನ್ನು ನೋಡಿ ಈ ವರ್ಷ

ತೆರಿಗೆಗಳ ವಿಧಾಯಕವೇನೂ ಇಲ್ಲ ಎಂದು ಬಹಳ ಸಂತೋಷದಿಂದಿದ್ದೆ. ಆದರೆ ಈಗ ನೋಡಿದರೆ ಅದೂ ಬಂದೇ ಬಂದಿದೆ. ಆರ್ಥಿಕ ಸಚಿವರು ಯಾವ್ಯಾವುದಕ್ಕೆ ತೆರಿಗೆಗಳನ್ನು ಹಾಕಬಹುದೋ ಅದಕ್ಕೆಲ್ಲಾ ಹಾಕಿಯೇ ಇದ್ದಾರೆ. ದೇಶದ ಅಭಿವೃದ್ಧಿಗೆ ಧಕ್ಕೆ ಬರುತ್ತದೆಯೇ ಇಲ್ಲವೇ ಎಂಬುದು ಅವರ ಗಮನದಲ್ಲಿ ಇರುವುದಿಲ್ಲವೆಂದು ಕಾಣುತ್ತೆ. ಮುಖ್ಯವಾಗಿ ತೆರಿಗೆ ಹಾಕಬೇಕು, ಅದರಂತೆ ಮಾಡಿದ್ದಾರೆ ಅಷ್ಟೆ.

ವಿದ್ಯಾಭ್ಯಾಸಕ್ಕಾಗಿ ಮೂರುಕೋಟಿ ರೂಪಾಯಿಗಳಷ್ಟು ಖರ್ಚು ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಆದರೆ 1946–47ರಲ್ಲಿ ಖರ್ಚು ಮಾಡುತ್ತಿದ್ದ ಹಣಕ್ಕೂ ಆಗಿನ ಜೀವನದ ಮಟ್ಟಕ್ಕೂ ಈಗಿನ ಖರ್ಚಿಗೂ ಮತ್ತು ಈಗಿನ ಖರ್ಚಿನ ಮಟ್ಟಕ್ಕೂ ಹೋಲಿಸಿ ನೋಡಿದರೆ ಈ ಹಣವೇನೂ ಹೆಚ್ಚಲ್ಲ. ಈಗಿನ ಜೀವನದ ಖರ್ಚೆಷ್ಟು, ಈಗ ಕೊಡಬೇಕಾದ ತುಟ್ಟಿಭತ್ಯವೇನು ಎಲ್ಲವನ್ನೂ ಲೆಕ್ಕ ಹಾಕಿದರೆ ನೀವು ಒದಗಿಸಿರುವ ಹಣ ಏನೇನೂ ಸಾಲದು.

ಸೇಲ್ಸ್‌ಟ್ಯಾಕ್ಸ್ ವಿಚಾರವಾಗಿ ಆಗಲೇ ಹೇಳಿದ್ದೇನೆ ಈ ಬಾಬು ಇಷ್ಟರಲ್ಲೇ ಕೇಂದ್ರಕ್ಕೇ ಸೇರಿಹೋಗಬಹುದು. ಅಥವ ಕೆಲವು ಬಾಬುಗಳಿಗೆ ಹಾಕತಕ್ಕ ಸೇಲ್ಸ್‌ಟ್ಯಾಕ್ಸನ್ನು ತಮಗೆ ಕೊಡಬೇಕೆಂದು ಹೇಳಬಹುದು. ಆ ಸಂಬಂಧವಾಗಿ ನಮ್ಮ ಸರ್ಕಾರದವರು ಯಾವರೀತಿ ತೀರ್ಮಾನಕ್ಕೆ ಬರುತ್ತಾರೋ ನೋಡಬೇಕು. ಏಕೆಂದರೆ ಪ್ರತಿಯೊಂದು ಭಾಗದಲ್ಲೂ ಯಾವ financial integration ನಲ್ಲಿರುವ ತತ್ವವನ್ನು ಇಷ್ಟು ದಿವಸವೂ ಹೊಗಳುತ್ತಿದ್ದರೋ ಅದರ ಅರ್ಥ ನನಗಂತೂ ಗೊತ್ತಾಗುವುದಿಲ್ಲ.

ಒಬ್ಬ ಸದಸ್ಯರು.—ನಿಮಗೆ ಎಂದಿಗೂ ಅರ್ಥವೇ ಆಗುವುದಿಲ್ಲ !!

ಶ್ರೀ ಬಿ. ಹುಚ್ಚೇಗೌಡರು.—ಅದರಲ್ಲಿ ಅರ್ಥವಾಗುವ ಬಾಬುಗಳಿದ್ದರೆ ತಾನೆ ಅರ್ಥ ಆಗುವುದು ! ಆದ್ದರಿಂದ ಅದರಿಂದ ಏನಾದರೂ ಅನುಕೂಲ ಆಗುತ್ತದೆ ಎಂದು ನನಗೆ ಭರವಸೆ ಇಲ್ಲ. ಏನೋ ಒಂದು ವಿಶೇಷ ಕಾಲದ ಸನ್ನಿವೇಶದಲ್ಲಿ ಎಲ್ಲರೂ integrationಗೆ ಒಪ್ಪಿಕೊಂಡರೆಂದು ಹೇಳಿ ಇವರೂ ಒಪ್ಪಿಕೊಂಡುಬಿಟ್ಟರು. ಕೇಂದ್ರ ಸರ್ಕಾರದವರೊಡನೆ ನಾವಿಂದು integration ಮಾಡಿಕೊಂಡು ಯಾವ ಸ್ಥಿತಿಗೆ ಬಂದಿದ್ದೇವೆ ಎಂದರೆ ನಮ್ಮ ಸರ್ಕಾರದ ಕೈಕೆಳಗೆ ಒಂದು ಡಿಸ್ಟ್ರಿಕ್ಟ್ ಬೋರ್ಡ್ ಅಥವಾ ತಾಲ್ಲೂಕು ಬೋರ್ಡು ಎಷ್ಟುಮಟ್ಟಿಗಿರುತ್ತದೋ ಅಷ್ಟಕ್ಕೆ. ಈಗ ನಮ್ಮ ಅಕ್ಕಪಕ್ಕದ ಪ್ರಾಂತ್ಯಗಳೂ ಈ integrationನ್ನಿನ ಬಿಸಿಯನ್ನು ಅನುಭವಿಸುತ್ತಿವೆ ನಾವೂ ಬೇಕಾದರೆ ಈ ಪಡುತ್ತಿರುವ ಕಷ್ಟವನ್ನು ನಮ್ಮ ಪಾರ್ಲಿಮೆಂಟಿನ ಸದಸ್ಯರ ಮೂಲಕ ತಿಳಿಯಪಡಿಸುವುದಕ್ಕೆ ಅವಕಾಶವಿದೆಯೆಂದು ಹೇಳಬಹುದು. ಆದರೆ, ಯಾರಿಗೆ ಗೊತ್ತು, ಅವರೂ ಅಲ್ಲಿಗೆ (ಕೇಂದ್ರ ಶಾಸನ ಸಭೆಗೆ) ಹೋದಮೇಲೆ ಅವರಂತೆಯೇ ಒಪ್ಪಿಬಿಟ್ಟಿರಬಹುದು. ಅಂತೂ ಮುಂದೆ ಈ integrationನ್ನಿನ ಪರಿಣಾಮವೇನೆಂಬುದು ನಮಗೇ ಗೊತ್ತಾಗುತ್ತದೆ. ಈ ದಿವಸ ನಮ್ಮಲ್ಲಿ ಕೊಂಚ ರಿಸರ್ವ್ ಫಂಡುಗಳಿರುವುದರಿಂದ ನಮಗೆ ಗೊತ್ತಾಗುತ್ತಿಲ್ಲ. ಅದೆಲ್ಲಾ ಪೂರ್ತಿಯಾಗಿ ಕರಗಿ ಹೋದಮೇಲೆ ನಮಗೂ ಅದರ ಬಿಸಿ ತಟ್ಟುತ್ತದೆ.

ಇನ್ನೊಂದು ವಿಷಯವೇನೆಂದರೆ, ನಮ್ಮ ದೇಶದ ಸಂಚಾರ ಸೌಕರ್ಯಗಳು ತುಂಬಾ ಶೋಚನೀಯವಾಗಿವೆ. ನಮ್ಮ ದೇಶದ ಆವಶ್ಯಕತೆಗಳಿಗೆ ಅನುಗುಣವಾಗಿ ಮತ್ತು ನಮ್ಮ ದೇಶದ ವ್ಯಾಪಾರ ಪ್ರವರ್ಧಮಾನಕ್ಕೆ ಬರುವುದಕ್ಕೆ ಸಹಾಯಕವಾಗಿರುವಂತೆ ಹೆಚ್ಚು ಹೆಚ್ಚು ಸಂಚಾರ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ.

ಅದರಲ್ಲೂ ಈಗ ಸಂಚಾರದ ವಾಹನಗಳಿಗೆ ಹೆಚ್ಚು ತೆರಿಗೆ ಹಾಕಿ ಅದರಿಂದ ವಸೂಲಾದ ಹಣವನ್ನೆಲ್ಲಾ ಜನರಲ್ ರೆವೆನ್ಯೂಗೆ ತೆಗೆದುಕೊಳ್ಳುತ್ತಿರುವುದು ಖಂಡಿತ ಸರಿಯಲ್ಲವೆಂಬುದನ್ನು ಅನೇಕವೇಳೆ ಸರ್ಕಾರದ ಗಮನಕ್ಕೆ ತಂದಿದ್ದೇವೆ. ಇಂಡಿಯಾ ಸರ್ಕಾರದಿಂದ ಬರುವ ಪೆಟ್ರೋಲ್ ಸುಂಕ ಮತ್ತು ನಮ್ಮ ದೇಶದಲ್ಲಿ ಹಾಕುವ ಸುಂಕ—ಇವೆಲ್ಲವನ್ನೂ ಸೇರಿಸಿ ಸಂಚಾರ ಸೌಕರ್ಯಕ್ಕಾಗಿ ಮುಡುಪಾಗಿಡಿ ಎಂದು ಹೇಳಿದ್ದರೂ ಕೂಡ ಇದುವರೆಗೂ ಹಾಗೆ ಮಾಡಿಲ್ಲ ಮತ್ತು ಸ್ಥಳೀಯ ಸಂಸ್ಥೆಗಳಿಂದ ಸಾಧಾರಣವಾಗಿ ಬರುವುದೂ ಬರುತ್ತಿಲ್ಲ. ಈ ದಿವಸ ಸುಮಾರು ಶೇಕಡ 15–20ರಷ್ಟು ಮಾತ್ರ ಸ್ಟೇಟ್‌ಫಂಡ್ ರಸ್ತೆಗಳಿರುತ್ತವೆ. ಬಾಕಿಯಾದ ಇತರ ರಸ್ತೆಗಳೂ ಇವೆ. ಆ ರಸ್ತೆಗಳಲ್ಲಿ ಎಷ್ಟುಮಟ್ಟಿನ ಸಂಚಾರವಿದೆಯೋ ಅದಕ್ಕೆ ತಕ್ಕಂತೆ ದುರಸ್ತಿಯಿಲ್ಲ. ಅವುಗಳಿಂದ ಎಷ್ಟು ಸುಂಕ ಬರುತ್ತದೆಯೋ ಅದು ಅವುಗಳಿಗಾಗಿಯೇ ವಿನಿಯೋಗವಾಗುತ್ತಿಲ್ಲ. ಇದನ್ನು ಜಾಗ್ರತೆ ಸರಿಪಡಿಸುತ್ತಾರೆಂದು ನಂಬಿದ್ದೇನೆ.

ಇರಿಗೇಷನ್ ವಿಚಾರ. ಮದ್ರಾಸಿನಲ್ಲಿ ವರ್ಷಕ್ಕೆ 15 ಕೋಟಿ ರೂಪಾಯಿಗಳನ್ನು ನೀರಾವರಿಗಾಗಿ ಕೊಡುತ್ತಿದ್ದಾರೆ. ಹಾಗಿರುವಾಗ ಅದರ ದಾಮಾಷಾ ಪ್ರಕಾರ 3 ಕೋಟಿ ರೂಪಾಯಿಗಳನ್ನಾದರೂ ನೀವು ಈ ಬಾಬಿಗೆ ಖರ್ಚುಮಾಡಬೇಕು. ಅಲ್ಲದೆ ನಮ್ಮಲ್ಲಿ ಕೈಗಾರಿಕೆಗಳು ಬಹಳ ಉನ್ನತಸ್ಥಿತಿಯಲ್ಲವೆ. ಅನೇಕ ಕಾಲದಿಂದ ಗ್ರಾಮಾಂತರಗಳಲ್ಲ ಕಷ್ಟಪಟ್ಟು ದುಡಿದು ಸಂಪಾದಿಸಿರುವ ಹಣವನ್ನು ಹಾಕಿ ಈ ಕೈಗಾರಿಕೆಗಳನ್ನು ಸ್ಥಾಪಿಸಿದ್ದಾರೆ. ಆದ್ದರಿಂದ ಈ ದಿವಸ ಕೈಗಾರಿಕೆಗಳು ಅಭಿವೃದ್ಧಿಸ್ಥಿತಿಯಲ್ಲಿರುವಾಗ ಅವುಗಳಿಗಾಗಿ ಖರ್ಚುಮಾಡಿರುವ ಹಣವನ್ನು ತೆಗೆದು ನೀರಾವರಿ ಸೌಕರ್ಯಗಳಿಗೆ ಉಪಯೋಗಿಸಿದರೆ ಆ ಋಣ ತೀರುತ್ತದೆ. ಉದಾಹರಣೆಗೆ ಭದ್ರಾವತಿ ಕಾರ್ಖಾನೆಗೆ 2 ಕೋಟಿ ರೂಪಾಯಿಗಳ ವೆಚ್ಚ ತಗುಲಿದೆ. ಅದಕ್ಕೆ 7 ರೂಪಾಯಿನಂತೆ ಬಡ್ಡಿ ಹಾಕಿದ್ದಾರೆ. ಹೀಗೆ 2 ಕೋಟಿ ರೂಪಾಯಿಗಳ ಜೊತೆಗೆ ಬಂದಿರುವ 3 ಕೋಟಿ ಬಡ್ಡಿಯಲ್ಲಿ ಈ ದಿವಸ ಅರ್ಧ ಕೋಟಿಯನ್ನಾದರೂ ನೀರಾವರಿಗಾಗಿ ಈ ದಿವಸ ಕೊಡಬೇಕು. ಈಗ ಆ ಕಾರ್ಖಾನೆ ಉನ್ನತಸ್ಥಿತಿಯಲ್ಲಿದೆ. ಈಗ ಹೀಗೆ ಅನುಕೂಲಮಾಡಬಹುದು. ಹಿಂದೆ ಕೇಳುವುದಕ್ಕೆ ಬಾಯಿ ಇರಲಿಲ್ಲದವರಿಗೆ ಈಗ ಆ ಕೈಗಾರಿಕೆಯು ಚೆನ್ನಾಗಿ ನಡೆಯುತ್ತಿರುವುದರಿಂದ ಅವಕಾಶವಿದೆ. ನಮ್ಮ ದೇಶದಲ್ಲಿ ಸುಮಾರು 30 ಸಾವಿರ ಕೆರೆಗಳಿವೆ. ಅವುಗಳಲ್ಲಿ 28,500 ಕೆರೆಗಳು ದುರಸ್ತಾಗಬೇಕಾದ್ದಕ್ಕೆ ಕೇವಲ 5 ಸಾವಿರ ಮಾತ್ರ ಆಗಿ ಇನ್ನೂ ಅನೇಕ ಕೆರೆಗಳು ಹಾಗೆಯೇ ನಿಂತಿವೆ. ಇಂಥ ಆವಶ್ಯಕತೆಯಿರುವಾಗ ಸುಮ್ಮನೆ ಆಹಾರವನ್ನು ಹೆಚ್ಚಾಗಿ ಬೆಳೆಯಿರೆಂದು ಹೇಳುತ್ತಿದ್ದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಅದು ಆಗಬೇಕಾದರೆ ಮುಖ್ಯವಾಗಿ ನೀರಾವರಿ ಸೌಕರ್ಯಬೇಕು.

ನೀರಾವರಿ ಕಾಮಗಾರಿಗಳ ಕಡೆ ಹೆಚ್ಚು ಗಮನ ಕೊಡದೆ ಸುಮ್ಮನೆ ಹೆಚ್ಚು ಬೆಳೆಯಿರಿ ಎಂದರೆ ಬೆಳೆಯುವುದಕ್ಕಾಗುವುದಿಲ್ಲ. ಇದನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ಹಿಂದೆ ಯಾವ ಪ್ರದೇಶದ ಜನರಿಗೆ ಯಾವ ಅನ್ಯಾಯವಾಗಿದೆಯೆಂಬುದನ್ನು ನೋಡಿ ಅಂಥವರಿಗೆ ಹೆಚ್ಚಿನ ಸಹಾಯಮಾಡಬೇಕು. ಎಲ್ಲಿ ಅನ್ಯಾಯ

ವಾಗಿದೆಯೋ ಅಲ್ಲಿ ಅದನ್ನು ಸರಿಪಡಿಸುವುದು ಸರ್ಕಾರದವರ ಕರ್ತವ್ಯವೆಂದು ಹೇಳುತ್ತೇನೆ.

ಇನ್ನೊಂದು ವಿಷಯ. Secular State ಎಂದು ನೀವು ಹೇಳುತ್ತಿರುವಾಗ ಇಷ್ಟೊಂದು ರಜಾ ದಿನಗಳೇಕೆ? ಕಚೇರಿಗಳಿಗೆ ಬೇರೆಬೇರೆಯವರ ಹಬ್ಬಗಳಲ್ಲಿ ಇಷ್ಟೊಂದು ರಜ ಏಕೆ ಕೊಡಬೇಕು ! ಸ್ಕೂಲುಗಳಿಗೂ ಹೆಚ್ಚು ರಜಾ ದಿನಗಳಿವೆ. ಇದನ್ನು ಕಡಿಮೆಮಾಡಿ ಎಷ್ಟು ಅನಿವಾರ್ಯವಾಗಿ ಅವಶ್ಯಕತೆಯಿದೆಯೋ ಅಷ್ಟು ಮಾತ್ರ ರಜಾ ದಿನಗಳನ್ನಿಡಬೇಕು. ಯಾವ ಯಾವ ಪಂಗಡಕ್ಕೆ ಅಥವಾ ಜಾತಿಯವರಿಗೆ ಯಾವ ಯಾವ ಹಬ್ಬವಿದೆ ಎಂಬುದನ್ನು ನೋಡಿಕೊಂಡು ಅವುಗಳಿಗಾಗಿ ರಜಾ ಕೊಡುವುದನ್ನು ಕಡಿಮೆಮಾಡಬೇಕೆಂದು ಸೂಚಿಸುತ್ತೇನೆ.

ಶ್ರೀ ಆರ್. ಚೆನ್ನಿಗರಾಮಯ್ಯನವರು (ಸ್ಥಳೀಯ ಸಂಸ್ಥೆಗಳ ಸಚಿವರು).—ಯಾವ ರಜವನ್ನು ಕಡಿಮೆ ಮಾಡಬೇಕೆಂದು ಹೇಳುತ್ತೀರಿ ?

ಶ್ರೀ ಬಿ. ಹುಚ್ಚೇಗೌಡರು.—ನೆಗೋಷಿಯಬಲ್ ಇನ್‌ಸ್ಟ್ರುಮೆಂಟ್ ಆಕ್ಟ್ ಪ್ರಕಾರ ಇರುವ ರಜಾ ಮಾತ್ರ ಇರಬೇಕು. ಹಿಂದೂಗಳ ಹಬ್ಬ, ಮುಸಲ್ಮಾನರ ಹಬ್ಬ ಎಂದು ರಜ ಕೊಡುವುದನ್ನು ಕಡಿಮೆ ಮಾಡಬೇಕು.

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹಿಂದಿನ ವರ್ಷಕ್ಕಿಂತ ಈ ವರ್ಷ ರಜಾದಿನಗಳು ಕಡಿಮೆಯಾಗಿವೆ ಯೆಂಬುದನ್ನು ಕ್ಯಾಲೆಂಡರ್‌ನಲ್ಲಿ ನೋಡಿದ್ದೀರಾ ?

ಶ್ರೀ ಬಿ. ಹುಚ್ಚೇಗೌಡರು.—ನೋಡಿದ್ದೇನೆ. ಕಡಿಮೆ ಯಾಗಿಲ್ಲ.

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಕ್ರಿಸ್‌ಮಸ್, ದಸರಾ ಮತ್ತು ಇನ್ನ ಕೆಲವು ರಜಾ ದಿನಗಳು ಕಡಿಮೆಯಾಗಿವೆ.

ಶ್ರೀ ಎಂ ಎಚ್. ಜೋಯಿಸರು (ಮೈಸೂರು ಜಿಲ್ಲೆ).—ಸ್ವಾಮಿ, ಒಂದು ವಿಚಾರ ತಿಳಿದುಕೊಳ್ಳಬೇಕಾಗಿದೆ. ನೆಗೋಷಿಯಬಲ್ ಇನ್‌ಸ್ಟ್ರುಮೆಂಟ್ ಆಕ್ಟ್ ಪ್ರಕಾರ ರಜಾ ಕೊಡುವುದು ಬ್ಯಾಂಕುಗಳಿಗೆ. ಇದು ಅಖಿಲ ಭಾರತದ ನೀತಿಯಂತೆ ಭಾರತ ಸರ್ಕಾರ ಗೊತ್ತು ಮಾಡುವುದೆಂದು ತಿಳಿದುಕೊಂಡಿದ್ದೇನೆ. ಇದು ಸರಿಯಲ್ಲವೆ !

ಶ್ರೀ ಬಿ. ಹುಚ್ಚೇಗೌಡರು.—ನಾನೂ ತಿಳಿದುಕೊಂಡಿದ್ದೇನೆ, ನನಗೂ ಗೊತ್ತಿದೆ.

ನಮ್ಮ ದೇಶ ಕೇವಲ ವ್ಯವಸಾಯದಿಂದ ಜೀವಿಸತಕ್ಕ ಜನರಿರುವ ದೇಶ. ವ್ಯವಸಾಯ ಹೇಗೆ ಮುಂದುವರಿಯಬೇಕು, ಹೇಗೆ ಹೆಚ್ಚು ಫಲದಾಯಕವಾಗಬೇಕು ಎಂದು ನಾವು ಕೇಳುತ್ತಿದ್ದೇವೆ. ಈಗ ಅನುಸರಿಸುತ್ತಿರುವ ಮಾರ್ಗ ಎಷ್ಟುಮಟ್ಟಿಗೆ ರೈತರಿಗೆ ಸಹಕಾರಿಯಾಗಿದೆ ಎಂಬುದನ್ನು ಹೇಳಬಯಸುತ್ತೇನೆ. ಈಗ ಇದಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನೇನೋ ಒದಗಿಸುತ್ತಿದ್ದಾರೆ. ಕೆಲವು ವರ್ಷಗಳ ಹಿಂದೆ ಐದು ಲಕ್ಷ ಮಾತ್ರ ಒದಗಿಸುತ್ತಿದ್ದುದು, ಈಗ ಇದಕ್ಕಾಗಿ 50–60 ಲಕ್ಷ ಮೀಸಲಾಗಿಟ್ಟಿದ್ದಾರೆ. ಆದರೆ ಇದರ ಪ್ರಯೋಜನ ರೈತರಿಗೆ ಸರಿಸಮನಾಗಿ ಸಿಕ್ಕುತ್ತಿದೆಯೆ ! ಇಲ್ಲ. ರೈತರಿಗೆ ಬೇಕಾದ ಗುಳ, ಗಾಡಿ ಪಟ್ಟಿ ಸರಿಯಾಗಿ ಸಿಕ್ಕುತ್ತಿಲ್ಲ, ಕಾಳಸಂತೆಯಲ್ಲಿ ಯಾವಾಗಲೂ ಸಿಕ್ಕುತ್ತದೆ. ಸರಿಯಾದ ಬೆಲೆಗೆ ಸಿಕ್ಕಿದರೂ ಬೇಕಾದ ತರಹ ಸಿಕ್ಕುವುದಿಲ್ಲ. ಕೆಲವು ಭೂಮಿಗಳಿಗೆ ದಪ್ಪದುಬೇಕು ಕೆಲವಕ್ಕೆ ಸಣ್ಣದು ಬೇಕಾಗುತ್ತದೆ. ಬೇಕಾದ್ದು ಸಿಕ್ಕುವುದಿಲ್ಲ. ಗೊಬ್ಬರ ಬೀಜ ಸರಿಯಾಗಿ ಸಿಕ್ಕುವುದಿಲ್ಲ. ಉದಾಹರಣೆಗೆ ಬೋರನ ಕಣಿವೆ ಕೆರೆ ಜಮೀನಿನಲ್ಲಿ ಈಗ ಮೂರು ತಿಂಗಳಿಂದಲೂ ನಾಟಿ ಆಗುತ್ತಲೇ ಇದೆ. ನಿನ್ನೆ ಮೊನ್ನೆ ಬಂದು ಬೀಜ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಹೀಗೆ ಸಕಾಲದಲ್ಲಿ ರೈತರಿಗೆ ಕೊಡದಿದ್ದರೆ, ನೀರು ಬಿಟ್ಟು ಮೂರು ತಿಂಗಳಾದರೂ ರೈತರಿಗೆ ಬೀಜ ಸಿಕ್ಕದಿದ್ದರೆ ಅವರು ಹೇಗೆ ವ್ಯವಸಾಯ ಮಾಡುವುದು ? ಸಕಾಲದಲ್ಲಿ ಕೊಡಬೇಕು.

ಇನ್ನು ಟ್ರಾಕ್ಟರುಗಳ ವಿಚಾರ. ಇದು ನನ್ನ ಅನುಭವಕ್ಕೇ ಬಂದಿದೆ. ಟ್ರಾಕ್ಟರನ್ನು ತೆಗೆದುಕೊಂಡು ಹೋಗಿ ಒಂದು ತಿಂಗಳಾಯಿತು. ಎಣ್ಣೆ ಸಿಕ್ಕಲಿಲ್ಲವೆಂದು ನಿಲ್ಲಿಸಿಬಿಟ್ಟು, ಮೊನ್ನೆ ಬೆಂಗಳೂರಿಗೆ ಬಂದು ಎರಡು ಡ್ರಮ್ ಎಣ್ಣೆ ತೆಗೆದುಕೊಂಡು ಹೋದರೂ ಟ್ರಾಕ್ಟರು ನಡೆಸುವ ಡ್ರೈವರು ಅಲ್ಲಿಗೇ ಕೆಲಸ ನಿಲ್ಲಿಸಿಬಿಟ್ಟಿದ್ದಾನೆ. ಟ್ರಾಕ್ಟರು ಸಮಿತಿಗೆ ನಾನು ಸದಸ್ಯನಾದರೂ ಏನು ಮಾಡುವುದು? 84ರೂಪಾಯಿ ಕೊಟ್ಟು ಒಂದುಕಡೆ ಟ್ರಾಕ್ಟರು ತೆಗೆದುಕೊಂಡುಹೋಗಿ ಅಲ್ಲಿ ಅವನು ಒಂದು ತಿಂಗಳಿದ್ದರೂ ಉಳಲೇ ಇಲ್ಲ. ಒಂದು ದಿನ ಅವನು ನಮ್ಮ ಆಳನ್ನು ಹಣ ಕೇಳಿದಾಗ ಅವನು ಹಣ ಕೊಡಲಿಲ್ಲ. ಅದುದರಿಂದ ಬರುವುದಿಲ್ಲವೆಂದು ಹೇಳಿಬಿಟ್ಟ. ಆ ಮೇಲೆ ಅಸಿಸ್ಟೆಂಟ್ ಡೈರೆಕ್ಟರವರನ್ನು ಕರೆದುಕೊಂಡು ಹೋದೆ. ಒಂದನೆ ತಾಕು ಉತ್ತು ಎರಡನೆ ತಾಕಿಗೆ ನಿಲ್ಲಿಸಿದ. ಹಣ ಕೊಡದಿದ್ದರೆ ನಿಲ್ಲಿಸುತ್ತಾನೆ. ಈ ವಿಚಾರವನ್ನು ಡೈರೆಕ್ಟರಿಗೂ ಡೆಪ್ಯುಟಿ ಕಮಿಷನರಿಗೂ ಹೇಳಿದ್ದೇನೆ, ಆದರೂ ಏನೂ ಆಗಿಲ್ಲ, ನನ್ನಂಥವರಿಗೇ ಹಾಗಾದರೆ ಸಣ್ಣಪುಟ್ಟ ರೈತರ ಗತಿ ಏನು !

ಶ್ರೀ ಟಿ. ಮರಿಯಪ್ಪನವರು.—ಈ ವಿಷಯವನ್ನು ತಪಶೀಲಾಗಿ ಡೆಪ್ಯುಟೀ ಕಮಿಷನರವರಿಗೆ ಬರೆದಿದ್ದೀರಾ ?

ಶ್ರೀ ಬಿ. ಹುಚ್ಚೇಗೌಡರು.—Certainly. ನಾನೇ ಹೋಗಿ ಅವರಿಗೂ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರಿಗೂ ಹೇಳಿದ್ದೇನೆ.

ಶ್ರೀ ಟಿ. ಮರಿಯಪ್ಪನವರು.—ಆತನು ದುಡ್ಡು ಕೇಳಿದನೆಂದು ಬರೆದಿದ್ದೀರಾ ?

ಶ್ರೀ ಬಿ. ಹುಚ್ಚೇಗೌಡರು.—Yes. ಅಸಿಸ್ಟೆಂಟ್ ಡೈರೆಕ್ಟರಿಗೂ ಬರೆದಿದ್ದೇನೆ. ಅವರು ಒಂದು ದಿನ ಬರುತ್ತೇನೆಂದು ಹೇಳಿದರು. ಆದರೆ ಬರಲಿಲ್ಲ. ಆ ಮೇಲೆ ಅವರಿಂದ ಕಾಗದ ಬಂತು. ತಮಗೆ ವರ್ಗವಾಗಿರುವುದರಿಂದ ಮುಂದೆ ಬರುವವರನ್ನು ಕೇಳಿ ಎಂದು ಬರೆದರು. ಒಂದು ತಿಂಗಳು ಅಲ್ಲಿದ್ದು ನಮ್ಮ ಕೆಲಸವನ್ನೂ ಮಾಡಲಿಲ್ಲ, ಬೇರೆಯವರ ಕೆಲಸವನ್ನೂ ಮಾಡಲಿಲ್ಲ.

ಶ್ರೀ ಟಿ. ಮರಿಯಪ್ಪನವರು.—ತಾವೂ ಡೆಪ್ಯುಟಿ ಕಮಿಷನರೂ, ರೂರಲ್ ಡೆವಲಪ್‌ಮೆಂಟ್ ಕಮಿಷನರೂ ಟ್ರಾಕ್ಟರು ಕಮಿಟಿ ಸದಸ್ಯರಲ್ಲವೆ ?

ಶ್ರೀ ಬಿ. ಹುಚ್ಚೇಗೌಡರು.—ನಾನು ಈಗ ಹೇಳುತ್ತಿರುವುದು ಇನ್ನೊಂದು ಡಿಸ್ಟ್ರಿಕ್ಟಿನ ವಿಚಾರ. ನಮ್ಮ ಡಿಸ್ಟ್ರಿಕ್ಟಿನದಲ್ಲ, ಹಾಸನ ಡಿಸ್ಟ್ರಿಕ್ಟ್ ವಿಚಾರ. ಇರುವ ವಿಚಾರ ಹೇಳಿದ್ದೇನೆ.

ಇನ್ನೊಂದು ವಿಚಾರ. ಸರ್ಕಾರದ ಅಧೀನದಲ್ಲಿ ಬೇಕಾದಷ್ಟು ಜಮೀನಿದೆ. ಉದಾಹರಣೆಗೆ ಕುಣಿಗಲ್ ಸ್ಟಡ್ ಫಾರಂನಲ್ಲಿ ನೂರಾರು ಎಕರೆ ಜಮೀನು ಬಂಜರು ಬಿದ್ದಿದೆ. ಶಿಡ್ಲಘಟ್ಟ ಫಿಲೇಚರ್‌ನವರು ಸರಿಯಾಗಿ ಕೆಲಸ ನಡೆಸುತ್ತಿಲ್ಲ. ಅದು ಹಾಗೆಯೇ ಇದೆ. ಇವುಗಳನ್ನೆಲ್ಲಾ ಸರಿಯಾಗಿ ವ್ಯವಸಾಯಕ್ಕೆ ಉಪಯೋಗಿಸಬಹುದು.

ಪಶುವೈದ್ಯ ಇಲಾಖೆಯ ವಿಚಾರದಲ್ಲಿ ಹಿಂದೆ ಸರ್ಕಾರದವರು ವರ್ಷಕ್ಕೆ 21 ಆಸ್ಪತ್ರೆಗಳ ಪ್ರಕಾರ ಐದು ವರ್ಷಗಳಲ್ಲಿ 105 ಆಸ್ಪತ್ರೆಗಳನ್ನಾದರೂ ತೆರೆಯಬೇಕೆಂದು ಮಾಡಿದರು. ಇದು ನಾಲ್ಕೈದು ವರ್ಷ ನಡೆಯಿತು. ನಮ್ಮ ಜಿಲ್ಲೆಗೆ ಎರಡು ಮೂರು ಆಸ್ಪತ್ರೆ ಆಯಿತು, ಈಗ ಈ ಕೆಲಸ ನಿಂತು ಹೋಗಿದೆ.

ಶ್ರೀ ಟಿ. ಮರಿಯಪ್ಪನವರು.—ನಿಂತುಹೋಗಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಹಿಂದಿನ ಸರ್ಕಾರ ಪ್ರಾರಂಭಿಸಿದ್ದ ಕಾರ್ಯಕ್ರಮವನ್ನಾದರೂ ಸಫಲಗೊಳಿಸಿದ್ದರೆ ಇಂದಿನ ಸರ್ಕಾರ ಪ್ರಗತಿ ಮಾರ್ಗದಲ್ಲಿದೆಯೆಂದು ಹೇಳಬಹುದಾಗಿತ್ತು. ಹೊಸ ಯೋಜನೆಮಾಡುವುದು ಹಾಗಿರಲಿ. ಈ ಆಸ್ಪತ್ರೆಗಳನ್ನು ಎಷ್ಟು ಹೆಚ್ಚು ಮಾಡಿದರೂ ಸಂತೋಷ, ಮೂಕಪ್ರಾಣಿಗಳಿಗೆ ಎಷ್ಟೋ ಅನುಕೂಲವಾಗುತ್ತದೆ. ಇಂತಿಂತಹ ಕಡೆ ಆಸ್ಪತ್ರೆಗಳನ್ನು ಕೊಡಬೇಕೆಂದು ಕೇಳಿ ಬಡ್ಜೆಟ್ ಕೂಡ ಮಾಡಿ ಕಳುಹಿಸಿದರು. ಆದರೆ ಒಂದು ಕಡೆ ಮಾತ್ರ ಕೊಡುತ್ತೇವೆಂದು ಸರ್ಕಾರದವರು ಹೇಳಿಬಿಟ್ಟರು.

ಇನ್ನು Livestock ವಿಚಾರ. ಇದು ಬಹುದೊಡ್ಡ ವಿಚಾರ. ಅಮೃತಮಹಲ್ ಬ್ರೀಡ್ ಎಂಬುದು ಜಗತ್ಪ್ರಸಿದ್ಧವಾದುದು. ಹಿಂದೆ ಇದು ಮಿಲಿಟರಿ ಇಲಾಖೆಯಿಂದ ನಡೆಯುತ್ತಿತ್ತು. ಇದನ್ನು 1924ರಲ್ಲಿ ವ್ಯವಸಾಯ ಇಲಾಖೆಗೆ ಸೇರಿಸಿದರು. ಅಲ್ಲಿ ಕಾಡು ದನಗಳನ್ನು ಸಾಕಿ ಒಂದು ಡೈರಿ ಫಾರಂಮಾಡಬೇಕೆಂದು ಒಂದು ಯೋಜನೆ ಮಾಡಿದರು. ಅಜ್ಜಂಪುರದಲ್ಲೂ ಮಾಡಿದರು. ಹಿಂದೆ ಯಾರ್ಯಾರು ದನಗಳನ್ನು ಸಾಕುತ್ತಿದ್ದರೊ ಅವರಿಗೇ ಮಾರಬೇಕೆಂದು ಮಾಡಿ, ಮಾರಿದರು. ನೂರಾರು ದನಗಳನ್ನೂ ಮಾರಿಬಿಟ್ಟರು. ಕಾವಲಿನ ಆಸೆಗೆ ಜನ ಕೊಂಡುಕೊಂಡರು.

ಶ್ರೀ ಟಿ. ಮರಿಯಪ್ಪನವರು.—ಎಷ್ಟು ವರ್ಷಗಳಲ್ಲಿ?

ಶ್ರೀ ಬಿ. ಹುಚ್ಚೇಗೌಡರು.–1932 ಅಕ್ಟೋಬರಿನಲ್ಲಿ ಮೊದಲು ಸಾರಿ ಕೊಟ್ಟರು. 9 ಜನರಿಗೆ ಈ ರೀತಿ ಕೊಟ್ಟಿದ್ದಾರೆ.

1936ರಲ್ಲಿ ಎಕನಾಮಿಕ್ ರಿಫಾರಂ ಮಾಡಬೇಕೆಂದು ಪ್ರಾರಂಭಿಸಿದರು. ಈಗ ಹಿಂದಿನ ಪದ್ಧತಿಯೇ ನಡೆಯುತ್ತಿರುವ ಒಂದು ಮಂದೆ ಇದೆ. 1928ರಿಂದ ಇದುವರೆಗೆ 22 ವರ್ಷವಾದರೂ ಯಾವ ಪದ್ಧತಿ ಸರಿ ಎಂಬ ನಿರ್ಧಾರಕ್ಕೂ ಬಂದಿಲ್ಲ, ಒಬ್ಬೊಬ್ಬ ಅಧಿಕಾರಿ ಬಂದಾಗ ಒಂದೊಂದು ರೀತಿ ಬದಲಾಯಿಸುತ್ತಾ ಹೋದರೆ ಆ ಮೂಕ ಪ್ರಾಣಿಗಳಿಗೆ ತುಂಬಾ ತೊಂದರೆಯಲ್ಲವೆ, ಈಚೆಗೆ ಐದು ವರ್ಷದ ಯೋಜನೆ ಮುಂದುವರಿಸಿದರು, ಅದು ಏನಾಯಿತೆಂಬುದನ್ನು ತಿಳಿಸಿಲ್ಲ. ಸುಮ್ಮನೆ ಲಕ್ಷಾಂತರ ರೂಪಾಯಿ ವ್ಯರ್ಥವಾಗುತ್ತಿದೆ. ಒಂದು ಪ್ರಯೋಗ ಪರೀಕ್ಷಾಲಯವನ್ನಿಟ್ಟರೆ ಅದರಿಂದ ನಡೆಸುವ ಸಿಬ್ಬಂದಿಯ ಸಂಬಳ ಹೊರತು ಉಳಿದ ಖರ್ಚಾದರೂ ಸಿಕ್ಕಬೇಕು. ಇದನ್ನು ಬಿಟ್ಟು ಒಂದಕ್ಕೆ ಹತ್ತರಷ್ಟು ಖರ್ಚುಮಾಡುವುದರಿಂದ ಪ್ರಯೋಜನವೇನು? ಅಲ್ಲಿ ಹುಟ್ಟತಕ್ಕ ರಾಸುಗಳಿಂದ ಗೊಬ್ಬರದ ಖರೀದಿಯೂ ಹುಟ್ಟದೇ ಹೋದರೆ ಏನು ಪ್ರಯೋಜನ? ಇದನ್ನು ಎಷ್ಟೋ ಸಾರಿ ನಾನು ಸರ್ಕಾರದವರ ಗಮನಕ್ಕೆ ತಂದಿದ್ದೇನೆ. 22 ವರ್ಷವಾದರೂ ಯಾವ ತೀರ್ಮಾನಕ್ಕೂ ಬಂದಿಲ್ಲ. ಹೀಗೆ ಸರ್ಕಾರದ ಯಾವ ನೀತಿಯೂ ಒಂದು ಸ್ಥಿತಿಗೆ ಒಳಪಟ್ಟಿಲ್ಲ. ಲಕ್ಷಾಂತರ ರೂಪಾಯಿ ಖರ್ಚುಮಾಡಿ ಪ್ರಾರಂಭಮಾಡುವುದು, ಅದನ್ನು ಅಲ್ಲಿಗೇ ನಿಲ್ಲಿಸುವುದು–ಹೀಗಾಗಿದೆ. ನಾನು ಸುಮ್ಮನೆ ಆಕ್ಷೇಪಣೆಮಾಡಲು ಬಂತಿದ್ದೇನೆಂದು ತಿಳಿದುಕೊಳ್ಳಬಾರದು. ನಾನು ನೋಡಿದ ವಿಚಾರಗಳನ್ನು ಮಾತ್ರ ಹೇಳುತ್ತಿದ್ದೇನೆ, ಸುಮ್ಮನೆ ಅವರ ಮೇಲೂ ದೋಷಾರೋಪಣೆ ಮಾಡುತ್ತಿಲ್ಲ. ಈ ವಿಚಾರದಲ್ಲಿ ಈಗಿನ ಸರ್ಕಾರದವರದೇ ತಪ್ಪು ಎಂದು ನಾನು ಹೇಳಲಿಲ್ಲ ವಾಸ್ತವಾಂಶಗಳೇನಿವೆಯೋ ಅದನ್ನು ಹೇಳುತ್ತಿದ್ದೇನೆಯೇ ಹೊರತು ಇಲ್ಲದೇಯಿರುವುದನ್ನೇನೂ ಹೇಳಿಲ್ಲ.

ಚುನಾವಣೆ ವಿಚಾರ ಹೇಳಬೇಕಾಗಿದೆ. ಈ ಸಭೆಯಲ್ಲಿ ಕೆಲವು ಸ್ಥಾನಗಳು ಖಾಲಿ ಬಿದ್ದಿವೆ. ಸರ್ಕಾರದವರು ಇದನ್ನು ಗಮನಕ್ಕೆ ತೆಗೆದುಕೊಂಡು ಈ ಸ್ಥಾನಗಳಿಗೆ ಚುನಾವಣೆ ನಡೆಸುವುದಕ್ಕೆ ಯಾವ ಕಾರ್ಯಕ್ರಮಗಳನ್ನೂ ಇದುವರೆಗೆ ತೆಗೆದುಕೊಂಡಿಲ್ಲ. ಜನಗಳ ಪ್ರಾತಿನಿಧ್ಯ ಈ ಸಭೆಯಲ್ಲಿ ಇರಬೇಕು. ಯಾವಾಗಲೂ ಸಾಮಾನ್ಯ ಜನಗಳಿಗಿರತಕ್ಕ ಒಂದು ಅಧಿಕಾರವನ್ನು ಮೊಟಕುಮಾಡಬಾರದು. ಆದ್ದರಿಂದ ಆದಷ್ಟು ಜಾಗ್ರತೆ ಚುನಾವಣೆ ನಡೆಸಿ ಕೊನೆಯಪಕ್ಷ ಮುಂದಿನ ಮೇ ತಿಂಗಳೊಳಗಾದರೂ ಈ ಸಭೆಯಲ್ಲಿ ಪ್ರಾತಿನಿಧ್ಯಹೊಂದದೇ ಇರತಕ್ಕವರಿಗೆ ಪ್ರಾತಿನಿಧ್ಯವನ್ನು ದೊರಕಿಸಿಕೊಡಬೇಕೆಂದು ಆಗ್ರಹಪೂರ್ವಕವಾಗಿ ಅರಿಕೆಮಾಡಿಕೊಳ್ಳುತ್ತೇನೆ.

ಎಕ್ಸೈಜು ಬಾಬಿನ ವಿಚಾರದಲ್ಲಿ ಅನೇಕ ಮಾನ್ಯ ಸದಸ್ಯರು ಈಗಾಗಲೇ ಹೇಳಿದ್ದಾರೆ. ಪಾನನಿರೋಧದ ಕಾರ್ಯಕ್ರಮ ಎಷ್ಟರಮಟ್ಟಿಗೆ ಆಗಿದೆ ಎಂಬುದನ್ನು ವಿವರಿಸುತ್ತೇನೆ. ನಮ್ಮ ಬಡ್ಜೆಟ್‌ನಲ್ಲಿ ಕುಡಿತದ 188 ಲಕ್ಷ ರೂಪಾಯಿ ಸೇರಿದ ಮೇಲೂ 3 ಲಕ್ಷ ಹೆಚ್ಚುವರಿ ಇದೆ. ಅದು ಹೇಗೆ ಬಂತು? ಬಡವರ ರಕ್ತ ಹೀರಿ ಸಂಪಾದನೆಮಾಡಿರತಕ್ಕ ಹಣ ಅದು, ಅದು ಖಜಾನೆಗೆ ಸೇರಬಾರದು ಎಂದು ನಾವು ಹಿಂದಿನಿಂದಲೂ ಹೇಳುತ್ತ ಇದ್ದೇವೆ. ಜನಗಳ ಜೀವನದಮಟ್ಟ ಹೆಚ್ಚಬೇಕು. ಆತನಿಗೆ ಅತ್ಯವಶ್ಯಕವಾಗಿ ಬೇಕಾಗಿರತಕ್ಕದ್ದು ಬಟ್ಟೆ ಮತ್ತು ಅನ್ನ. ಅವನಿಗೆ ಬಿಸಿಲು. ಮಳೆಯಿಂದ ತಪ್ಪಿಸಿಕೊಳ್ಳಲು ಗುಡಿಸಲು ಹಾಕಿಕೊಳ್ಳುವುದಕ್ಕೆ ಸಹಾಯ ಅಗತ್ಯವಾಗಿ ಬೇಕು. ಕುಡಿತದಿಂದ ಅನೇಕ ಸಂಸಾರಗಳು ಹಾಳಾಗಿವೆ ಎಂಬುದನ್ನು ಎಷ್ಟೋ ಸಾರಿ ಹೇಳಿದ್ದೇವೆ. ಈಗ ತಾವು 5 ಡಿಸ್ಟ್ರಿಕ್ಟ್‌ಗಳಲ್ಲಿ ಪಾನನಿರೋಧವನ್ನು ಜಾರಿಗೆ ತಂದು ಇನ್ನು ನಾಲ್ಕು ಡಿಸ್ಟ್ರಿಕ್ಟ್‌ಗಳಲ್ಲಿ ಹಾಗೆ ಉಳಿಸಿರುವುದರ ಅರ್ಥವೇನು ಸ್ವಾಮಿ? ನಮ್ಮ ಪ್ರಾಂತ್ಯದ ಸುತ್ತಮುತ್ತಲೂ ಪೂರ್ಣವಾಗಿ ಪಾನನಿರೋಧ ಜಾರಿಗೆ ಬಂದಿದೆ. ಇಂಡಿಯಾ ಸರ್ಕಾರದವರು ಸಾವಕಾಶವಾಗಿ ಈ ವಿಚಾರದಲ್ಲಿ ಮುಂದುವರಿಯಿರಿ ಎಂದು ಸೂಚನೆ ಕೊಟ್ಟಿದ್ದಾರೆಂದು ಹೇಳಿದರು. ಇದು ನಮಗೆ ಮಾತ್ರ ಅಲ್ಲ. ಎಲ್ಲಾ ಸರ್ಕಾರಗಳವರಿಗೂ ಕೂಡ ಸ್ವಲ್ಪ ಮಟ್ಟಿಗೆ ನಿಧಾನವಾಗಿಹೋಗಿ ಎಂದು ಹೇಳಿದ್ದಾರೆಂದು ಕೇಳಿದ್ದೇನೆ. ಆದರೂ ಈ ರೀತಿ ಒಂದು ನೀತಿಯನ್ನು ಅನುಸರಿಸಿದ ಮೇಲೆ ಇದನ್ನು ಕೊನೆಮುಟ್ಟಿಸುವುದಕ್ಕೆ ಪ್ರಯತ್ನಮಾಡಬೇಕು. ಇಲ್ಲದೆ ಇದ್ದರೆ ಅವರಿಗೆ ಈ ಪಾನನಿರೋಧದಲ್ಲಿ ನಂಬಿಕೆಯಿಲ್ಲವೆಂದು ಹೇಳುತ್ತೇನೆ. ಜನಗಳು ಅನೇಕ ವಿಧವಾಗಿ ಕಳ್ಳಭಟ್ಟಿ ಇಳಿಸುವುದನ್ನು ಕಲಿತಿದ್ದಾರೆ. ಈಗ ಅದನ್ನು ನಿಲ್ಲಿಸುವುದು ಬಹಳಕಷ್ಟ, 1946–47ರಲ್ಲಿ 1ಕೋಟಿ 77ಲಕ್ಷ ರೂಪಾಯಿ ಇದರಿಂದ ಬರುತ್ತಾ ಇತ್ತು, ಈಗಲೂ ಅಷ್ಟೇ ಇದೆ. ಮಾನ್ಯ ಸದಸ್ಯರಾದ ಶ್ರೀ ಕೃಷ್ಣಪ್ಪನವರು ಹಿಂದಿನ ಸರ್ಕಾರದವರು ಕಂಟ್ರಾಕ್ಟರುಗಳಿಗೆ ಕಾಂಟ್ರಾಕ್ಟ್ ಕೊಟ್ಟು ಲಾಭ ಮಾಡಿದ್ದಾಗ ಈ ನೀತಿ ಹಾಕಿದ್ದರೆಂದು ಹೇಳಿದರು. ಆದರೆ ಈ ಸರ್ಕಾರ ಬೆಂಗಳೂರು, ಹಾಸನ, ಮೈಸೂರುಗಳಲ್ಲಿ ಒಬ್ಬೊಬ್ಬ ಕಂಟ್ರಾಕ್ಟರನ್ನು ಇಟ್ಟು ಕುಬೇರರನ್ನಾಗಿ ಮಾಡಬೇಕೆಂದಿದ್ದಾರೆ! ಆದ್ದರಿಂದ ಇದನ್ನು ವ್ಯಕ್ತಿಗಳಿಗಾಗಿ ಇಟ್ಟುಕೊಂಡಿರಲಾಗಿದೆ ಎಂದು ಹೇಳಬೇಕಾಗಿದೆ.

Sri K. CHENGALARAYA REDDY.—Question!

ಶ್ರೀ ಬಿ. ಹುಚ್ಚೇಗೌಡರು.—ಹಿಂದಿನ ಸರ್ಕಾರದವರು ಕಂಟ್ರಾಕ್ಟರುಗಳನ್ನು ಬದುಕಿಸಲು ಪಾನನಿರೋಧ ಮಾಡದೆ ಕೆಲವು ಕಡೆಗಳಲ್ಲಿ ಇನ್ನೂ ಇಟ್ಟುಕೊಂಡಿದ್ದಾ

ರೆಂದು ಹೇಳುತ್ತಿದ್ದರು. ಈಗ ಕೇವಲ ಎರಡು ನೂರು ಜನರನ್ನು ಬದುಕಿಸಲು ಇಟ್ಟುಕೊಂಡಿದ್ದಾರೆಂದು ನಾನು ಹೇಳುತ್ತೇನೆ. ಅನೀತಿಮಾರ್ಗದಿಂದ ದುಡ್ಡು ಸಂಪಾದನೆಮಾಡುವುದನ್ನು ತಪ್ಪಿಸಿದ ಹೊರತು ದೇವರು ಎಂದಿಗೂ ಕೂಡ ಸರಿಯಾದ ಮಾರ್ಗತೋರಿಸಿ ಕೊಡುವುದಿಲ್ಲವೆಂದು ಹೇಳುತ್ತೇನೆ.

ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ಎಕ್ಸೈಜು ಬಾಬಿನಿಂದ ಬರುತ್ತಾ ಇದ್ದಂಥ ತೆರಿಗೆ ತಪ್ಪಿಹೋಯಿತು. ಅದಕ್ಕೆ ಪ್ರತಿಯಾಗಿ ಸರ್ಕಾರದವರು ಯಾವ ಆದಾಯವನ್ನೂ ಅವರಿಗೆ ತೋರಿಸಿಕೊಟ್ಟಿಲ್ಲ. ಕಾನೂನು ಪ್ರಕಾರ ಡಿಸ್ಟ್ರಿಕ್ಟ್ ಬೋರ್ಡ್‌ನವರು ಇಂತಿಂಥಾದಕ್ಕೆ ಹಣ ಖರ್ಚುಮಾಡಬೇಕೆಂಬ ನಿಯಮವಿದೆ. ಅದು ಯಾವುದನ್ನೂ ಕಡಿಮೆಮಾಡಿಲ್ಲ. ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ವರಮಾನಕಡಿಮೆಯಾಗಿರುವುದನ್ನು ಹೆಚ್ಚಿಸಿಕೊಳ್ಳಲಿಕ್ಕೆ ಅವಕಾಶಮಾಡಿ ಕೊಡದೇ ಇರುವುದು ಶೋಚನೀಯ. ಸರ್ಕಾರದವರೇನೋ ಎಕ್ಸೈಜು ಬಾಬಿನಲ್ಲಿ ಖೋತಾ ಬೀಳತಕ್ಕ ಉತ್ಪನ್ನವನ್ನು ಭರ್ತಿಮಾಡಿಕೊಳ್ಳಲು ವ್ಯಾಪಾರದ ತೆರಿಗೆಯನ್ನು ಹಾಕಿದರು. ಆದರೆ ಈ ವಿಷಯಕ್ಕೆ ಏಕೆ ಗಮನಕೊಡಲಿಲ್ಲವೋ ನನಗೆ ತಿಳಿಯದು!

ಇದನ್ನು ತಾವು ಎಷ್ಟು ಜಾಗ್ರತೆ ಸಾಧ್ಯವಾದರೆ ಅಷ್ಟು ಜಾಗ್ರತೆ ಸರಿಪಡಿಸಬೇಕಾಗಿದೆ. ಪಾನನಿರೋಧವನ್ನು ಜಾರಿಗೆ ತರುತ್ತೇವೆಂದು ಇತ್ತಲಾಗಿ ಸುಂಕ ಹಾಕಿದಿರಿ. ಅದರಿಂದಲೂ ಉತ್ಪತ್ತಿ ಬರುತ್ತಿದೆ. ಇತ್ತ ಕಡೆ ಆ ಕುಡಿತವನ್ನು ತಪ್ಪಿಸದೆ ಅದರಿಂದಲೂ ಆದಾಯ ಪಡೆಯುತ್ತಿದ್ದೀರಿ. 3 ವರ್ಷಗಳೊಳಗಾಗಿ ಇದೆಲ್ಲವನ್ನೂ ಸರಿಪಡಿಸುತ್ತೇವೆಂದು ಹೇಳಿದ್ದೀರಿ. ಆ ರೀತಿ ತಾವು ಇಲ್ಲಿಯವರೆಗೂ ನಡೆಸಿಲ್ಲ. ಇದನ್ನು ಆದಷ್ಟು ಜಾಗ್ರತೆ ಸರಿಪಡಿಸಬೇಕೆಂದು ಒತ್ತಾಯಪಡಿಸುತ್ತೇನೆ. ತಾವು ಒಂದು ನೀತಿಯನ್ನು ಪಾಲಿಸುವುದಾಗಿ ಹೇಳಿದ ಮೇಲೆ ಅದರಂತೆ ತಾವು ನಡೆಯಬೇಕಾದ್ದು ತಮ್ಮ ಕರ್ತವ್ಯ.

ಈ ರೋಡ್ ಫಂಡಿನ ವಿಚಾರದಲ್ಲಿ ಎರಡು ಮಾತನ್ನು ಆಡಬೇಕಾಗಿದೆ. ಆಯಾಯ ಜಿಲ್ಲೆಯಲ್ಲಿ ವಸೂಲಾದ ರೋಡ್ ಫಂಡ್ ಮೊಬಲಗನ್ನು ತಾವು ಆಯಾಯ ಜಿಲ್ಲೆಗೆ ಸರಿಯಾಗಿ ಒದಗಿಸುತ್ತಿಲ್ಲ. ದೇಶದ ನಾನಾ ಭಾಗಗಳಲ್ಲಿ ಯಾವ ಯಾವ ಕಡೆ ಎಷ್ಟೆಷ್ಟರ ಮಟ್ಟಿಗೆ ಆವಶ್ಯಕತೆಯಿದೆ, ಎಂಬುದರ ಜೊತೆಗೆ ಯಾವ ಯಾವ ಜಿಲ್ಲೆಯ ಉತ್ಪತ್ತಿ ಎಷ್ಟೆಷ್ಟಿದೆಯೆಂಬುದನ್ನು ಲೆಖ್ಖಹಾಕಿ ಆ ದಾಮಾಷ ಪ್ರಕಾರ ಕೊಡುವಂತೆ ತಾವು ಏರ್ಪಾಡು ಮಾಡಬೇಕಾಗಿದೆ.

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಜಿಲ್ಲಾ ಬೋರ್ಡುಗಳಿಗೆ ಯಾವ ಧನ ಸಹಾಯವನ್ನೂ (ಗ್ರಾಂಟನ್ನು) ಕೊಡುತ್ತಿರಲಿಲ್ಲವೆಂಬುದನ್ನು ತಾವು ಗಮನಿಸಬೇಕು. ಆ ಬಗ್ಯೆ ನಾವು 3–4 ಲಕ್ಷ ರೂಪಾಯಿಗಳ ಗ್ರಾಂಟನ್ನು ಈಗ ಕೊಟ್ಟಿದ್ದೇವೆ.

ಶ್ರೀ ಬಿ. ಹುಚ್ಚೇಗೌಡರು.—ಹೌದು ಈಗಿನ ಸ್ಥಳೀಯ ಸಂಸ್ಥೆಗಳ ಆಡಳಿತದ ಸಚಿವರು ಗ್ರಾಂಟನ್ನು ಒದಗಿಸಿದ್ದಾರೆ. ಆದಕ್ಕಾಗಿ ನಾನು ಅವರಿಗೆ ತುಂಬಾ ಕೃತಜ್ಞನಾಗಿದ್ದೇನೆ. ಆದರೆ ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಉತ್ಪತ್ತಿ ಆಗುತ್ತಿದೆ, ಅಲ್ಲಿ ಸಂಚರಿಸುವ ವಾಹನಗಳೆಷ್ಟು ಎಂಬುದನ್ನೆಲ್ಲಾ ಪರಿಗಣಿಸದೆ ಒಟ್ಟು 3 ಲಕ್ಷ ಕೊಟ್ಟರೆ ಹೀಗೆ ಸರಿಹೋಗುತ್ತದೆ! ಆದಕಾರಣ ತಾವೀಗ ಕೊಟ್ಟಿರುವುದಕ್ಕೆ ನಾನು ತುಂಬಾ ಕೃತಜ್ಞನಾಗಿದ್ದೇನೆ. ಆದರೆ ತಾವು ಕಂದಾಯವನ್ನು ಯಾವ ಒಂದು ನಿರ್ದಿಷ್ಟ ಕೆಲಸಕ್ಕಾಗಿ ವಸೂಲು ಮಾಡುತ್ತೀರೋ ಅದನ್ನು ಆ ಒಂದು ಕೆಲಸಕ್ಕೇ ಉಪಯೋಗಿಸಲು, ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಇದಕ್ಕೆ ಹೆಚ್ಚಿನ ಸಹಾಯ ಮಾಡಬೇಕೆಂದು ತಿಳಿಸುತ್ತೇನೆ.

ಇನ್ನು ಕಡೆಯದಾಗಿ ಸರ್ಕಾರದವರು ತಾವೇನು ಒಂದು ನೀತಿಯನ್ನು ಅನುಸರಿಸುವುದಾಗಿ ವಚನ ಕೊಟ್ಟಿದ್ದಾರೋ ಅದರಂತೆಯೇ ಎಲ್ಲಾ ಕೆಲಸ ಕಾರ್ಯಗಳನ್ನೂ ನೆರವೇರಿಸಬೇಕು. ಹಾಗೆ ಅದು ಅವರಿಗೆ ಸಾಧ್ಯವಾಗಲಿಲ್ಲವೆಂದು ಕಂಡು ಬಂದರೆ, ಅವರಿಗೆ ಅದನ್ನು ಪಾಲಿಸಲು ಕೈಲಾಗದಿದ್ದರೆ ಮತ್ತು ತಾವು ಆಡಿದ್ದನ್ನು ಮಾಡಿ ಕೃತಕೃತ್ಯರಾಗಲು ಸಾಧ್ಯವಿಲ್ಲವೆಂಬುದಾಗಿ ಕಂಡು ಬಂದರೆ, ಕೂಡಲೇ ತಾವು ತಮ್ಮ ಮಂತ್ರಿ ಪದವಿಗಳಿಗೆ ರಾಜಿನಾಮೆ ಕೊಟ್ಟು, ಅದನ್ನು ಬಿಟ್ಟುಕೊಡುವುದು ಉತ್ತಮವಾದುದೆಂದೂ, ಹಾಗೆ ಅವರು ಅವರ ಆತ್ಮಸಾಕ್ಷಿಗೇ ವಿರೋಧವಾಗಿ ನಡೆಯುವುದು ತೀರಾ ಅನುಚಿತವಾದುದೆಂದೂ ನಾನು ಕಡ್ಡಾಯವಾಗಿ ಹೇಳಲೇಬೇಕಾಗಿದೆ.

ಶ್ರೀ ಎಂ. ಸಿ. ಶಿವಾನಂದ ಶರ್ಮರವರು (ಬೆಂಗಳೂರು ಜಿಲ್ಲಾ).—ಸ್ವಾಮಿ, ಆರ್ಥಿಕ ಸಚಿವರವರು ಮಂಡಿಸಿರುವ ಆಯವ್ಯಯ ಪಟ್ಟಿಯನ್ನು ಸ್ವಾಗತಿಸುತ್ತ ನಾನು ನಾಲ್ಕಾರು ಮಾತುಗಳನ್ನಾಡಲು ನಿಂತಿದ್ದೇನೆ.

ಇದರಲ್ಲಿ ಮುಖ್ಯವಾಗಿ ವಿದ್ಯಾಭ್ಯಾಸದ ವಿಷಯದಲ್ಲಿ ಕೆಲವು ಮಾತುಗಳನ್ನು ಹೆಚ್ಚಾಗಿ ಆಡುವುದಕ್ಕೆ ಅವಕಾಶ ತೆಗೆದುಕೊಳ್ಳತಕ್ಕದ್ದು ಅಗತ್ಯವೆಂದು ನಾನು ಭಾವಿಸುತ್ತೇನೆ. ಅನೇಕ ವರ್ಷಗಳಿಂದಲೂ ಹೊಡೆದಾಡಿ, ಅನಂತ ಬಲಿದಾನಗಳನ್ನು ಮಾಡಿದ್ದರ ಫಲವಾಗಿ, ಗುಲಾಮಗಿರಿಯಲ್ಲಿದ್ದ ಭಾರತವು ಈಗ ಸ್ವತಂತ್ರ ಭಾರತವಾಯಿತು. ಇಂಥಾ ಸ್ವತಂತ್ರ ಭಾರತದಲ್ಲಿ ಮುಂದಿನ ಪ್ರಜೆಗಳಾಗತಕ್ಕಂಥ ಇಂದಿನ ಸಣ್ಣ ಬಾಲಕರುಗಳಿಗೆ, ಮಕ್ಕಳುಗಳಿಗೆ ಸರಿಯಾದ ಮತ್ತು ಸುವ್ಯವಸ್ಥಿತವಾದ ಒಂದು ವಿದ್ಯಾಭ್ಯಾಸದ ಮಾರ್ಗವನ್ನು ಒದಗಿಸುವಂತೆ ಮಾಡತಕ್ಕದ್ದು ನಿಜವಾದ ಎಲ್ಲಾ ಭಾರತೀಯನ ಪ್ರಥಮ ಕರ್ತವ್ಯವೆಂದು ನಾನು ಭಾವಿಸಿದ್ದೇನೆ. ಮೈಸೂರು ಸಂಸ್ಥಾನದಲ್ಲಿ ಈ ವಿದ್ಯಾಭಿವೃದ್ಧಿಗಾಗಿ ಹೆಚ್ಚು ಹಣವನ್ನು ಖರ್ಚು ಮಾಡಲು ಈಗಿರತಕ್ಕ ಆರ್ಥಿಕ ಸ್ಥಿತಿಯಲ್ಲಿ ಸರ್ಕಾರ ಹೆಣಗಾಡುತ್ತಿದೆ. ಈ ಸ್ವಾತಂತ್ರ್ಯ ಭಾರತದಲ್ಲಿ ಅದರಲ್ಲೂ ಕಳೆದ ಯುದ್ಧಾನಂತರ ಜನರು ಅನೇಕ ದುಷ್ಪರಿಣಾಮಗಳ ದೆಸೆಯಿಂದ ಕಷ್ಟನಷ್ಟಗಳಿಗೀಡಾಗಿ, ಇನ್ನು ಕೆಲವರು ತಮ್ಮ ನೈತಿಕ ಮಟ್ಟವನ್ನೆ ಕೆಡಿಸಿಕೊಂಡು ಅನೇಕ ಟೀಕೆ ಟಿಪ್ಪಣಿಗಳಿಗೆ ಕಾರಣ ಭೂತರಾಗಿದ್ದಾರೆ. ದೇಶದಲ್ಲಿ ಇಂಥಾ ಪರಿಸ್ಥಿತಿಯೊದಗಿರುವಾಗ ತಾವು ಕಲಿತ ವಿದ್ಯೆಯನ್ನು ಮಕ್ಕಳಿಗೆ ಕಲಿಸಿ, ಅವರನ್ನು ಬುದ್ಧಿವಂತರನ್ನಾಗಿಮಾಡಿದನಂತರ ಅವರು ತಮ್ಮ ವಿವೇಕದಿಂದ ಭಾರತದ ಮುಂದಿನ ಸತ್ಪ್ರಜೆಗಳಾಗುವಂತೆ ಮಾಡಲು ಯಾವ ರೀತಿಯ ವಿದ್ಯಾಭ್ಯಾಸವಿರಬೇಕು, ಅದನ್ನು ಹೇಗೆ ಏರ್ಪಾಡು ಮಾಡಬೇಕು, ಹೇಗೆ ಉತ್ತಮಪಡಿಸಬೇಕು ಎಂಬೀ ವಿಷಯಗಳಿಗೆ ನಾವೀಗ ಹೆಚ್ಚಿನ ಗಮನವನ್ನು ಕೊಡಬೇಕಾಗಿರುವುದು ಅತ್ಯಗತ್ಯವಾಗಿರುತ್ತೆಂದು ನಾನು ಹೇಳದೆ ವಿಧಿಯಿಲ್ಲ. ಈಗ ನಾವು ಮುಖ್ಯವಾಗಿ ಗಮನಿಸಬೇಕಾಗಿರುವುದು ಅವರೆಲ್ಲರಿಗೂ ಸರಿಯಾದ ವಿದ್ಯಾ ಅರ್ಹತೆಯನ್ನುಂಟುಮಾಡಿ, ಅವರು ಆರೋಗ್ಯ ಕಾಯಕರಾಗಿರುವಂತೆಯೂ ಮತ್ತು ಮುಂದಿನ ದೇಶದ ಸತ್ಪ್ರಜೆಗಳಾಗುವಂತೆಯೂ ಮಾಡಬೇಕಾದುದು ತೀರ ಅವಶ್ಯಕವಾಗಿದೆ. ಅದಕ್ಕೆ ಕಾರಣವಾದರೂ ಇಷ್ಟೆ—ಕಳೆದ ಯುದ್ಧಾನಂತರದಿಂದೀಚೆಗೆ ಜನಗಳು ತಮ್ಮ ನೀತಿ, ನಡತೆ, ಶೀಲ, ನ್ಯಾಯ ಧರ್ಮ ಇವುಗಳನ್ನೆಲ್ಲಾ ಕಳೆದುಕೊಂಡಿದ್ದಾರೆ. ಎಲ್ಲಿ ನೋಡಿದರಲ್ಲಿ ಅನೀತಿ,

ಅನ್ಯಾಯ ತಾಂಡವವಾಡುತ್ತಿದೆ. ಇದು ನಮ್ಮ ದೇಶದ ದೌರ್ಭಾಗ್ಯ. ಇಂಥಾದ್ದನ್ನೆಲ್ಲಾ ತಡೆಗಟ್ಟುವುದು ದೇಶಕ್ಕೆ ಯಾರು ತಂದೆಯಾಗಿದ್ದಾರೋ, ಯಾರು ಇಂಥಿಂಥಾದ್ದಕ್ಕೆಲ್ಲ ಮುಖಂಡರಾಗಿದ್ದಾರೋ, ಅವರು ಇದನ್ನೆಲ್ಲಾ ಸರಿಪಡಿಸಲು, ಸಹಾಯಕರಾದ ನಿಜವಾದ ವಿದ್ಯೆಯನ್ನು ಮಕ್ಕಳಿಗೆ ಕೊಟ್ಟು, ಅನಂತ ಬಲಿದಾನಗಳ ಫಲವಾಗಿ ಪಡೆದುಕೊಂಡಿರುವ ಈ ಸ್ವಾತಂತ್ರ್ಯ ಭಾರತದ ಭದ್ರತೆಗೆ ಯಾವ ಧೋಕವೂ ಇಲ್ಲದೆ ಇರುವ ಹಾಗೆ ಮಾಡಬೇಕಾಗಿದ್ದರೆ ನಮ್ಮ ಸರ್ಕಾರದವರು ಪ್ರಥಮತಃ ಈ ಮೂಲ ವಿದ್ಯಾಭ್ಯಾಸ ಬಾಬಿಗೆ ಅಂದರೆ ಪ್ರಾಥಮಿಕ ಶಿಕ್ಷಣಕ್ಕಾಗಿ ಹೆಚ್ಚು ಆಸಕ್ತಿಯನ್ನೂ ಮತ್ತು ಹಣದ ವೆಚ್ಚವನ್ನೂ ಸಹ ಮಾಡಲು ತಯಾರಾಗಬೇಕಾದ್ದು ಸಹಜ ವಾದುದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ಇಂಥಾ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಂದುವರಿಸಬೇಕಾಗಿದ್ದರೆ ಉತ್ಕೃಷ್ಟವಾದ ಮತ್ತು ಅನುಭವಶಾಲಿಗಳಾದ ಶಿಕ್ಷಕರ ಸಹಾಯ ಅತ್ಯಗತ್ಯ. ಹಾಗೆ ಶಿಕ್ಷಣ ಕೊಡತಕ್ಕವರ ಮನಸ್ಸು ಹೇಗಿರಬೇಕೆಂದರೆ, ದೇಶದಲ್ಲಿರುವ ನಮ್ಮ ಬಾಲಕರೆಲ್ಲರೂ ದೇಶದ ಮುಂದಿನ ಸತ್ಪ್ರಜೆಗಳಾಗಬೇಕು, ನಮ್ಮ ದೇಶದ ಕೀರ್ತಿಯನ್ನು ಅವರು ಎತ್ತಿ ಹಿಡಿಯುವಂತೆ ಅವರಲ್ಲಿ ದೇಶವಾತ್ಸಲ್ಯಗಳು ತುಂಬಿ ತುಳುಕುವಂತಾಗಬೇಕು ವಿದ್ಯಾಭ್ಯಾಸ ಕ್ರಮವನ್ನು ಅವರಿಗೆ ತೆರೆದ ಮನಸ್ಸಿನಿಂದ ಹೇಳುವಂಥ ಮನಸ್ಸಿನವರಾಗಿರಬೇಕು. ಆ ರೀತಿ ಉತ್ಸಾಹ ಅವರಿಗೆ ಉಂಟಾಗಬೇಕಾಗಿದ್ದರೆ ಅವರಿಗೆ ಸಾಕಷ್ಟು ಉತ್ತೇಜನ ಮತ್ತು ಅವರಿಗೆ ಸರಿಯಾದ ಸಂಬಳ ಸಾರಿಗೆಗಳನ್ನು ಕೊಡಬೇಕು. ಇದು ಅತ್ಯಾವಶ್ಯಕವಾದ ಅಂಶ. ಈ ಅಂಶಗಳನ್ನೆಲ್ಲಾ ಆಲೋಚಿಸುತ್ತಿರುವಾಗಲೇ ಈಗಿನ ವಿದ್ಯಾಭ್ಯಾಸದ ಪರಿವರ್ತನೆ ಆಗಿ ಈಗ ಆಗುತ್ತಿರುವ ಖರ್ಚುಗಳಿಗಿಂತಲೂ ಹೆಚ್ಚಿನ ಹಣವನ್ನು ಖರ್ಚುಮಾಡಲು ನಿಜವಾಗಿಯೂ ನಮ್ಮ ಸರ್ಕಾರಕ್ಕೆ ಶಕ್ತಿಯಿದೆಯೇ ಎಂಬ ಒಂದು ಪ್ರಶ್ನೆ ಏಳುತ್ತದೆ. ನಿಜ; ಏನೇ ಆಗಲೀ, ಅವರ ಆಸೆಗಳು ಈಡೇರುವಂತೆ ಮಾಡತಕ್ಕದ್ದು ಮತ್ತು ಅವರಿಗೆ ಹೆಚ್ಚು ಸೌಕರ್ಯಗಳನ್ನು ಕಲ್ಪಿಸತಕ್ಕದ್ದೂ ದೇಶಾಭ್ಯುದಯದ ದೃಷ್ಟಿಯಿಂದ ಅತ್ಯಗತ್ಯವೆಂದು ಹೇಳದೆ ವಿಧಿಯಿಲ್ಲ. ಈಗ ಹಾಲೀ ನಡೆಯುತ್ತಿರುವ ಪ್ರಾಥಮಿಕ ವಿದ್ಯಾಭ್ಯಾಸದ ಸ್ಥಿತಿಗತಿಗಳನ್ನು ನೋಡಿದರೆ ಅಂಥಾ ಒಂದು ಉತ್ಸಾಹವಾಗಲೀ, ಅಥವಾ ಒಂದು ವರ್ಚಸ್ಸಾಗಲೀ ಅದರಲ್ಲಿದ್ದಂತೆ ಕಂಡು ಒರುತ್ತಿಲ್ಲ. ಹಾಗೆ ಅಂಥಾ ದಕ್ಷರು ನಮಗೆ ಬೇಡವೆಂದರೆ ಬರತಕ್ಕವರಿಂದ ಅಷ್ಟು ದಕ್ಷತೆಯಿಂದ ವಿದ್ಯಾಭಿವೃದ್ಧಿಯ ಘನತೆಯನ್ನು ಕಾಪಾಡಿಕೊಂಡು ಪಾಠ ಪ್ರವಚನಗಳನ್ನು ನಡೆಸಲು ಅವರಿಗೆ ಸಾಧ್ಯವಿಲ್ಲ. ಇದಕ್ಕೆಲ್ಲ ಕಾರಣ ಅವರ ಬಡತನವೇ ಹೊರತು ಬೇರೆ ಅಲ್ಲ. ರೆವೆನ್ಯೂ ಪ್ರೊಬೇಷನರುಗಳಿಗೆ ಒಂದೆರಡು ವರ್ಷ ಶಿಕ್ಷಣ ಕೊಟ್ಟು ಅವರು ತಾಲ್ಲೂಕು ಕಛೇರಿಗೆ ಬಂದರೆ ಎಷ್ಟು ದಕ್ಷತೆಯಿಂದ ಎಲ್ಲಾ ಕೆಲಸಗಳನ್ನೂ ಮಾಡಬಲ್ಲರೋ, ಅದೇ ರೀತಿ ಇಲ್ಲಿಯೂ ಸರಿಯಾದ ಶಿಕ್ಷಣವನ್ನು ಉಪಾಧ್ಯಾಯರುಗಳಿಗೆ ಕೊಡಬೇಕು. ಹಾಗೆ ಮಾಡದೆ ಕೇವಲ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣವಾಗಿ ಬಂದಿರುವಂಥ ಒಬ್ಬ ಉಪಾಧ್ಯಾಯನ ಕೈಗೆ ನಮ್ಮ ಮಕ್ಕಳನ್ನು ಶಿಕ್ಷಿತರನ್ನಾಗಿ ಮಾಡಲು ಕೊಡುವುದೆಂದರೆ ಏನರ್ಥ ? ಇದು ಎಷ್ಟು ಸೂಕ್ತ ಮತ್ತು ಗಹನವಾದುದೆಂಬುದನ್ನು ಮಾನ್ಯ ಸದಸ್ಯರೆಲ್ಲರೂ ಆಲೋಚಿಸತಕ್ಕದ್ದಾಗಿದೆ. ಆದಕಾರಣ ಈ ವಿಷಯದಲ್ಲಿ ಎಷ್ಟು ಶ್ರದ್ಧೆ ವಹಿಸಿ ಅನುಕೂಲ ಕಲ್ಪಿಸಿದರೆ ಅಷ್ಟು ದೇಶಕ್ಕೆ ಕ್ಷೇಮ ಉಂಟೆಂದೂ. ಅದರಿಂದ ನೆಮ್ಮದಿಯುಂಟೆಂದೂ ಹೇಳುತ್ತೇನೆ. ಆದರೆ ಈಗ ಎಷ್ಟು ಶಿಕ್ಷಣ ಆ ಉಪಾಧ್ಯಾಯರುಗಳಿಗೆ ಸಲ್ಲಬೇಕಾಗಿತ್ತೋ ಅಷ್ಟು ಸಲ್ಲುತ್ತಿಲ್ಲ. ಉತ್ತನಹಳ್ಳಿಯಲ್ಲಿ ಕೆಲವು ಉಪಾಧ್ಯಾಯರುಗಳಿಗೆ ಶಿಕ್ಷಣ ಕೊಡುತ್ತಿದ್ದಾರೆ. ಇನ್ನು ಕೆಲವು ಕಡೆ ಡಿಸ್ಟ್ರಿಕ್ಟ್ ನಾರ್ಮಲ್ ಸ್ಕೂಲುಗಳಲ್ಲಿ ಕೆಲವರಿಗೆ ಕೊಡುತ್ತಿದ್ದಾರೆ. ಆದರೂ ಸಾಕಷ್ಟು ಸಂಖ್ಯೆಯಲ್ಲಿ ನುರಿತ ಉಪಾಧ್ಯಾಯರುಗಳು ಸಿಕ್ಕುತ್ತಿಲ್ಲ. ಆದುದರಿಂದ ಮೊಟ್ಟಮೊದಲನೆಯದಾಗಿ ವಿದ್ಯಾಭ್ಯಾಸಕ್ಕೆ ತಳಪಾಯದೋಪಾದಿಯಲ್ಲಿರುವ ಈ ಪ್ರಾಥಮಿಕ ಶಿಕ್ಷಣದ ಬಗ್ಗೆ ತಾವು ಎಲ್ಲಾ ಜಿಲ್ಲೆಗಳಲ್ಲೂ ನುರಿತ ಶಿಕ್ಷಣಕೊಡಲು, ನುರಿತ ಉಪಾಧ್ಯಾಯರುಗಳು ದೊರೆಯುವಂತೆ ಮಾಡಬೇಕಾಗಿರುತ್ತೆ. ಶಿಕ್ಷಣ ಉತ್ತಮ ಮಟ್ಟದಲ್ಲಿ ದೊರೆಯತಕ್ಕದ್ದು ಶ್ರೇಷ್ಠವೇ ಹೊರತು, ಶಾಲಾ ಸಂಖ್ಯೆಗಳು ಹೆಚ್ಚಿದ ಮಾತ್ರಕ್ಕೇ ಏನೂ ಪ್ರಯೋಜನವಿಲ್ಲ. ಆದಕಾರಣ ಹೆಚ್ಚು ಹೆಚ್ಚು ಸ್ಕೂಲುಗಳನ್ನು ತೆರೆಯುವುದಕ್ಕೆ ಬದಲಾಗಿ ನುರಿತ ಮತ್ತು ದಕ್ಷರಾದ ಉಪಾಧ್ಯಾಯರುಗಳನ್ನು ತೆರೆದಿರುವ ಸ್ಕೂಲುಗಳಿಗೆ ಸರಿಯಾಗಿ ದೊರೆಯುವಂತೆ ಮಾಡುವ ತನಕ ಈ ಪಾಠಶಾಲೆಗಳನ್ನೇ ಹೊಸದಾಗಿ ನಿರ್ಮಿಸಬೇಕಾದ್ದು ಸೂಕ್ತವಾದುದಲ್ಲವೆಂದು ನನ್ನ ಅಭಿಪ್ರಾಯ.

ಪ್ರಾಥಮಿಕ ಶಿಕ್ಷಣ ಶಾಲೆಗಳನ್ನು ಹೆಚ್ಚಿಸಿದಂತೆಲ್ಲಾ ಸರಿಯಾಗಿ ಕಾಲ ಕಾಲಕ್ಕೆ ಅವುಗಳಿಗೆ ಭೇಟಿಯಿತ್ತು ಪರಿಶೀಲನೆ ನಡೆಸಿ, ಅವುಗಳಲ್ಲಿ ಪಾಠ ಪ್ರವಚನಗಳು ಚೆನ್ನಾಗಿ ನಡೆಯುತ್ತಿವೆಯೇ ಎಂಬುದನ್ನು ನೋಡಿಕೊಳ್ಳುತ್ತಿಲ್ಲ. ಇಂದಿನ ವಿದ್ಯಾ ಇಲಾಖೆಯಲ್ಲಿರತಕ್ಕ ವ್ಯವಸ್ಥೆಯು ಸಡಿಲವಾಗಿರುವುದೇ ಇದಕ್ಕೆ ಕಾರಣವೆಂದು ವ್ಯಕ್ತವಾಗುತ್ತದೆ ಹಿಂದೆ ಇದಕ್ಕಾಗಿ ವಿದ್ಯಾಭ್ಯಾಸದ ಇಲಾಖೆಯ ಮುಖ್ಯಾಧಿಕಾರಿಗಳಿಗೆ ಸಹಾಯಕರಾಗಿ ಡಿ. ಪಿ. ಐ. ಗಳು ಮೂರು ಮೂರು ಜಿಲ್ಲೆಗಳಿಗೊಬ್ಬರಂತೆ ಇರುತ್ತಿದ್ದರು. ಇವರು ಹೈಸ್ಕೂಲುಗಳನ್ನು ನೋಡಿಕೊಳ್ಳುತ್ತಿದ್ದರು. ಡಿ. ಇ. ಓ. ಗಳು ಮಾಧ್ಯಮಿಕ ಶಾಲೆಗಳ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಅಸಿಸ್ಟೆಂಟ್ ಇನ್ಸ್‌ಪೆಕ್ಟರುಗಳು ಪ್ರಾಥಮಿಕ ಶಿಕ್ಷಣ ಶಾಲೆಗಳನ್ನು ನೋಡಿಕೊಳ್ಳುತ್ತಿದ್ದರು. ಈಗ ಯಾವುದೋ ಒಂದು ಹೊಸ ಯೋಜನೆಯನ್ನು ಮಾಡಿ ಎಲ್ಲಾ ಡಿ. ಪಿ. ಐ. ಗಳನ್ನು ಕೇಂದ್ರದಲ್ಲೇ ಇಟ್ಟುಕೊಂಡು ಇಲಾಖೆಯನ್ನು ಮೂರು ಭಾಗವಾಗಿ ವಿಂಗಡಿಸಿ ಆಯಾಭಾಗದಲ್ಲಿರುವ ಹೈಸ್ಕೂಲು, ಮಿಡ್ಲ್‌ಸ್ಕೂಲು ಮತ್ತು ಪ್ರೈಮರಿ ಸ್ಕೂಲು—ಇವುಗಳೆಲ್ಲದರ ಮೇಲೂ ಆಡಳಿತ ಕೊಟ್ಟಿರುವುದರಿಂದ ಅವರಿಗೆ ಎಲ್ಲವನ್ನೂ ಪರಿಶೀಲನೆ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಅದೂ ಅಲ್ಲದೆ ಅಸಿಸ್ಟೆಂಟ್ ಇನ್ಸ್‌ಪೆಕ್ಟರುಗಳಿರುವುದು ನಿಜವಾಗಿ ಪ್ರೈಮರಿ ಪಾಠಶಾಲೆಗಳಿಗೆಂದು ಅಂಥವರು ಮಾಧ್ಯಮಿಕ ಪಾಠಶಾಲೆಗಳ ಮೇಲ್ವಿಚಾರಣೆಗೆ ಹೋದಾಗ ಅವರು ಅಷ್ಟಾಗಿ ಮುತುವರ್ಜಿಯಿಂದ ಅಥವಾ ಪ್ರೀತಿ ವಿಶ್ವಾಸದಿಂದ ಆ ಉಪಾಧ್ಯಾಯರುಗಳನ್ನಾಗಲೀ ಅಥವಾ ಅವರ ಕೆಲಸ ಕಾರ್ಯಗಳನ್ನಾಗಲೀ ತನಿಖೆಮಾಡುವುದು ಸಾಧ್ಯವಿಲ್ಲವೆಂದು ಸ್ಪಷ್ಟವಾಗಿ ನೋಡಬಹುದಾಗಿದೆ. ಆದ್ದರಿಂದ ಹಿಂದಿದ್ದಂತೆಯೇ ಮೂರು ಮೂರು ಜಿಲ್ಲೆಗಳಿಗೊಬ್ಬರಂತೆ ಡಿ.ಡಿ. ಪಿ. ಐ. ಗಳನ್ನು ಏರ್ಪಾಡು ಮಾಡಿದರೆ ಒಳ್ಳೆಯದು. ಅವರು ಎಲ್ಲಾ ಸ್ಕೂಲುಗಳಲ್ಲಿಯೂ ಕೆಲಸ ಕಾರ್ಯಗಳು ಸರಿಯಾಗಿ ನಡೆಯುತ್ತಿವೆಯೇ ಇಲ್ಲವೇ ಎಂಬುದನ್ನು ತನಿಖೆ ಮಾಡುವುದರಿಂದ ಹಿಂದಿದ್ದಂತೆಯೇ ವಿದ್ಯಾಭ್ಯಾಸ ಚೆನ್ನಾಗಿ ನಡೆಯುತ್ತದೆಂದು ಹೇಳಬಲ್ಲೆ. ಇದೇ ಪ್ರಕಾರವೇ ಈ ಇಲಾಖೆಯ ಮುಖ್ಯಾಧಿಕಾರಿಗಳೂ ತಮಗೆ ಸಲಹೆ ಮಾಡಿದ್ದಾರೆಂದು

ನನಗೆ ತಿಳಿದು ಬಂದಿದೆ. ಆದಷ್ಟು ಜಾಗ್ರತೆ ಆದರಂತೆ ಏರ್ಪಾಡು ಮಾಡುವುದು ಅತ್ಯಾವಶ್ಯಕ.

ಇನ್ನು ಮಾಧ್ಯಮಿಕ ಶಾಲೆಗಳ ವಿಷಯ. ಮಾಧ್ಯಮಿಕ ಶಾಲೆಗಳು ನಮ್ಮ ದೇಶದಲ್ಲಿ ವರ್ಷವರ್ಷ ಹೆಚ್ಚಾಗುತ್ತವೆ. ಆದರೆ ಈ ಶಾಲೆಗಳಿಗೆ ಸರಿಯಾದ ಕಟ್ಟಡಗಳ ಮತ್ತು ಉತ್ತಮ ಉಪಾಧ್ಯಾಯರುಗಳ ಅಭಾವ ಬಹಳವಾಗಿದೆ. ಅದಕ್ಕೀಗ ತಕ್ಕವ್ಯವಸ್ಥೆ ಮಾಡಬೇಕಾಗಿದೆ. ಈ ಸಂದರ್ಭದಲ್ಲಿ ಒಂದು ವಿಷಯ ಹೇಳಬೇಕಾಗಿದೆ. ನಮ್ಮ ದೇಶ ಜಾತ್ಯಾತೀತ ದೇಶವೆಂದು ಸಾರಿದರೂ ಕೂಡ, ಇನ್ನೂ ನಮ್ಮ ದೇಶದಲ್ಲಿ ಉರ್ದುಮಿಡ್ಲ್ ಸ್ಕೂಲುಗಳಿರುವುದು ಆಶ್ಚರ್ಯಕರ ! ಶಿಕ್ಷಣಸಚಿವರು ಆದಷ್ಟು ಬೇಗ ಇವುಗಳನ್ನೆಲ್ಲಾ ತೆಗೆದು ಒಂದುಗೂಡಿಸುವುದರಲ್ಲಿ ಪ್ರಯತ್ನಪಟ್ಟಿದ್ದಾರೆಂದು ಕಾಣುತ್ತದೆ. ಇದು ಸಂತೋಷಕರವಾದ ವಿಚಾರ. ಕಾರಣವೇನೆಂದರೆ ದೇಶದ ಎಲ್ಲಾ ಮಕ್ಕಳೂ ಒಂದೆ ಕಡೆ ಬೆಳೆದರೆ, ಅವರಲ್ಲಿ ಪರಸ್ಪರ ಪ್ರೀತಿವಿಶ್ವಾಸ ಬೆಳೆಯುತ್ತದೆ. ಮತ್ತು ಈಗ ಕೆಲವು ಶಾಲೆಗಳಲ್ಲಿ ಬೇಕಾದಷ್ಟು ಸ್ಥಳಾವಕಾಶವಿರುವುದು, ಕೆಲವು ಕಡೆ ಸ್ಥಳ ಸಂಕೋಚದಿಂದ ಒದ್ದಾಡುತ್ತಿರುವುದು ತಪ್ಪುತ್ತದೆ. ಮಕ್ಕಳಲ್ಲೂ ನಾವೇ ಬೇರೆ, ಅವರೇ ಬೇರೆ ಎಂಬ ಭಾವನೆ ಬರುವುದಕ್ಕೆ ಅವಕಾಶವಿಲ್ಲದೆ ದೇಶದಲ್ಲಿ ಒಂದು ಒಳ್ಳೆಯವಾತಾವರಣ ಬೆಳೆಸಲು ಅವಕಾಶವಾಗುತ್ತದೆ. ಪರಸ್ಪರ ಸ್ನೇಹ ಸೌಹಾರ್ದಗಳು ಬೆಳೆಯಲಿಕ್ಕೆ ಸಹಾಯವಾಗುತ್ತದೆ.

ಇನ್ನು ಪ್ರೌಢಶಾಲೆಗಳು. ಈಗ ಪ್ರೌಢಶಾಲೆಗಳನ್ನು ಸರ್ಕಾರದವರು ಅಷ್ಟಾಗಿ ಸ್ಥಾಪಿಸುತ್ತಿಲ್ಲ—ಜಿಲ್ಲಾ ಮತ್ತು ಪೌರಸಭೆಗಳು, ಖಾಸಗೀ ಸಂಸ್ಥೆಗಳು,—ಈ ವಿಚಾರದಲ್ಲಿ ಹೆಚ್ಚಿಗೆ ಪ್ರೋತ್ಸಾಹ ಕೊಡುತ್ತೇವೆಂದು ಹೇಳಿದ್ದಾರೆ, ಅದರಂತೆ ಕೊಡುತ್ತಲೂ ಇದ್ದಾರೆ. ಆದರೂ ಅನೇಕ ಕಡೆಗಳಲ್ಲಿ ಈ ಖಾಸಗೀಸಂಸ್ಥೆಗಳಿಗೆ ನ್ಯಾಯವಾಗಿ ದೊರೆಯಬೇಕಾದ ಅನುಕೂಲಗಳೂ, ಸಹಾಯಗಳೂ ನಾನಾ ಅಡ್ಡಿ ಆತಂಕಗಳ ದೆಸೆಯಿಂದ ದೊರೆಯುತ್ತಿಲ್ಲ. ಈ ಖಾಸಗೀ ಸಂಸ್ಥೆಗಳು ನಡಿಸುತ್ತಿರುವ ವಿದ್ಯಾಭ್ಯಾಸವನ್ನು ಸರ್ಕಾರದವರೇ ನಡೆಸಬೇಕೆಂದಿದ್ದರೆ, ಇನ್ನೂ ಎಷ್ಟೋ ಹಣ ಸರ್ಕಾರದವರಿಗೆ ಖರ್ಚಾಗುತ್ತಿತ್ತೆಂದು ಧಾರಳವಾಗಿ ಹೇಳಬಹುದು, ಆದ್ದರಿಂದ ಸರ್ಕಾರದ ಇಂದಿನ ಆರ್ಥಿಕ ಸ್ಥಿತಿಯಲ್ಲಿ ವಿದ್ಯಾಭ್ಯಾಸದ ವಿಷಯದಲ್ಲಿ, ಅದರಲ್ಲೂ ಪ್ರೌಢ ವಿದ್ಯಾಭ್ಯಾಸದ ವಿಷಯದಲ್ಲಿ, ಸಾರ್ವಜನಿಕರು ಹೆಚ್ಚಿನ ಆಸಕ್ತಿ ವಹಿಸುವಂತೆ ಪ್ರೋತ್ಸಾಹಿಸುವುದು ಅತ್ಯಾವಶ್ಯಕ. ಈಗಿರತಕ್ಕ ರಾಷ್ಟ್ರೀಯ ಶಿಕ್ಷಣಸಂಸ್ಥೆಗಳೇನಿವೆಯೋ, ಹಿಂದೆ ಸ್ವಾತಂತ್ರ್ಯಕ್ಕೆ ಅನುವಾಗುವ ರೀತಿಯಲ್ಲಿ ವಿದ್ಯಾಭ್ಯಾಸ ಕೊಡಿಸಬೇಕು. ಆ ವಿದ್ಯಾರ್ಥಿಗಳು ಮುಂದಿನ ಸ್ವಾತಂತ್ರ್ಯ ಸಮರದಲ್ಲಿ ನೆರವಾಗುವಂತಾಗಲು ಏನು ನಡೆಸುತ್ತೀರೋ, ಅವುಗಳು, ಮತ್ತು ಧರ್ಮಪ್ರಚಾರ ಮಾಡುವ ದೃಷ್ಟಿಯಿಂದ ನಡೆಸಲ್ಪಡುತ್ತಿದ್ದ ಮಿಷನ್ ಸ್ಕೂಲುಗಳು, ಮತ್ತು ಇನ್ನು ಕೆಲವು ಧನಿಕರಿಂದ ನಡೆಸಲ್ಪಡುತ್ತಿದ್ದಂಥವುಗಳು ಈಗ ಆರ್ಥಿಕ ತೊಂದರೆಗೆ ಸಿಕ್ಕಿ ತೊಂದರೆ ಪಡುತ್ತಿವೆ. ಇವುಗಳಲ್ಲಿ ಖಾಸಗೀ ಶಿಕ್ಷಣ ಸಂಸ್ಥೆಗಳೂ, ಹಾಗೆಯೇ ಕೆಲವುಕಡೆ ಪೌರಸಭೆಗಳೂ, ಹುರುಪಿನಿಂದ ಹೈಸ್ಕೂಲುಗಳನ್ನು ಸ್ಥಾಪನೆ ಮಾಡಿದ್ದರೂ, ಈಗಾಗಲೇ ಅವು ತಮ್ಮ ನ್ಯಾಯವಾದ ಕರ್ತವ್ಯಗಳಾದ ವೈದ್ಯಕೀಯ ಮುಂತಾದುವುಗಳಿಗೇ ಸಾಕಾದಷ್ಟು ಹಣವಿಲ್ಲದೆ ಒದ್ದಾಡುತ್ತಿದ್ದಾರೆ. ಆದ್ದರಿಂದ ಸರ್ಕಾರದವರು ಈ ಖಾಸಗಿಸಂಸ್ಥೆಗಳಿಗೆ ಹೆಚ್ಚು ಚ್ಚಿನ ಪ್ರೋತ್ಸಾಹಕೊಟ್ಟು ತನ್ಮೂಲಕ ದೇಶದಲ್ಲಿ ವಿದ್ಯಾಭ್ಯಾಸವನ್ನು ಅಭಿವೃದ್ಧಿಪಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಇದು ಮಕ್ಕಳ ಅಭಿವೃದ್ಧಿಗೆ ಸಹಾಯವಾಗುವ ವಿಷಯವೆಂಬ ಭಾವನೆಯನ್ನು ಅವರಲ್ಲಿ ಉಂಟುಮಾಡಬೇಕು.

ಈ ಸಂದರ್ಭದಲ್ಲಿ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಈ ಖಾಸಗೀ ವಿದ್ಯಾಶಿಕ್ಷಣಸಂಸ್ಥೆಗಳಲ್ಲಿ ಕೆಲಸ ಮಾಡುವುದಕ್ಕೆ ಬರತಕ್ಕ ಉಪಾಧ್ಯಾಯರುಗಳ ಸಂಖ್ಯೆ ಕಡಿಮೆ. ಕಾರಣವೇನೆಂದರೆ, ಈ ಶಾಲೆಗಳಲ್ಲಿರತಕ್ಕ ಉಪಾಧ್ಯಾಯರುಗಳ ಭವಿಷ್ಯ ಅಷ್ಟಾಗಿ ಆಶಾದಾಯಕವಾಗಿರುವುದಿಲ್ಲ. ಸರ್ಕಾರಿಶಾಲೆಗಳಲ್ಲಿರುವಂತೆ ಅವರಿಗೆ ಪೆನ್ಷನ್ ವಗೈರೆ ದೊರೆಯುವ ನಂಬಿಕೆಯಿದೆಯೇ ? ಪ್ರಾವಿಡೆಂಟ್‌ಫಂಡ್ ಯೋಜನೆ ಎಂದು ಏನೋ ಇದ್ದರೂ ಕೂಡ, ಅದರಲ್ಲಿ ಅಷ್ಟಾಗಿ ಆಸಕ್ತಿ ಹುಟ್ಟಿಸುವುದು ಕಷ್ಟ. ಆದ್ದರಿಂದ ಇವೆಲ್ಲವನ್ನೂ ಯೋಚನೆಮಾಡಿ ಒಂದು ಸುಗಮವಾದ ಸುಸೂತ್ರವಾದ ಯೋಜನೆಮಾಡಿ ಈ ಖಾಸಗಿಸಂಸ್ಥೆಗಳನ್ನು ಸ್ಥಾಪನೆಮಾಡುವುದಕ್ಕೆ ಪ್ರಯತ್ನಮಾಡಿ ಸರ್ಕಾರದವರು ಪ್ರೌಢವಿದ್ಯಾಭ್ಯಾಸಕ್ಕಾಗಿ ಖರ್ಚುಮಾಡುತ್ತಿರುವ ಹಣವನ್ನು ಆದಷ್ಟುಮಟ್ಟಿಗೆ ಕಡಿಮೆಮಾಡಬೇಕು ಸರ್ಕಾರದವರ ಮೇಲ್ವಿಚಾರಣೆಯೂ ಇದ್ದು, ತಕ್ಕಮಟ್ಟಿಗೆ ಸರ್ಕಾರಿ ಸಹಾಯದ್ರವ್ಯದಿಂದಲೂ ನಡೆಸಲ್ಪಡುವಂತೆ ತಕ್ಕವ್ಯವಸ್ಥೆಯನ್ನು ಮಾಡಲು ಸೂಕ್ತ ಸಲಹೆ ಮಾಡುವುದಕ್ಕಾಗಿ ಸರ್ಕಾರದವರು ಒಂದು ಸಮಿತಿಯನ್ನು ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಇಷ್ಟೆಲ್ಲಾ ಆದ ಮೇಲೆ, ಸ್ಕೌಟ್ ಮತ್ತು ಸೇವಾದಳದ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ದೇಶದಲ್ಲಿ ಏನೇ ವಿದ್ಯಾಭ್ಯಾಸ ಕೊಡಲಿ, ಶಿಸ್ತು ಮತ್ತು ದೇಹದಾರ್ಢ್ಯವನ್ನು ಪ್ರತಿಯೊಬ್ಬರಲ್ಲೂ ಉಂಟುಮಾಡದಿದ್ದರೆ ನಮ್ಮ ವಿದ್ಯೆಯಿಂದ ಪ್ರಯೋಜನವಿಲ್ಲ. ಒಂದಾನೊಂದು ಕಾಲದಲ್ಲಿ, ಸ್ವಾತಂತ್ರಸಮರ ನಡೆಯುತ್ತಿದ್ದಾಗ ಈ ಸ್ಕೌಟುದಳವೆಂಬುದು ಸಾಮ್ರಾಜ್ಯ ಶಾಹಿಯತತ್ವಕ್ಕೆ ಸಹಕಾರಿಯಾಗಿತ್ತೆಂಬುದು, ನಿಜ. ಇನ್ನಾದರೂ ಇದು ದೇಶಕ್ಕೆ ಸಹಾಯಕವಾಗಿರುವ ರೀತಿಯಲ್ಲಿ ನಡೆಯುತ್ತದೆಂಬ ಭರವಸೆ ಕೊಡುವುದು ಅವಶ್ಯಕವಾಗಿದೆ.

ಅದರಂತೆಯೇ ಸೇವಾದಳವೂ ಸಹ ಸ್ವಾತಂತ್ರ್ಯ ಯುದ್ಧದಲ್ಲಿ ಅನಂತ ಸೇವೆ ಮಾಡಿರುವ ಸಂಸ್ಥೆ. ಅದರ ಹಿಂದೆ ಮಹಾತ್ಮ ಗಾಂಧಿಯವರು ಹಾಕಿರುವ ತತ್ವಗಳಲ್ಲಿ ಭಕ್ತಿ, ಶ್ರದ್ಧೆಯಿದೆ. ಆದ್ದರಿಂದ ಅಂಥ ಸಂಸ್ಥೆಗೆ ಪ್ರೋತ್ಸಾಹ ಕೊಡಬೇಕಾದ್ದು ಅತ್ಯಗತ್ಯ. ಆ ರೀತಿ ಮಾಡಿದ್ದರೂ ಕೂಡ ಮೈಸೂರು ಸಂಸ್ಥಾನದಲ್ಲಿ ಆ ರೀತಿ ಮಾಡಿರತಕ್ಕ ರಾಜಕೀಯ ಸಂಸ್ಥೆಯು ಕಾಂಗ್ರೆಸ್ ಸಂಸ್ಥೆ. ಸರ್ಕಾರಕ್ಕೆ ನೆರವಾಗಿದೆಯೇ ಎಂದು ಆಕ್ಷೇಪಣೆ ಬರಬಹುದು. ಆ ಸಂದರ್ಭ ಈ ದಿವಸ ಇಲ್ಲ. ಸ್ಕೌಟ್ ಸಂಸ್ಥೆಯು ಹೇಗೆ ರಾಜಕೀಯದಿಂದ ದೂರವಾಗಿದೆಯೋ ಅದೇ ರೀತಿ ಸೇವಾದಳವೂ ಕೂಡ ರಾಜಕೀಯದಿಂದ ದೂರವಾಗಿದೆ. ಹಾಗೆಯೇ ರಾಷ್ಟ್ರೀಯ ಸೇವಾ ಸಂಘವು ಸಹ ದೇಶಕ್ಕೆ ತುಂಬಾ ಆತಂಕವನ್ನುಂಟುಮಾಡಲು ಎಡೆ ಕೊಟ್ಟಿದೆ. ಜನರಿಗೆ ಸಾಮಾನ್ಯವಾಗಿ ಜಾತಿ, ಮತ, ಧರ್ಮ ಎಂದು ಹೇಳಿದರೆ ಒಂದು ತರಹ ಹುಚ್ಚು. ಆದುದರಿಂದಲೇ ಪೂರ್ವ ಬಂಗಾಳಾದಲ್ಲಿ ದುಷ್ಕೃತ್ಯಗಳಿಗೆ ಕಾರಣವಾಯಿತು. ಅದನ್ನು ಎದುರಿಸಬೇಕೆಂಬ ಮನೋಭಾವ ಬರುವುದಕ್ಕೆ ಅದೇ ಕಾರಣ. ಆರ್. ಎಸ್. ಎಸ್.ನವರಲ್ಲೂ ಕೂಡ ಹಿಂದೂ ಸಂಸ್ಕೃತಿಯೆಂದು ಹೇಳಿಕೊಂಡು ಅದನ್ನು ಎತ್ತಿಹಿಡಿಯಲು ಯುವಕರ ಮನೋಭಾವನೆ ತೀವ್ರವಾಗಿ ಹೆಚ್ಚುತ್ತಿದೆ. ಅದನ್ನು ತಪ್ಪಿಸಿ ಆ

ಮನೋಭಾವನೆಯನ್ನು ಬೇರೆ ರೀತಿಯಾಗಿ ಪರಿವರ್ತನೆ ಮಾಡಬೇಕಾದ್ದು, ಈಗ ಸರ್ಕಾರ ಮತ್ತು ಸಾರ್ವಜನಿಕರ ಕರ್ತವ್ಯವಾಗಿದೆ. ಆದ್ದರಿಂದ ಸೇವಾದಳಕ್ಕೆ ಪ್ರೋತ್ಸಾಹ ಕೊಟ್ಟರೆ ಆ ಸಂಘದಿಂದ ಸಂಸ್ಥಾನಕ್ಕೆ ಹೆಚ್ಚಿನ ಸೇವೆ ಸಲ್ಲಲು ಒಂದು ಸದವಕಾಶವಾಗುತ್ತದೆಯೆಂದು ಸೂಚಿಸುತ್ತೇನೆ.

ಇನ್ನು ಆರೋಗ್ಯದ ವಿಚಾರದಲ್ಲಿ ಒಂದೆರಡು ಮಾತು. ಆರೋಗ್ಯವು ವಿದ್ಯಾಭ್ಯಾಸದಷ್ಟೇ ಅತ್ಯಾವಶ್ಯಕ. ದೇಶದಲ್ಲಿ ಎಲ್ಲಾ ಕಡೆಯೂ ಖಾಯಿಲೆ ಕಸಾಲೆ ಜಾಸ್ತಿಯಾಗುತ್ತಿದೆ. ನಗರಗಳಲ್ಲಾದರೆ ಬೇಕಾದ ಸೌಕರ್ಯವಿದೆ. ಆದರೆ ಹಳ್ಳಿಗಾಡುಗಳಲ್ಲಿ ನಿವಾರಣೋಪಾಯವಿಲ್ಲದೆ ರೋಗಗಳು ಪ್ರಬಲವಾಗಿ ಹರಡಲು ಅವಕಾಶವಾಗಿದೆ. ಉದಾಹರಣೆಗೆ ಕೆಲವು ಕಡೆ ಕುಷ್ಠರೋಗವು ಹೆಚ್ಚಾಗಿ ಹತ್ತಾರು ಮಂದಿ ಹಳ್ಳಿಗಳಲ್ಲಿ ಕಷ್ಟಪಡುತ್ತಿದ್ದಾರೆ. ಅದಕ್ಕೆ ಸರಿಯಾದ ಪರಿಹಾರೋಪಾಯವನ್ನು ಸರ್ಕಾರದವರು ಮಾಡುವುದು ಆವಶ್ಯಕ. ಆದರೆ ಅದು ಸಾಲದು. ಆದಷ್ಟು ಬೇಗ ಇನ್ನೂ ಹೆಚ್ಚು ಶ್ರದ್ಧೆ ವಹಿಸಿ ಈ ಕುಷ್ಠರೋಗವನ್ನು ನಿರ್ಮೂಲವಾಡಿ ಅದು ಹರಡದಂತೆ ಕಾರ್ಯಕ್ರಮ ಕೈಕೊಳ್ಳಬೇಕೆಂದು ಪ್ರಾರ್ಥಿಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಗೋವಿಂದದಾಸ್‌ರವರು (ಹಾಸನ ಜಿಲ್ಲೆ).—ಅಧ್ಯಕ್ಷರೇ, ಈಗ ನಮ್ಮ ಮುಂದಿರುವ ಆಯವ್ಯಯ ಪಟ್ಟಿಯನ್ನು ಸ್ವಾಗತಿಸಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆ. ಈ ವರ್ಷದ ಬಡ್ಜೆಟ್ಟಿನಲ್ಲಿ ನಿಮ್ನ ಪಂಗಡದವರ ಉದ್ಧಾರಕ್ಕಾಗಿ ಸುಮಾರು 25 ಲಕ್ಷ ರೂಪಾಯಿಗಳನ್ನಾದರೂ ಒದಗಿಸುತ್ತಾರೆಂದು ನಂಬಿದ್ದೆ. ಆದರೂ ಕಳೆದ ವರ್ಷದಂತೆ ಈ ವರ್ಷವೂ ಸಹ 19 ಲಕ್ಷ ರೂಪಾಯಿಗಳನ್ನಾದರೂ ಕೊಟ್ಟಿರುವುದಕ್ಕಾಗಿ ಸರ್ಕಾರವನ್ನು ಅಭಿನಂದಿಸಲೇಬೇಕಾಗಿದೆ. 19 ಲಕ್ಷದ ಜೊತೆಗೆ ಇನ್ನೂ 6 ಲಕ್ಷವನ್ನು ಕೊಟ್ಟಿದ್ದರೆ ಅದರಿಂದ 250—300 ರೂಪಾಯಿಗಳನ್ನು ಕೊಟ್ಟು ಎತ್ತುಗಳನ್ನು ತೆಗೆದುಕೊಂಡು ಆಹಾರಾಭಾವವನ್ನು ಹೋಗಲಾಡಿಸಲು ಅನುಕೂಲವಾಗುವುದೆಂದು ನಂಬಿದ್ದೆ. ಈಗ ಅದು ನಿರಾಶೆಯಾಗಿದೆ. ಮುಂದಾದರೂ ಸರ್ಕಾರದವರು ನನ್ನ ಆಸೆಯನ್ನು ನೆರವೇರಿಸುತ್ತಾರೆಂದು ನಂಬಿದ್ದೇನೆ. ಅಲ್ಲದೆ ಇನ್ನೊಂದು ಭಯವೂ ಇತ್ತು. 19 ಲಕ್ಷದಲ್ಲಿ ಎಲ್ಲಿ ಖೋತಾ ಬೀಳುತ್ತದೆಯೋ ಎಂಬ ಶಂಕೆಯಿತ್ತು. ಆದರೆ ದೇವರ ದಯೆಯಿಂದ ಆ ರೀತಿ ಆಗಲಿಲ್ಲ. ಇದಕ್ಕಾಗಿ ಸರ್ಕಾರವನ್ನು ಅಭಿನಂದಿಸಬೇಕಾಗಿದೆ. ನಿಜವಾಗಿಯೂ most of the Harijans are landless. ಆದ್ದರಿಂದ ಸರ್ಕಾರದವರು ಪ್ರತಿಯೊಂದು ಕುಟುಂಬಕ್ಕೂ 5 ಎಕರೆಯಾದರೂ ಜಮೀನನ್ನು ಕೊಟ್ಟು ಈ ಆಹಾರಾಭಾವವನ್ನು ನೀಗಲು ಅವಕಾಶ ಕೊಡಬೇಕೆಂದು ಹೇಳುತ್ತೇನೆ. 1945ರಿಂದ ಇದುವರೆಗೆ 21,845 ಎಕರೆ ಜಮೀನನ್ನು ಕೊಟ್ಟಿರುವುದಾಗಿ ಹಣಕಾಸಿನ ಸಚಿವರು ಹೇಳಿದ್ದಾರೆ. ಆದರೆ ಅದು ತೀರಾ ಕಡಮೆಯಾದ್ದರಿಂದ ಇನ್ನೂ ಹೆಚ್ಚಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ವಿಶೇಷವಾಗಿ ಕಷ್ಟಪಟ್ಟು ಕೆಲಸ ಮಾಡುವವರು ಹರಿಜನರು ಎಂದು ಈ ಸಂದರ್ಭದಲ್ಲಿ ಹೇಳಿದರೆ ತಪ್ಪಾಗಲಾರದು.

ಪಾನನಿರೋಧದ ವಿಚಾರ ನೋಡಿದರೆ 5 ಜಿಲ್ಲೆಗಳಲ್ಲಿ ಸರ್ಕಾರದವರು ಮುನ್ನುಗ್ಗಿ ಅದರ ಆದಾಯದಿಂದ 2 ಕೋಟಿ ರೂಪಾಯಿಗಳು ಎಲ್ಲಿ ನಿಲ್ಲುತ್ತದೆಯೋ ಎಂದು ನೋಡದೆ ಕೈಹಾಕಿ ಕುಡಿತವನ್ನು ನಿಲ್ಲಿಸಿದರು. ಇದು ಪ್ರಶಂಸನೀಯವಾದುದಾಗಿದೆ. ಇದೂ ಅಲ್ಲದೆ ಹಾಸನ ಜಿಲ್ಲೆಗೆ ಹತ್ತಿರವಿರುವ ಪಾನನಿರೋಧ ಜಾರಿಯಲ್ಲಿರುವ ಜಿಲ್ಲೆಗಳಲ್ಲಿ ಇದರ ಪರಿಣಾಮವು ಆಗಲೇ ತೋರಿಬರುತ್ತಿದೆ. ಅಲ್ಲಿನ ಬಹುಮಂದಿ ಜನರು ಹೊಟ್ಟೆ ತುಂಬಾ ಊಟಮಾಡಿ, ಮೈತುಂಬಾ ಬಟ್ಟೆ ಹೊದ್ದು, ಈಗ ಕೈಲಿ ಸ್ವಲ್ಪ ದುಡ್ಡು ಇಟ್ಟುಕೊಂಡಿದ್ದಾರೆ. ಮನೆಯಲ್ಲಿ ಒಡವೆ ವಸ್ತುಗಳನ್ನು ಮಾಡಿಸಿಕೊಂಡು ನೆಮ್ಮದಿಯಿಂದಿದ್ದಾರೆಂದು ತಿಳಿದುಬಂದಿದೆ. ಇದೆಲ್ಲವೂ ಪಾನನಿರೋಧದಿಂದ ಉಂಟಾಗಿರುವ ಪ್ರಯೋಜನವೇ ಆಗಿದೆ. ಉಳಿದ ನಾಲ್ಕು ಜಿಲ್ಲೆಗಳಲ್ಲೂ ಇದೇ ರೀತಿಯಾಗಿ ಪಾನನಿರೋಧ ಜಾರಿಗೆ ಬರುತ್ತೆಂದು ತಿಳಿದಿದ್ದೆ. ಮುಖ್ಯಮಂತ್ರಿಗಳು ಹೇಳಿದರು, ಸ್ವಲ್ಪ ಒಂದು ಹೆಜ್ಜೆ ನಿಂತು ಆಮೇಲೆ ಮುಂದೆಹೋಗಬೇಕೆಂದು. ಆದರೆ ಕಬ್ಬಿಣವನ್ನು ಅದು ಕಾದಾಗಲೇ ಬಡಿಯಬೇಕು, ಆರಿದರೆ ಕಷ್ಟವಾಗುತ್ತದೆ ಎಂಬುದು ನನ್ನ ಅಭಿಪ್ರಾಯ. ಆದ್ದರಿಂದ ಸರ್ಕಾರದವರು ಇದೇ ವೇಗದಲ್ಲಿ ಇನ್ನುಳಿದಿರುವ ನಾಲ್ಕು ಜಿಲ್ಲೆಗಳಲ್ಲೂ ಪಾನ ನಿರೋಧ ಜಾರಿಗೆ ತರಬೇಕು. ಅದರಿಂದ ಹಣಕಾಸಿನ ಕಷ್ಟವಾದರೂ ಚಿಂತೆಯಿಲ್ಲ. ವರ್ಷಕ್ಕೆ 2 ಜಿಲ್ಲೆಯಂತೆ ಪೂರ್ತಿಯಾಗಿ ಮಾಡಬೇಕು ಎಂದು ಒತ್ತಾಯಪೂರ್ವಕವಾಗಿ ಪ್ರಾರ್ಥನೆ ಮಾಡುತ್ತೇನೆ. 'ನಾನು ನನ್ನ ಜೀವಮಾನ ಕಾಲದಲ್ಲಿ ಏನನ್ನು ಮಾಡದಿದ್ದರೂ ಇದನ್ನಾದರೂ ಪೂರ್ತಿಯಾಗಿ ಮಾಡುತ್ತೇನೆ' ಎಂದು ಶ್ರೀ ರಾಜಗೋಪಾಲಚಾರ್‌ರವರು ಹೇಳಿದ್ದ ವಿಚಾರವನ್ನು ನಾನು ಹಿಂದೆಯೇ ಕೇಳಿದ್ದೆ. ಸರ್ಕಾರದವರು ಅದಕ್ಕೆ ಬೆಂಬಲ ಕೊಡಬೇಕೆಂದು ಈ ಸಮಯದಲ್ಲಿ ಜ್ಞಾಪಕಕ್ಕೆ ತರುತ್ತೇನೆ.

ಆಮೇಲೆ ಗೋವಧೆ ನಿರೋಧದ ವಿಚಾರ ತೆಗೆದುಕೊಂಡರೆ ಹಿಂದೆ ನಾನು ಪ್ರಜಾಪ್ರತಿನಿಧಿ ಸಭೆಯಲ್ಲಿ ಸದಸ್ಯನಾಗಿದ್ದಾಗ ಗೋವಧೆಯನ್ನು ನಿಲ್ಲಿಸಬೇಕೆಂದು ಕೂಗಿದ್ದವರ ಪೈಕಿ ನಾನೂ ಒಬ್ಬ. ಸರ್ಕಾರದವರು ದೊಡ್ಡ ಮನಸ್ಸುಮಾಡಿ ನಮ್ಮ ಮಾದರಿ ಮೈಸೂರಿನಲ್ಲಿ, ರಾಮರಾಜ್ಯದಲ್ಲಿ ಇದು ಇರಬಾರದು ಎಂದು ಬಹಳ ಮಂದಿ ಸವರ್ಣ ಹಿಂದೂ ಮಹನೀಯರ ಒತ್ತಾಯವನ್ನೂ ಸಹ ಮನಸ್ಸಿನಲ್ಲಿಟ್ಟುಕೊಂಡು ಕಾನೂನನ್ನು ಜಾರಿಗೆ ತರುವಂತೆ ಮಾಡಿದರು. ಆದರೆ ಇಷ್ಟು ಮಾಡಿದರೂ ಇನ್ನೂ ಅಷ್ಟು ಫಲಕಾರಿಯಾಗಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಏಕೆಂದರೆ, 1948-49ನೆಯ ಸಾಲಿನಲ್ಲಿ ಅಧಿಕೃತ ವರದಿ ಬಂದಿರುವುದನ್ನು ನೋಡಿದರೆ 176 ಕೇಸುಗಳಾಗಿ 4,016 ರೂಪಾಯಿಗಳು ಜುಲ್ಮಾನೆ ರೂಪದಲ್ಲಿ ಸರ್ಕಾರಕ್ಕೆ ಬಂದಿದೆಯೆಂದು ಮತ್ತು 76 ಜೈಲಿನಲ್ಲಿದ್ದರೆಂದು ಗೊತ್ತಾಗುತ್ತದೆ. ಇಷ್ಟೇ ಅಲ್ಲದೆ ಇನ್ನೂ ಅನೇಕ ಕಡೆ ಕಾಣನಂತೆಯಿರುವಹಾಗೆ ಈ ಗೋವಧೆ ನಡೆಯುತ್ತಿದೆಯೆಂದು ಕಂಡುಬಂದಿದೆ. ಆ ಕಡೆ ಸರ್ಕಾರದವರು ಮನಸ್ಸು ಕೊಟ್ಟಿಲ್ಲ, ಪೋಲೀಸಿನವರು ಹೆಚ್ಚು ನಿಗಾ ಕೊಟ್ಟಿಲ್ಲ ಎಂದು ಮನವಿ ಮಾಡಿಕೊಳ್ಳಬೇಕಾಗಿದೆ.

ಮತ್ತೊಂದು ವಿಷಾದ ವಿಚಾರ. ಈ ಗೋಹತ್ಯ ನಮ್ಮ ಭಾರತದೇಶದಲ್ಲಿ ನಡೆಯುತ್ತಿದೆ. ಯಾವ ದೇಶದಲ್ಲಿ ಶಾಂತಮೂರ್ತಿ ಅಶೋಕನ ಧ್ವಜವು ಹಾರಾಡುತ್ತಿದೆಯೋ ಅಲ್ಲಿ ಈ ಕೆಲಸ ನಡೆಯಬಾರದು. ಅಲ್ಲದೆ ಹೊರದೇಶದಿಂದ ಗೋಮಾಂಸವನ್ನು ಮೈಸೂರು ದೇಶಕ್ಕೆ ತಂದು ಮಾರಾಟ ಮಾಡಬಹುದೆಂದು ಸರ್ಕಾರದವರು ಆಜ್ಞೆಮಾಡಿದ್ದಾರೆಂದು ಬಹಳ ವಿಷಾದದಿಂದ ಹೇಳುತ್ತೇನೆ. ಇದಲ್ಲದೆ ಈ ಅವಕಾಶ ಕೊಟ್ಟರೆ ಅವರಿಗಿಂತ ಇಲ್ಲಿನವರೇ ಹೆಚ್ಚು ಗೋವುಗಳನ್ನು ಕೊಂದು ಕಾನೂನು ಭಂಗ ಮಾಡುವುದಕ್ಕೆ ಹೆಚ್ಚು ಅವಕಾಶವಾ

ಗುತ್ತದೆ, ಇದರಿಂದ ಈ ಕಾನೂನಿಗೆ ಬೆಂಬಲ ಸಿಕ್ಕುವುದಿಲ್ಲ ಎಂದು ಹೇಳುತ್ತೇನೆ.

ಹರಿಜನ ದೇವಾಲಯ ಪ್ರವೇಶದ ವಿಚಾರದಲ್ಲಿ ಒಂದೆರಡು ಮಾತು ಹೇಳುತ್ತೇನೆ. ಮೊನ್ನೆ ಮಾನ್ಯ ಸಚಿವರೊಬ್ಬರು ಶ್ರವಣಬೆಳಗೊಳಕ್ಕೆ ದಯಮಾಡಿಸಿದ್ದಾಗ, ಅವರಿಗೆ ಈ ವಿಚಾರ ಗೊತ್ತಿದೆ. ಈ ರೀತಿ ಒಂದು ಅಡ್ಡಿ ಇರುವುದು ನಮ್ಮ ಹಿಂದೂ ಸಮಾಜಕ್ಕೆ ಒಂದು ಕಳಂಕವೆಂದು ನಾನು ಬೇರೆ ಹೇಳಬೇಕಾದ್ದಿಲ್ಲ. ತಿರುವಾಂಕೂರಿನಲ್ಲಿ ಹರಿಜನ ದೇವಾಲಯ ಪ್ರವೇಶ ಕಾನೂನು ಜಾರಿಗೆ ಬಂದಿರುವಾಗ ನಮ್ಮ ಮೈಸೂರು ಮಾದರಿ ರಾಜ್ಯದಲ್ಲಿ, ರಾಮರಾಜ್ಯದಲ್ಲಿ ಏಕೆ ಹೀಗೆ ಮಾಡಲಿಲ್ಲವೆಂದು ವ್ಯಥೆಯಾಯಿತು. ಆಗ,—

"ಮಾದರಿಯ ಮೈಸೂರು ಹರಿಜನಗಳೇಳ್ಗೆಯೊಳು
ಮಾದರಿಯ ದಾತ್ಮಾವ ನಾಡಿನೊಳಗಿಲ್ಲ
ಆದರೇಂ ಹರಿಜನರ ದೇಗುಲ ಪ್ರವೇಶದೊಳು
ಮಾದರಿಯ ಮೈಸೂರು ತೋರಲಿಲ್ಲವಲ್ಲಾ
ಅಯ್ಯಯ್ಯೊ ಬರೋಡ ಕಾಶ್ಮಿರಯಿಂದೂರುಗಳು
ಶೀಲತಿರುವಾಂಕೂರು ಮುಂದಾದುವೆಲ್ಲ
ಹಾಸನ ಮೈಸೂರು ಹಿಂದಾಯಿತಲ್ಲ"

ಆ ಮೇಲೆ ಇಲ್ಲಿಯೂ ಕಾನೂನು ಮಾಡಿದರು, ಹರಿಜನರನ್ನು ಒಳಗೆ ಬಿಡಬೇಕೆಂದು ಮಾಡಿದರು. ನನ್ನ ವ್ಯಥೆ ಕಡಿಮೆಯಾಯಿತು. ಆದರೆ ಜೈನರ ದೇವಸ್ಥಾನಗಳಿಗೆ ಪ್ರವೇಶವಿಲ್ಲವೆಂದಾಯಿತು. ಹಿಂದೆ 1940ರಲ್ಲಿ ಮಹಾಮಸ್ತಕಾಭಿಷೇಕ ನಡೆದ ಕಾಲದಲ್ಲಿ ನಾನು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರಾಗಿದ್ದೆ. ಶ್ರವಣಬೆಳಗೊಳದಲ್ಲಿ ಒಂದು ಮೀಟಿಂಗ್ ಇಟ್ಟುಕೊಂಡರು. ಅಲ್ಲಿಗೆ ಮಹಾರಾಜರು ಬಂದಿದ್ದರು. ಮಹಾರಾಜರ ಜೊತೆಯಲ್ಲಿ ನಾನು ಬೆಟ್ಟದ ಮೇಲಕ್ಕೆ ಹೋಗುತ್ತೇನೆಂದು ಬಹಳ ಆಸೆಯಿಂದಿದ್ದೆ. ಆದರೆ, ಡಿಸ್ಟ್ರಿಕ್ಟ್ ಬೋರ್ಡ್ ಸದಸ್ಯರೆಲ್ಲರಿಗೂ ಮಹಾರಾಜರ ಸಂಗಡ ಬೆಟ್ಟದ ಮೇಲಕ್ಕೆ ಹೋಗುವುದಕ್ಕೆ ಅವಕಾಶ ದೊರಕಿದರೂ ನನಗೆ ಮಾತ್ರ ಆ ಅವಕಾಶ ಸಿಕ್ಕಲಿಲ್ಲ. ಆಗ ಬಹಳ ವಿಷಾದಪಟ್ಟೆ. ಮೊನ್ನೆ ಹಾಸನದ ಕಾಲೇಜು ಹುಡುಗರು ಕೆಲವರು ಶ್ರವಣಬೆಳಗೊಳದ ಬೆಟ್ಟದ ಮೇಲಕ್ಕೆ ಹೋದಾಗ ಹರಿಜನರ ಹುಡುಗರನ್ನು ಕೆಳಗಿಳಿಸಿದರೆಂದು ವರ್ತಮಾನವನ್ನು ಪತ್ರಿಕೆಗಳಲ್ಲಿ ಓದಿದೆ. ಒಂದು ದೇವಾಲಯ ಪ್ರವೇಶ ತಿದ್ದುಪಡಿ ಕಾನೂನನ್ನು ಕಳೆದ ಅಸೆಂಬ್ಲಿಯಲ್ಲಿ ಒಮ್ಮತದಿಂದ ಮಾನ್ಯ ಸದಸ್ಯರು ಬೆಂಬಲ ಕೊಟ್ಟು ಬಿಲ್ಲನ್ನು ಪಾಸ್ ಮಾಡಿ ಅಂಗೀಕರಿಸಿದರು. ಅದು ನ್ಯಾಯವಿಧಾಯಕ ಸಭೆಗೆ ಬರಬೇಕಾಗಿತ್ತು, ಆದರೆ ಅಷ್ಟರಲ್ಲೇ ಆ ಸಭೆಯು ರದ್ದಾಯಿತು. ಈಗ ಬರುತ್ತೆಂದು ತಿಳಿದಿದ್ದೆ. ಮುಂದಿನ ಅಧಿವೇಶನದಲ್ಲಿ ಬರುತ್ತೆಂದು ನನ್ನ ಮಾನ್ಯ ಸದಸ್ಯರನೇಕರು ಹೇಳಿದರು, ಕಾಯುತ್ತಿದ್ದೇನೆ. ಫೆಬ್ರವರಿ ತಿಂಗಳಲ್ಲಿ ಒಂದು ಸಾವಿರಜನರು ಸೇರಿ ನನ್ನ ಮುಖಂಡತ್ವದಲ್ಲಿ ಶ್ರವಣಬೆಳಗೊಳದ ಬೆಟ್ಟಕ್ಕೆ ಹೋಗಬೇಕೆಂದಿದ್ದರು. ಮಾನ್ಯ ಮಂತ್ರಿಗಳಾದ ಶ್ರೀ ಸಿದ್ದಯ್ಯನವರು ಸ್ವಲ್ಪ ನಿಧಾನ ಮಾಡಿ ಎಂದು ಹೇಳಿದ ಮೇಲೆ ಸುಮ್ಮನಾಗಿ ಕಾನೂನು ಆದಮೇಲೆ ಹೋಗಲು ಯೋಚನೆ ಮಾಡಿದ್ದೇವೆ.

ಮಿರಾಸೆ ಸಮಿತಿಯವರ ಶಿಫಾರಸಿನಂತೆ ತೋಟಿ ತಳವಾರರಿಗೆ ಮೊದಲಿಂದ ಇದು ಇದೆಯೆಂದು ಈಗ ಗೊತ್ತಾಯಿತು. ಈಗ ಎಲ್ಲೋ ಒಂದು ಊರಿನಲ್ಲಿ ತಿಳಿಯಬಂದಿತು. ಈ ವಿಚಾರ ಎಲ್ಲಿಯೂ ಗೊತ್ತೇ ಇರಲಿಲ್ಲ. ಕಳೆದ 2-3 ವರ್ಷದಿಂದ ಪಟೇಲರು ಶ್ಯಾನುಭೋಗರಿಗೆ ಶೇಕಡಾ 25ರಷ್ಟು ಪೋಟಿಗೆ ಹೆಚ್ಚುಮಾಡಿದರು. ನಾವು ಅಸೆಂಬ್ಲಿಯಲ್ಲಿ 31 ಜನ ಸದಸ್ಯರು ನ್ಯಾಯವಿಧಾಯಕ ಸಭೆಯಲ್ಲಿ 4 ಜನರೂ ಇದ್ದೆವು ನಮ್ಮ ಕೂಗು ಸರ್ಕಾರಕ್ಕೆ ಮುಟ್ಟುತ್ತಿತ್ತು. ತೋಟಿ ತಳವಾರರಿಗೆ ಏನಾದರೂ ಕೊಡಬಾರದಾಗಿತ್ತೆ. ಮಿರಾಸೆ ಎಂಬುದು ನಿಜವಾಗಿಯೂ ನಿರಾಶೆಯಾಗಿದೆ. ನಾನು ಕಂಡ ಹಾಗೆ ಕ್ಲೋಸ್‌ಪೇಟೆ ತಾಲ್ಲೂಕಿನಲ್ಲಿ ಕುಂಬಾರ ದೊಡ್ಡಿ ಎಂಬ ಹಳ್ಳಿಯಲ್ಲಿ ಮಾತ್ರ ಮಿರಾಸೆ ಸರಿಯಾಗಿ ಕೊಡುತ್ತಾರೆಂದು ಗೊತ್ತಾಯಿತು. ಅನೇಕ ಕಡೆ ಕೊಡುವುದೇ ಇಲ್ಲ. ಕಾನೂನು ಮಾಡಿ ಮೂರು ವರ್ಷದವರೆಗೆ ಕೇಸು ಹಾಕಬಹುದೆಂದೇನೋ ಮಾಡಿದ್ದಾರೆ, ಆದರೆ ಆ ಬಡವರಿಗೆ ಕೇಸು ಹಾಕಲು ತಾಖತ್ತಿದೆಯೊ ಇಲ್ಲವೋ ಗೊತ್ತಿಲ್ಲ. ಆದಕಾರಣ ಮದ್ರಾಸ್ ಪ್ರಾಂತದಲ್ಲಿ ಕೊಡುವಂತೆ ತಿಂಗಳ ಸಂಬಳ ಸಾರಿಗೆ ಕೊಡಲು ಏರ್ಪಾಡು ಮಾಡಿದರೆ ಅನುಕೂಲ. ಲ್ಯಾಂಡ್ ರೆವೆನ್ಯೂ ರಿವಿಜನ್ ಕಮಿಟಿಯವರು ಶಿಫಾರಸು ಮಾಡಿರುವ ಹಾಗೆ ಶಾನುಭೋಗರಿಗೆ, ಪಟೇಲರಿಗೆ ಕೊಡುವಂತೆ ತೋಟಿ ತಳವಾರರಿಗೂ ಇದುವರೆಗೂ ಇದ್ದ ಇನಾಮ್ತಿ ಜಮೀನನ್ನು ಅವರ ಹೆಸರಿಗೆ ಖಾತ ಮಾಡಿಕೊಡುವುದಲ್ಲದೆ, ಅವರಿಗೆ ಸಂಬಳ ಸಾರಿಗೆ ಕೊಡಬೇಕೆಂದು ಕೇಳುತ್ತೇನೆ.

ನೌಕರಿಗಳ ವಿಷಯ ಪ್ರಸ್ತಾಪಮಾಡಬೇಕಾಗಿದೆ. ನಮಗೆ ಸರಿಯಾಗಿ ಸರ್ಕಾರಿ ನೌಕರಿಗಳು ಸಿಕ್ಕುತ್ತಿಲ್ಲ. ಜನಸಂಖ್ಯೆಗನುಗುಣವಾಗಿ ಸುಮಾರು ಮೂರು ನಾಲ್ಕು ವರ್ಷಗಳಿಂದ ನಮ್ಮ ಹರಿಜನರ ಪೈಕಿ ಒಬ್ಬರು ಬಿ. ಎಸ್‌ಸಿ., ಬಿ.ಇ., ಮಾಡಿದವರಿದ್ದಾರೆ, ಅವರನ್ನು ಅಸಿಸ್ಟೆಂಟ್ ಇಂಜಿನಿಯರಾಗಿ ತೆಗೆದುಕೊಳ್ಳಿ ಎಂದು ಸರ್ಕಾರದವರನ್ನು ಪ್ರಾರ್ಥನೆಮಾಡುತ್ತಿದ್ದರೂ ಅವರಿಗೆ ಕರುಣೆ ಬರಲಿಲ್ಲ. ತಾವು ಡೆಲ್ಲಿಗೆ ಹೋದಾಗ ಹರಿಜನರ ಪೈಕಿ ಎಷ್ಟು ಮಂದಿ ಡೆಪ್ಯುಟಿ ಕಮಿಷನರು ನಿಮ್ಮ ಮೈಸೂರಿನಲ್ಲಿದ್ದಾರೆಂದು ಕೇಳಿದರೆ ಏನು ಹೇಳುತ್ತೀರೆಂದು ಒಬ್ಬ ಮಂತ್ರಿಗಳನ್ನು ಕೇಳಿದೆ. ಅದಕ್ಕೆ ಅವರು ಮಂತ್ರಿಗಳೇ ಒಬ್ಬರಿದ್ದಾರೆ, ಡೆಪ್ಯುಟಿ ಕಮಿಷನರ ವಿಚಾರವೇಕೆ ಎಂದು ಹೇಳುತ್ತೇನೆಂದು ಹೇಳಿದರಲ್ಲ ಇದುವರೆಗೆ ಒಬ್ಬರೂ ಹರಿಜನ ಡೆಪ್ಯುಟಿ ಕಮಿಷನರಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ.

ಮೊನ್ನೆ ಸರ್ಕಾರದವರು ನಮ್ಮ ಪೈಕಿ ಒಬ್ಬರನ್ನು ಅಮೆರಿಕಾಕ್ಕೆ ಕಳುಹಿಸಿದರು, ಇನ್ನೊಬ್ಬರು ತಮ್ಮ ಪರೀಕ್ಷೆಯನ್ನು ಮುಗಿಸಿಕೊಂಡು ಬಂದರು. ಆರು ತಿಂಗಳಾದರೂ ಅವರಿಗೆ ಸಂಬಳವಿಲ್ಲ. ಸರ್ಕಾರದವರನ್ನು ಎಷ್ಟು ಪ್ರಾರ್ಥಿಸಿದರೂ ಅವರಿಗೆ ಸರಿಯಾದ ನೌಕರಿಯನ್ನು ಕೊಟ್ಟಿಲ್ಲ.

ಶ್ರೀ ಟಿ. ಮರಿಯಪ್ಪನವರು.—ಹಿಂದೆ ಯಾವ ನೌಕರಿಯಲ್ಲಿದ್ದರೋ ಅದಕ್ಕಿಂತ ಮೇಲಿನ ನೌಕರಿ ಕೇಳುತ್ತಿದ್ದಾರೆ. ಹಿಂದಿದ್ದ ನೌಕರಿಯನ್ನು ಅವರಿಗೆ ಕೊಡಲು ಸರ್ಕಾರದವರು ಸಿದ್ಧರಾಗಿದ್ದಾರೆ.

ಶ್ರೀ ಗೋವಿಂದದಾಸ್‌ರವರು.—ವಿದ್ಯಾಭ್ಯಾಸದ ವಿಚಾರ. ಸರ್ಕಾರದವರು ಹರಿಜನರ ವಿದ್ಯಾರ್ಥಿಗಳಿಗೆ ಉಚಿತಬೋರ್ಡಿಂಗ್ ಹೋಮುಗಳನ್ನು ಕೊಟ್ಟಿದ್ದಾರೆ. ಅನೇಕರಿಗೆ ವರ್ಷ ವರ್ಷವೂ ಸ್ಥಳ ಸಿಕ್ಕುತ್ತಿಲ್ಲ. ಹಾಸನದಲ್ಲಿ ಇಂಟರ್ ಕಾಲೇಜಿನಲ್ಲಿ ಆರೇಳು ಜನ ಹುಡುಗರು ಓದುತ್ತಿದ್ದಾರೆ. ಅವರಿಗಿರುವ ತೊಂದರೆಯನ್ನು ಕಣ್ಣಾರೆ ನೋಡಿದ್ದೇನೆ. ಕಾಲೇಜು ವಿದ್ಯಾರ್ಥಿಗಳಿಗೆ ಕೊಡುವ 100 ರೂಪಾಯಿ ವೇತನ ಸಾಲದೇ ಅವರ ವಿದ್ಯಾಭ್ಯಾಸಕ್ಕೆ ತೊಂದರೆಯಾಗಿದೆ. ಇದನ್ನು 150 ಅಥವಾ 200 ರೂಪಾಯಿಯಾದರೂ ಕೊಟ್ಟರೆ ಅವರ ವ್ಯಾಸಂಗಕ್ಕೆ ಅನುಕೂಲವಾಗು

ತ್ತದೆ. ಬೋರ್ಡಿಂಗ್ ಹೋಮುಗಳಲ್ಲಿ ಹೆಚ್ಚು ಬಾಲಕರಿಗೆ ಅವಕಾಶ ಮಾಡಬೇಕು.

ಮತ್ತೊಂದು ವಿಚಾರ ಮೈಸೂರು ದೇಶದಲ್ಲಿ ಸ್ತ್ರೀಯರ ವಿದ್ಯಾಭ್ಯಾಸ ಅಗತ್ಯವಾಗಿದೆ. ಆದರೆ ನಮ್ಮ ಸ್ತ್ರೀಯರಿಗೆ ಒಂದು ಉಚಿತ ಬೋರ್ಡಿಂಗ್ ಹೋಮು ಮಾತ್ರ ಇದೆ. ಬಹುದಿನಗಳಿಂದ ಇದು ಸಾಲವೆಂದು ಹೇಳುತ್ತಿದ್ದೇನೆ. ಹಾಸನದಲ್ಲಿ ಒಂದು ಬಾಲಕಿಯರ ಫ್ರೀಬೋರ್ಡಿಂಗ್‌ಹೋಂ ಮಾಡಬೇಕೆಂದು ಅನೇಕ ಸಾರಿ ಸೂಚಿಸಿದ್ದೇನೆ. ಯಾವಾಗ ವಿದ್ಯಾವಂತರಾದರೋ ಆಗ ವಿದ್ಯಾವತಿಯರನ್ನೇ ಲಗ್ನ ಮಾಡಿಕೊಳ್ಳಬೇಕೆಂಬ ಆಸೆ ಹುಟ್ಟುತ್ತದೆ. ಆದಕಾರಣ ಪ್ರೋತ್ಸಾಹ ಕೊಡಬೇಕು. ಹಾಸನಜಿಲ್ಲೆಯಲ್ಲಿ ಹರಿಜನರು ಮನೆ ಕಟ್ಟಿಕೊಳ್ಳಲು 300 ರೂಪಾಯಿವರೆಗೆ ಕೊಡಬೇಕೆಂದು ಮಾಡಿದ್ದಾರೆ. ಮೈದಾನದವರು ಕೋಪಮಾಡಿಕೊಳ್ಳಬಾರದು. ನಾನು ಮಲೆನಾಡು ಪ್ರತಿನಿಧಿ, ಮಲೆನಾಡಿನಲ್ಲಿ ಮನೆ ಕಟ್ಟಲು ಹೆಚ್ಚು ಖರ್ಚು. ಆದಕಾರಣ ಮಲೆನಾಡಿನ ಹರಿಜನರಿಗೆ ಮನೆ ಕಟ್ಟಲು 400 ರೂಪಾಯಿ ಆದರೂ ಕೊಡಬೇಕು.

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಮೈದಾನ ಪ್ರದೇಶದಲ್ಲಿ 300 ರೂಪಾಯಿ ಮಲೆನಾಡಿನಲ್ಲಿ 400 ರೂಪಾಯಿ ಈಗಲೂ ಕೊಡುತ್ತೇವೆ.

ಶ್ರೀ ಗೋವಿಂದದಾಸ್‌ರವರು.—ಕಂಪೋಸ್ಟ್ ಗೊಬ್ಬರದ ವಿಚಾರ ಇನ್ಸ್‌ಪೆಕ್ಟರು ಹಳ್ಳಿಗಳಿಗೆ ಬಂದು ಕೆಲಸ ಮಾಡುವಂತೆ ಕಾಣಲಿಲ್ಲ. ಕಾಂಪೋಸ್ಟಿನಿಂದ ಬಹಳ ಪ್ರಯೋಜನವಿದೆ. ನಾನು ಅನೇಕ ಊರುಗಳಿಗೆ ಹೋದಾಗ ಹಳ್ಳಿಯವರಿಗೆ ಈ ವಿಷಯ ಮಂದಟ್ಟಾಗುವಂತೆ ಹೇಳಿದ್ದೇನೆ. ಇದರಿಂದ ಪ್ರತಿಫಲವನ್ನು ಹೊಂದಿದ್ದಾರೆ. ಈ ಗೊಬ್ಬರದಿಂದ ರೈತರಿಗೆ ಬಹಳ ಪ್ರಯೋಜನವುಂಟು. ಹೆಚ್ಚು ಪ್ರಮಾಣದಲ್ಲಿ ಮಾಡಿದರೆ ಬೆಳೆ ಹೆಚ್ಚು ಬೆಳೆಯಲು ಅನುಕೂಲವಾಗುತ್ತದೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Sri V. M. MASCARENHAS (Bangalore Retroceded Area—General).—Mr. Speaker, I rise to congratulate the Hon'ble the Finance Minister on the Budget he has presented before the House in so able a manner. In the present circumstances and considering the conditions through which we are passing, I am afraid, nothing better could have been done. The Budget has a close association with the financial integration. In this connection I am gratified to see that the Hon'ble Minister has done his best to safeguard the interests of the State and to see that in the agreement that has been drawn the interests of Mysore are perfectly safe and finally we stand to gain more than to lose. I think our grateful thanks are due to him.

As a result of this financial integration the revenues of our State at one stroke get reduced by Rs. 325 lakhs. It therefore becomes incumbent on him to see that new sources of revenue are tapped and also to see that economy in every shape and in every direction is effected to safeguard the finances of the State.

I now come to the Budget itself. My first observation on it is that we have had no fresh taxation though at the same time I regret that there has not been much relief from taxation. Anyway I think he has done his best. But I would have perhaps been happy if on the Sales Tax question he had dropped the multi-point collection and always taken Sales Tax at source. I shall be very grateful to him if he will only bear this in mind in the future.

Now I come to the more salient points of the Budget itself.

Sri H. C. DASAPPA.—Would the Honourable Member indicate the rate ?

Sri V. M. MASCARENHAS.—I do not mind if the Government increase it by half anna per rupee. But if they tap at source I can assure him that there will be—if I can use the word which has been used so often in this House,—no black-marketing in the Sales Tax. I can definitely tell the Hon'ble the Finance Minister that a number of transactions are taking place without vouchers and without any kind of record and the Government are standing to lose thousands of rupees almost every day.

After a careful study of the Budget one cannot but feel happy that in spite of this financial stringency, Government have spared no pains to allot fairly generous grants to development departments and particularly to the "Grow More Food" campaign. His Highness the Maharaja in his opening Address told us how important this problem is not only for us but for the whole of India. I am glad that the Government have recognised this and are sparing no pains to make the State self-sufficient by the end of 1950-51. I may request them to redouble their efforts and to see that we in Mysore shall have sufficient rice and sufficient grains and perhaps go back to the sixteen-ounce diet instead of the eight-ounce one specially for the urban population.

Large sums of money are also being spent on rural development. I think this is but right in the fitness of things

India is primarily an agricultural country and in the resuscitation of village life lies the future happiness of this great land. All the money spent on villages—I will add,—wisely will mean more life in villages which will directly and indirectly reflect on the finances of the State and on its general welfare and progress. (Hear, hear). My Hon'ble friend Sri Bhashyam is unfortunately not here.

Sri H. C. DASAPPA.—We are all here.

Sri V. M. MASCARENHAS.—I was happy, when he spoke last week on the working of the Electrical Department in answer to some questions, to see that the programme of the Electrical Department is going according to plan and the department is not only sure of reaching the goal of 125,000 kilowatts by March 1951 but also it has tried to introduce irrigation pumping sets in large numbers all over the State. I might however give one suggestion. Pumping sets are pieces of machinery and generally perfectly strange things specially in villages. I know at least what it means. Villagers are not able to run these pumps efficiently. So I would suggest that the Electrical Department, if it really means that the best result has to be obtained from the pumping sets, will keep one Inspector for every twenty or thirty pumping sets to go about and see that these pumping sets are working in perfect condition every day in the year. Then alone will the results be worth the trouble and cost. (*Sri M. V. Krishnappa—There are Inspectors*) Another thing that the Electrical Department could do is, as some of my friends have already pointed out, to instal heating units as far as possible, to save fuel in the country. We see the sad spectacle all along the routes of trees ruthlessly cut down to supply fuel to big cities. This could be stopped if electricity which is in abundance in the State could be made more popular, and the bigger consumers insisted upon to use only electricity and nothing else. It would mean a great saving of our natural wealth in the shape of forests or trees. Moreover it would mean to housewives far more convenient mode of cooking.

I just want to make one passing remark on Prohibition. I know it is a controversial subject. I cannot but admire the Government at the realistic attitude they have taken in shelving this question for some more time to come.

T. MARIAPPA.—We are not shelving it but allowing it to consolidate.

Sri V. M. MASCARENHAS.—You do not say immediate.

Janab J. MAHOMED IMAM.—It is a sugar-quoted pill.

Sri V. M. MASCARENHAS.—Industries, which mean so much to a State like ours, thanks to the wise industrial policy carried on by a series of Dewans notably Sir M. Visvesvaraya and Sir Mirza Ismail, Mysore, have attained pre-eminence in the industrial field which has won recognition far and wide. The State has been able to establish industries, some big and some small. Progress in the future will naturally have to be under three directions; firstly, consolidation and expansion of the existing ones, secondly, starting of new industries and thirdly, cottage industries. In my opinion, Sir, the first is the most important being the most feasible. Industries have been started and have been running. It is but right for us to ask, are they doing their best; have they reached their production peaks; are they being managed efficiently? It is but the duty of the Government, whether the industry be State-owned, State-aided or a private industry, to ask how successfully an industry in this State is being run. It is possible in some cases it is mismanagement; in some cases, non-availability of raw materials and other auxiliaries; in some cases, want of finance. But the Government, if they are aware of the real shortcomings of any industry, would come into the picture and render what help they could. I consider, Sir, that industries that have been already existing and are running in the State are like birds in the hands. The new industries are like birds in the bush. You may catch them or may not.

Coming to the new industries, I must sound perhaps a word of caution specially in industries where heavy

capital outlays are involved. At a juncture like this, when capital costs have gone up tremendously high, when other materials and erection costs are twice as much as what they were ten years ago......(*Voice: Four times or five times*)—all right so much the better for me—an industry by the time it is established would mean a capital outlay which judged by its results may not be commensurate with the cost. Heavy depreciations which will be a burden on industries all their life, labour problems which day by day are on the increaae and are getting more and more acute, make the starting of new industries really a problem to any one. I do not mean thereby—I want to assure the Hon'ble Minister for Industries—that I am not in favour of starting new industries at all. I will only say that a very, very careful inspection, a very, very careful scrutiny is needed before industries are started. Reports of manufacturers from foreign countries must be taken with a pinch of salt. (Hear, hear) They are like the arguments of a learned counsel, which look so convincing till the other side is heard.

There is a popular notion that with the starting of industries in a country all its ills are at an end, unemployment will vanish, and prosperity will ensue. I must point out that this statement is a half-truth. After all, considering the capital outlay of the industries in Mysore, which runs to the tune of a few crores of rupees, what is the number employed to-day? Is it more than two per cent of the entire population of the State? I am afraid, not. So, if my Hon'ble friends are thinking that by starting industries on a lavish scale, the employment question would be solved. I for one beg to differ. There are other ways to which we in Mysore could more profitably turn our attention and that perhaps brings me to the third point,—the cottage industries.

Cottage industries are a much simpler problem. They do not need a highly technical personnel to run them; they do not need much capital and what is more, they could be run in the very village in which the people are assembled and they can make the village self-sustained in at least the products they turn out. I would very much wish that the Government gives greater and greater attention to the cottage industries and sees that new life and vigour come back to the villages which have sunk into apathy and negligence and ignorance. In this connection, the pamphlet that is placed in our hands by Sir M. Visvesvaraya, really is good reading. I am sure the Government will spare no pains to make this activity of theirs a successful one and next year when the Budget is presented, we will perhaps see even tangible results.

In this connection, I am very happy to see that the Government is intending to bring a Bill before us, known as the Compost Bill. I do not know the details as to how it is to be worked up. I only know as a student of Chemistry what compost means. But if the manufacture of compost all over the State could be successfully attempted, no one will be happier than myself because tons and tons of God-given manure is now going down the drains, which if only conserved, perhaps, would remove the necessity of even starting chemical fertilisers in Bhadravati. What is our cattle wealth? What is the green foliage at our command? If all this could be made into compost, how much money could be saved and what is more, how much of our land could be richer because it is a definitely accepted fact now that compost manure is the best manure that could be put into the soil as compared with the artificial one? The artificial manure may give you immediate result but in the long run it emaciates the soil itself and brings thus untold misery to the country. Well, I have perhaps in a few words touched on the more cogent problems that confront us in the field of industry. My friends have spoken already on many other subjects and I perhaps will not take up your time in saying anything upon them.

In conclusion, I wish to state that a Government, however good and well-intentioned, will not achieve any result unless and until

it has had the willing and the whole-hearted co-operation of its machinery as well as that of the public. Let us not forget that we have our responsibilities and duties to perform towards the State and that each one of us must contribute our quota towards the welfare of our fellow-men, bearing in mind that our greatest happiness lies in serving our fellow-men and in trying to better their lot. If only we could work with this object, I am sure the greatness of this land would be assured and she would rise once again high in the comity of nations.

Thank you, Sir.

Mr. SPEAKER.—The House now stands adjourned to meet again at One of the Clock to-morrow.

The Assembly adjourned at Ten Minutes past Six of the Clock to meet again at One of the Clock the next day, Friday, 24*th March* 1950.

WD 1429—GPB—400—28-3-50